ಕೊಡಗಿನಲ್ಲಿ ಐದು ಮೈಲಿನ ದೂರದ (ಹೋಗಬರ 10 ಮೈಲಿ) ಒಳಗೆ ಗಾಡಿಗೆ ಮೈಲಿಗೆ 0-10-0 ಆಣೆಗಿಂತಲೂ, ಐದು ಮೈಲಿನ ಮೇಲ್ಪಟ್ಟ ದೂರಕ್ಕೆ 0-8-0 ಆಣೆಗಿಂತಲೂ ಗಾಡಬಾಡಿಗೆ ಮೀರಕೂಡದೆಂದು ನಿಯಂತ್ರಿಸಲಾಗಿದೆ.

ವೀರಾಜಪೇಟೆ ಹಿಂದೀ ಪ್ರಚಾರ ಸಭೆಯ ಸಹಾಯಾರ್ಥವಾಗಿ ತಾ. 26-1-45 ರಲ್ಲಿ ಇಲ್ಲಿಯ ಹೈಸ್ಕೂಲ್ ಹಾಲ್‌ನಲ್ಲಿ ಶ್ರೀ. ಪಿ. ಎಂ. ಸಾಣಯ್ಯ ಬಿ. ಎ., ಬಿ. ಎಲ್‌ರವರ ಅಧ್ಯಕ್ಷತೆಯಲ್ಲಿ ಎರಡು ಹಿಂದೀನಾಟಕಗಳು ಅಭಿನಯಿಸಲ್ಪಟ್ಟವು ಅಧ್ಯಕ್ಷರಾದ ಶ್ರೀ. ನಾರಾಯಣಯ್ಯನವರು ಮಾತಾಡುತ್ತಾ, 'ಹಿಂದಿಯು ಭರತಖಂಡದ ರಾಷ್ಟ್ರಭಾಷೆ. ಇದರ ಮೂಲಕವೇ ಹಿಂದೂದೇಶದ ಐಕ್ಯತೆ ಸಾಧ್ಯ. ಹಿಂದೂದೇಶದ ವ್ಯಾಪಾರದ ಉದ್ಧಾರಕ್ಕೆ, ಭರತಖಂಡದ ಉಜ್ವಲ ಭವಿಷ್ಯಕ್ಕೆ ಹಿಂದಿಯು ತಳಹದಿ. ಹಿಂದೀ ಕಲಿಯುವದು ಪ್ರತಿಯೊಬ್ಬನ ಧ್ಯೇಯವಾಗಿರಬೇಕು. ಹಿಂದೀ ಸಾಹಿತ್ಯ ಸಂಸ್ಕೃತಿ ಮಂದಿರದಲ್ಲಿ ನಾವೆಲ್ಲರೂ ಅರಾಧಕರಾಗುವಾ' ಎಂದರು.

ಭಾಗಮಂಡ್ಲದಲ್ಲಿ ಸಿಡುಬು ರೋಗ ತಗಲಿ ಬಹಳ ಜೋರಾಗಿದೆ. ಶಿವರಾತ್ರಿ ಸವಿೂಪಿಸಿದೆ. ದೇಶಕ್ಕೆಲ್ಲಾ ಹರಡದಂತೆ ಅಧಿಕಾರಿಗಳು ಎಚ್ಚರಿಕೆ ತೆಗೆಯಬೇಕು.

ಬೆಂಗಳೂರಿನಲ್ಲಿ ಮೇದರಿಗೆ ಸಿಡುಬು ರೋಗ ತಲೆದೋರಿದೆ. ಚೇರಂಬಾಣೆಯಲ್ಲೂ ಸಿಡುಬು ಇದೆ. ಕೋಪಟ್ಟಿ, ಬಾಡಗ, ಕೊಳಗದಾಳಿನಿಂದ ಬರುವ ಮಕ್ಕಳು ಆದೇ ದಾರಿಯಲ್ಲಿ ಬರುತ್ತಾರೆ. ಇವರಿಗೆ ಇನ್ನೂ ವೇಕ್ಸಿನೇಶನ್ ಮಾಡದಿರುವದು ಶೋಚನೀಯ. ಅಧಿಕಾರಿಗಳು ವಡ್ಡೆ ಇವರಿಗೆ ಡಾಕುಹಾಕಬೇಕು.

ತಾ. 20-1-45 ರಲ್ಲಿ ಬೆಂಗಳೂರಿನಲ್ಲಿ ನಡೆದ ಮೈಸೂರು ಒಲಿಂಪಿಕ್ ಸ್ಪೋರ್ಟ್ಸಿನ ಸ್ಟ್ರೀಯರ ಆಟಓಟಗಳಲ್ಲಿ 100 ಮೀಟರ್ ಓಟದಲ್ಲಿ ಬೆಂಗಳೂರು ಮಹಾರಾಣಿಕಾಲೇಜಿನ ಅಪ್ಪನೆರವಂಡ ಮಿಸ್. ಲಿಲ್ಲಿಕಾಳಪ್ಪ ಇವರು ಒಂದನೇಯವರಾಗಿಯೂ, ಮಿಸ್. ಅಲ್ಲಾರಂಡ ಎಂ. ಕಾವೇರಿಯವರು ಎರಡನೇಯವರಾಗಿಯೂ ಮಿಸ್. ಚಿಪ್ಪುಡಿರ ಮಿನ್ನಿಪೊನ್ನಪ್ಪನವರು ಮೂರನೇಯರಾಗಿಯೂ, ಉದ್ದ ಹಾರುವುದರಲ್ಲಿ ಮಿಸ್. ಅಲ್ಲಾರಂಡ ಎಂ. ಕಾವೇರಿಯವರು ಎರಡನೇಯವರಾಗಿಯೂ, ಮತ್ತು 'ಶಾಟ್‌ಪಟ್' 'ಡಿಸ್‌ಕಸ್' ಬೀಸಾಡುವುದು ಮತ್ತು 800 ಮೀಟರ್ ಸೈಕಲ್ ಬಿಡುವುದರಲ್ಲಿ ಮಿಸ್. ಸಿ. ವಿ. ಮೀನಾಕ್ಷಿಯವರು ಮೂರನೇಯವರಾಗಿಯೂ ಬಂದು ಬಹುಮಾನ ಪಡೆದಿರುವರು.

---

## ಪ್ರಕಟಣೆ.

**ಕೊಡಗು ಮುಜ್ರಾಯಿ ಇಲಾಖಾ ಕಮಿಟಿಯವರಿಂದ-**

ತಾ. 16-1-45ರಿಂದ 5 ವರ್ಷಗಳವರೆಗೆ ರಾ. ಸಾ. ಪಾಡಂಡ ಚಂಗಪ್ಪನವರ ಮತ್ತು ಶ್ರೀ ದೇವಲೆಪ್ಪಯವರ ಬದಲು ಮಡಿಕೇರಿಯಲ್ಲಿಯೂ, ಶ್ರೀ ಕೋದಾಂಡ ಮುದ್ದಪ್ಪನವರ ಬದಲು ವೀರಾಜಪೇಟೆಯಲ್ಲಿಯೂ, ಇಬ್ಬರು ಕೊಡಗರ ಮತ್ತು ಒಬ್ಬ ಕೊಡಗೇತರರ ಅಂತು ಮೂರು ಸ್ಥಳಗಳು ಖಾಲಿ ಬಿದ್ದಿವೆ. ಈ ಸ್ಥಳಗಳಿಗೆ ಚುನಾವಣೆಗೆ ನಿಲ್ಲುವ ಉಮೇದ್ವಾರರುಗಳು ತಮ್ಮ ಹೆಸರುಮತ್ತು ಯಾವ ಸ್ಥಳಕ್ಕೆ ನಿಲ್ಲುತ್ತೀವೆಂಬದನ್ನು ಮಡಿಕೇರಿ ಮುಜ್ರಾಯಿ ಇಲಾಖಾ ಆಫೀಸಿಗೆ ತಾ. 15-2-45ರ ಒಳಗೆ ತಲಪುವಂತೆ ಬರೆದು ಕಳುಹಿಸತಕ್ಕದ್ದು.

ಚುನಾವಣೆಯು ತಾ. 23-2-45ರಲ್ಲಿ ಮಧ್ಯಾಹ್ನ 12 ಗಂಟೆಯಿಂದ ಸಾಯಂಕಾಲ 5 ಗಂಟೆಯ ವರೆಗೆ ವೀರಾಜಪೇಟೆಯಲ್ಲಿ-ಅಡಿಕೆ ನಂಜಪ್ಪನವರ ಛತ್ರದಲ್ಲಿ ಟೆಲ್ಲರಾಗಿ ಕಮಿಟಿ ಮೆಂಬರು ಶ್ರೀ ಕೆ. ಕೆ. ಬೆಳ್ಯಪ್ಪನವರೂ, ದೇವಸ್ಥಾನದ ಮೇನೇಜರೂ, ಮಡಿಕೇರಿಯಲ್ಲಿ ತಾ. 23-2-45ರಲ್ಲಿ ದೇವಸ್ಥಾನದ ಹಾಲ್‌ನಲ್ಲಿ ಟೆಲ್ಲರಾಗಿ ಕಮಿಟಿ ಮೆಂಬರು ಶ್ರೀ ಯು. ಎಂ. ಮಾಚಯ್ಯನವರೂ, ದೇವಸ್ಥಾನದ ಮೇನೇಜರೂ, ಓಟ್ಸ್ ತೆಗೆಯುತ್ತಾರೆ. ಓಟರ ಪಟ್ಟಿಯಲ್ಲಿ ಹೆಸರು ದಾಖಲಿ ಈ ಮೊದಲೇ ಮಾಡಿಸಿಕೊಂಡವರೆಲ್ಲರೂ ಓಟು ಮಾಡಬಹುದು.

ಪಿ. ಎಂ. ಉತ್ತಪ್ಪ,
ವೈಸ್ ಪ್ರೆಸಿಡೆಂಟ್.

---

**ಅಖಿಲ ಕೊಡಗು ಜನ್ಮಳಿ ವ್ಯಾಪಾರಸ್ಥರ ಸಂಘ, ಮಡಿಕೇರಿ.**

## ಪ್ರಕಟಣೆ.

ಈ ಮೂಲಕ ವ್ಯಾಪಾರಸ್ಥರಿಗೆ ತಿಳಿಯಪಡಿಸುವದೇನೆಂದರೆ-

ನಾವು ತಾ. 20-12-44ರಲ್ಲು ಸ್ಥಳೀಯ ಟೆಕ್ಸ್‌ಟಾಯಿಲ್ ಕಮಿಶನರವರನ್ನು ಮಿಲ್ಲು ಬಟ್ಟೆ ಜಪ್ತಿ ಮಾಡುವುದನ್ನು ನಿಲ್ಲಿಸಿ ನಮಗೆ 1945ನೇ ಜೂನ್ ಅಖೈರು ವರೆಗೆ ಸಮಯ ಕೊಡಬೇಕೆಂದು ಕೇಳಿಕೊಂಡದ್ದಕ್ಕೆ ತೃಪ್ತಿಕರವಾದ ಜವಾಬು ಸಿಕ್ಕಲಿಲ್ಲ. ತಾ. 1-2-45ರಲ್ಲು ಸ್ಥಳೀಯ ಟೆಕ್ಸ್‌ಟಾಯಿಲ್ ಕಮಿಶನರ್ಸ್‌ರಲ್ಲಿ ಶ್ರೀ ಕೆ. ಎ. ಮಹ್ಮದ್‌ಗೌಸ್ ಮತ್ತು ಕೆ. ಕೆ. ತಿಮ್ಮಯ್ಯನವರು ಡೆಪ್ಯುಟೇಶನ್ ಹೋಗಿ ಪುನಹ ವ್ಯಾಪಾರಿಗಳ ಕಷ್ಟ ನಷ್ಟಗಳನ್ನು ಹೇಳಿಕೊಂಡ ಮೇರೆ ಜನವರಿ ಒಂದರಲ್ಲಿ ಜಪ್ತಿ ಮಾಡಿದ ಒಟ್ಟೆಯನ್ನು ಬಿಡಲು ತಕ್ಕ ಏರ್ಪಾಡು ಮಾಡುತ್ತೇನೆಂದು ಭರವಸೆ ಹೇಳಿರುವರು. ಮತ್ತು ಇನ್ನು ಮುಂದಕ್ಕೆ ಜಪ್ತಿ ಮಾಡುವದನ್ನು ನಿಲ್ಲಿಸಬೇಕೆಂದು ಕೇಳಿಕೊಂಡದ್ದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಆದುದರಿಂದ ವ್ಯಾಪಾರಿಗಳು ಆಯಾಯ ಕಿಂಗಳಿನಲ್ಲಿ ತೀರಿಸತಕ್ಕ ಮಿಲ್ಲು ಒಟ್ಟೆಗಳನ್ನು ಹೂರಿ ತೀರಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಕೆ. ಕೆ. ತಿಮ್ಮಯ್ಯ,
ಗೌ. ಕಾರ್ಯದರ್ಶಿ.

—೦೦—

# ಒಪ್ಪಂದ?

ರಷ್ಯಾಯದ ಮುನ್ನಡೆ ಬಹು ವೇಗವಾಗಿ ಸಾಗುತಿದೆ. ಎದುರು ಬಿದ್ದ ಜರ್ಮನರನ್ನು ಒತ್ತಿ ಹಿಡಿದು ಬಹು ಪೀರಾವೇಶದಿಂದ ಮುನ್ನುಗ್ಗುತ್ತಿದ್ದಾರೆ. ಮೊರ್ಡಲ್ ಝುಕೋರವರದ ಸೈನ್ಯವು ಮುಂದೊತ್ತಿ ಬರ್ಲಿನ್ ಪ್ರಾಂತದ ಬ್ರೆಂಡೆನ್ ಬರ್ಗ್ ಎಂಬಲ್ಲಿಗೆ ನುಗ್ಗಿದ್ದಾರೆ. ರಷ್ಯನರ ಮುನ್ನಡೆಯ ಕಾರಣ ಜರ್ಮನರ ಕಣ್ಣಿಗೆ ಮಬ್ಬು ಕವಿದಂತಾಗಿದೆ. ಜರ್ಮನ್ ರಣರಂಗದಲ್ಲಿ ಮೃತ್ಯುದೇವತೆಯ ರುದ್ರನಾಟಕವೇ ಪ್ರಾರಂಭವಾಗಿದೆ. ಅಭೇದ್ಯವೆಂದು ಕೀರ್ತಿಪಡೆದಿದ್ದ ಜರ್ಮನರನ್ನು ಮೊಟ್ಟಾಕ್ಕೋನಗರದಿಂದ ಹಿಮ್ಮೆಟ್ಟಿಸುತ್ತಾ ಬಂದು ಈಗ ಜರ್ಮನಿಯ ರಾಜಧಾನಿ ಬರ್ಲಿನಿನ ಮೇಲೆ ಧಾಳಿಮಾಡಲುಪಕ್ರವಿಸಿದ್ದಾರೆ. ಜರ್ಮನ್ ಲೇಬರ್ ಮಂತ್ರಿಗಳಾದ ರಾಬರ್ಟ್ ಲೆಯವರು ಈ ರೀತಿ ನುಡಿದಿದ್ದಾರೆ. 'ಯುದ್ಧವು ಬರ್ಲಿನ್ ಪ್ರಾಂತದ ಗಡಿಯೊಳಗೆ ಬಂದಿದೆ. ಬರ್ಲಿನ್ ನಗರವನ್ನು ವಾಸಿಗಳಿಗೆ ಎಚ್ಚರಿಕೆಕೊಡುವದೇನೆಂದರೆ ಬರ್ಲಿನನ್ನು ರಷ್ಯನರಿಗೆ ಬಿಟ್ಟುಕೊಡುವ ಪ್ರಸಂಗಬಂದರೂ ಬಂದೀತು. ಆದರೆ ಆ ಷ್ಟು ಸುಲಭದಲ್ಲಿ ಇವರಿಗದು. ಬರ್ಲಿನಿನ ಮುಂದೆ, ಬರ್ಲಿನಿನಲ್ಲಿ, ಬರ್ಲಿನಿನ ಹಿನ್ನೆಲೆಯಲ್ಲಿ ನಿಂತು ಕಾದಾಡಿರಿರಿ" ಈ ಮಾತುಗಳು ನಿಜವಾಗಿಯೂ ಜರ್ಮನ್ ಮಂತ್ರಿಯ ಮಾತುಗಳಾಗಿದ್ದರೆ ಜರ್ಮನಿಗೆ ಗಂಡಾಂತರ ಬಂದಿದೆಯೆಂಬುದು ಸ್ವಯಂವ್ಯಕ್ತವಾಗುತ್ತದೆ.

ಪಶ್ಚಿಮ ರಣರಂಗದಲ್ಲಿ ಜರ್ಮನ್ ಸೇನಾನಿ ರಂಡ್‌ಸ್ಟಟನು ತನ್ನ ಧಾಳಿಯಿಂದ ಮಿತ್ರರ ಹೆದರಿಗಡಿಸಿ ಗಲಿಬಿಲಿ ಹುಟ್ಟಿಸಿ ಮಿತ್ರರ ಮೋರೆಯ ಕಳೆಯಿಳಿಸಿದ್ದನು. ಆಷ್ಟರಲ್ಲಿ ಪುತ್ತೊನ್ಮೆ ರಷ್ಯವು ಮಿತ್ರರಾಷ್ಟ್ರಗಳಿಗೆ ಒನಪಿನ ಗಂಡಾಂತರವನ್ನು ದೂರಮಾಡಿತೆನ್ನ ಬಹುದು. ರಷ್ಯಾದನಿ ಧ್ವಾರ ಪೂರ್ವಿಕ ಮುನ್ನಡೆಯಿಂದಾಗಿಯುದ್ಧದ ಗತಿಯೇ ಬದಲಾಗುತ್ತಿದೆ. ಮೆಮೆಲಿನಿಂದ ಹಿಡಿದು ಕಾರ್ಪೇಥಿಯನ್ ಪರ್ವತ ಶ್ರೇಣಿಯ ವರೆಗಿನ ಪೂರ್ವರಂಗದಲ್ಲಿ ಆಂದರೆ ಸೂಮಾರು ಒಂದು ಲಕ್ಷ ಚದರ ಮೈಲಿನ ಸ್ಥಳದಲ್ಲಿ ಯುದ್ಧ ನಡೆಯುತ್ತಿದೆ. ಅಲ್ಲಿ ನಡೆಯುತ್ತಿರುವ ರಣಕೌಶಲ, ಪ್ರಚಂಡ ಹೋರಾಟ ಹಿಂದೆಂದೂ ನಡೆಯಿಲ್ಲವೆನ್ನ ಬಹುದು. ಜರ್ಮನರ ಸೂಮಾರು 200 ಡಿವಿಜನು ಸೇನೆಗಳು ಎಷ್ಟೇ ಕಲಿತನದಿಂದ ಕಾದಿನರೂ ರಷ್ಯ ಯೋಧರ ಮುನ್ನಡೆ ಸಾಗುತ್ತಿದೆ. ಜರ್ಮನಿಯ ಮುಖ್ಯ ನಗರವಾದ ಬರ್ಲಿನಿನಿಂದ ಇವರು ಕೇವಲ 95 ಮೈಲುಗಳ ದೂರದಲ್ಲಿರುವರಂತೆ. ಕೆಂಪು ಸೇನೆಯ ಪೆಟ್ಟು ನಾನಾಕಡೆಯಿಂದ ಬೀಳತೊಡಗಿದೆ. ಜರ್ಮನರು ತಮ್ಮ ರಾಜಧಾನಿಯನ್ನು ಬದಲುಮಾಡುವ ಮಾತುಕತೆ ಕೇಳಿ ಬರುತ್ತಿದೆ. ರಾಜಧಾನಿಯನ್ನು ಮೂನಿಚಗೆ ಸಾಗಿಸುವರೆಂದೂ ವಾರ್ತೆಯಿದೆ.

ಪಶ್ಚಿಮದಲ್ಲಿ ಮಿತ್ರರ ಕೈ ಅಷ್ಟು ಬಿಗಿಯೂಗಿಲ್ಲ. ರಷ್ಯಾದಷ್ಟೇ ಇವರೂ ಬಿಗಿಯುದ್ದಿದ್ದರೆ ಜರ್ಮನರ ಗತಿ ಅಧೋಗತಿಯೂಗುತ್ತಿತ್ತು. ಆದರೆ ಈ ಭಾಗದಲ್ಲಿ ಮಿತ್ರರ ಮುನ್ನಡೆ ತೃಪ್ತಿಕಾರಕವಾಗಿಲ್ಲ ಜನರಲ್ ರಂಡ್‌ಸ್ಟಟನು ಮಿತ್ರರನ್ನು ತಡೆದು ಹಿಡಿದಿದ್ದಾನೆ. ಈ ರಂಗದಲ್ಲಿ ಕಡಿಮೆ ಜರ್ಮನರ 80 ಡಿವಿಜನುಗಳಿರುವವೆಂದು ಅಂದಾಜುಮಾಡಲಾಗಿದೆ. ಜರ್ಮನರು ಫ್ರಾನ್ಸಿನ ಮೇಜಿನೋ ಕೋಟೆಯನ್ನು ಮುಂದು ಮುಂದೆ ಬಂದಿನೆ. ಜರ್ಮನರು ಜಗ್ಗದೆ ಕಾದುತ್ತಿದ್ದರೂ ಮಿತ್ರರು ಶಕ್ತಿ ಕಳಕೊಂಡಿಲ್ಲ. ಜರ್ಮನರು ಈ ಭಾಗದಲ್ಲಿ ವಿ-2 ಶಕ್ತಿಪನ್ನು ಉಪಯೋಗಿಸುತ್ತಿರುವರಂತೆ. ಜರ್ಮನರು ಈಗ 'ವಿ-4' ಎಂಬ ಹೊಸ ಶಕ್ತಿಯೊಂದನ್ನು ಕಂಡುಹಿಡಿದಿದ್ದಾರೆ. ಇದು ವಿ-2 ನಿನ ಹಾಗಿದ್ದರೂ ಗಂಟೆಗೆ 6480 ಮೈಲು ವೇಗವಾಗಿ ಹೋಗುವದಂತೆ. ಭೂಮಿಯಿಂದ 120 ಮೈಲುಗಳ ಎತ್ತರದಲ್ಲಿ ಹಾರುವದಂತೆ. ಜರ್ಮನಿಯು ಮುಖ್ಯ ನಗರ ಬರ್ಲಿನಿನಿಂದ ಅಮೇರಿಕಾದ ಮುಖ್ಯ ಪಟ್ಟಣ ನ್ಯೂಯೂರ್ಕಿಗೆ ಇದನ್ನು ಪ್ರಯೋಗಿಸುವದೂ ಸಾಧ್ಯವಿದೆಯಂತೆ. ಆದರೆ ಇವನ್ನು ಹೆಚ್ಚು ಸಂಖ್ಯೆಯಿಂದ ತಯಾರಿಸಲು ಗದಿರವದೇ ತೊಂದರೆಯೆಂದು ಹೇಳಲಾಗುತ್ತಿದೆ. ಜರ್ಮನರು ಸುತ್ತುನುತ್ತು ಆವರಿಸಲ್ಪಟ್ಟಿರುವ ಕಾರಣ ತಮ್ಮ ವಿಶಿಷ್ಟ ಅಸ್ತ್ರಶಸ್ತ್ರಗಳನ್ನು ಉಪಯೋಗಿಸಿಯೂರು ಎಂದು ವಾರ್ತೆಯಿದೆ. ಅನರು ವಿಷಗಾಳಿ, ರೋಗಜನಕ ಬಾಂಬು, ಮರಣಕಿರಣ ಮೊದಲಾದುವನ್ನು ಉಪಯೋಗಿಸಬಹುದೆಂದು ಊಹಿಸಲಾಗಿದೆ. ಈ ವಿಚಾರದ ಒಂದು ಪ್ರಶ್ನೆಗೆ ಉತ್ತರಕೊಡುತ್ತಾ ಬ್ರಿಟಿಷ್ ಪ್ರಧಾನರಾದ ಚರ್ಚಿಲ್ಲರು ಶತ್ರುವು ಇವುಗಳನ್ನು ಸ್ವಯೋಗಿಸಿದರೆ ಅವುಗಳ ಹೆತ್ತವರಿಗು ಪ್ರತೀಕಾರವೂಡಲಾಗುವದೆಂದು ಹೇಳಿದ್ದಾರೆ.

ಜರ್ಮನಿಗೆ ಗಂಡಾಂತರ ಬಂದಿದೆಯೆಂಬುದಕ್ಕೆ ಬೆಂಬಲಕೊಡುವಂತೆ ಮತ್ತೊಂದು ವಾರ್ತೆಯಿ ಹಬ್ಬಿದೆ. ಹಿಮ್ಲರನು ಸಂಪೂರ್ಣ ಅಧಿಕಾರ ಪಡೆದು ಪೂರ್ವ ರಣರಂಗಕ್ಕೆ ಹೋಗಿರುವನಂತೆ. ಪೂರ್ವಕ್ಷೇತ್ರದಲ್ಲಿ ರಷ್ಯನರನ್ನು ಹಿಮ್ಮೆಟ್ಟಿಸುವದು ಅಸಾಧ್ಯವೆಂದು ಕಂಡೊಡನೆ ರಷ್ಯನರೊಡನೆ ಸಂಧಾನನೂಡುವ ಯೋಜನೆಯು ಜರ್ಮನಿಯಂರದ್ದಿರಬಹುದೆಂದು ಯುದ್ಧತಜ್ಞರು ಅಭಿಪ್ರಾಯಪಡುತ್ತಾರೆ. ಜರ್ಮನಿಯ ಆಂತರಿಕ ಸ್ಥಿತಿ ಜೆನ್ನಾಗಿಲ್ಲವೆಂದು ವರದಿಗಳು ತಿಳಿಸುತ್ತವೆ. ಪ್ರತಿಯೊಬ್ಬ ಜರ್ಮನನೂ ಸಂಧಾನವೂಡಿಕೊಳ್ಳಬೇಕೆಂದು ಹೇಳುತ್ತಿರುವನಂತೆ. ಜರ್ಮನ್ ಸೇನೆಗಳ ಮುಖ್ಯಾಧಿಕಾರಿಗಳು ಸೇರಿ ಸಂಧಾನವೂಡಿಕೊಳ್ಳುವಂತೆ ಹಿಟ್ಲರನಿಗೆ ಸೂಚಿಸಿದರೆಂದೂ ಹಿಟ್ಲರನು ಈ ಸೂಚನೆಗಳನ್ನು ತಿರಸ್ಕರಿಸಿದನೆಂದೂ ವರ್ತಮಾನವಿದೆ ಪೂರ್ವದಲ್ಲಿ ರಷ್ಯನರ ಹೊಡೆತದಿಂದ ಜರ್ಮನಿಯ ಚಿತ್ತಸ್ಥೈರ್ಯವು ಶಿಥಿಲವಾಗಿ ತಿರುವದೆಂದು ಇದರಿಂದ ಊಹಿಸಬಹುದು.

ಪೂರ್ವಭಾಗದಲ್ಲಿ ಜಪಾನರಿಗೂ ಈ ವಾರ ಸ್ವಲ್ಪ ಬಿಸಿ ತಗಲಿದಂತೆ ಕಂಡುಬರುತ್ತದೆ. ಬರ್ಮಾ ರಣರಂಗದಲ್ಲಿ ಮಿತ್ರರ ವಿಜಯ ಮುಂದೆ ಸಾಗಿದೆ. ಮೂಂಡಲೆಯ ಉತ್ತರಕ್ಕೆ 60 ಮೈಲುಗಳ ದೂರದಲ್ಲಿಯ ಮೊನಿವಾ ಮೊದಲಾದವನ್ನು ಮಿತ್ರರು ವಶಪಡಿಸಿಕೊಂಡಿರುವರು. ಆ ಕ್ಯಾಬನ್ನಲ್ಲಿಳಿದ ಮಿತ್ರರು ಮುಂದರಿದು ರಾಮರಿ ಮೊದಲಾದ ದ್ವೀಪಗಳನ್ನು ವಶಪಡಿಸಿಕೊಂಡಿರುವರು. ನೈರುತ್ಯ ಉತ್ತರ ಬರ್ಮಾದಲ್ಲಿ ಹೋರಾಡುತ್ತಿದ್ದ ಮಿತ್ರ ಸೇನೆಗಳು ಜೀನೀಸೇನೆಯನ್ನು ಸಂಧಿಸಿರುವರು. ಬರ್ಮಾರಸ್ತೆಯಲ್ಲಿದ್ದ ಜಪಾನರ ಕಡೇ ರಣಿ ವಾಂಟಿಂಗ್ ನಗರವು ಚೀನೀಯರ ವಶವಾದ ಕಾರಣ ಬರ್ಮಾ ರಸ್ತೆಯು ತೆರೆಯಲ್ಪಟ್ಟಿತೆಂದು ಹೇಳಬಹುದು. ಇವರಿಂದ ಉಸಿರುಕಟ್ಟಿದಂತಿದ್ದ ಚೀನೀಯರಿಗೆ ಸ್ವಲ್ಪ ಉಸಿರಿಳೆಯುವ ಅವಕಾಶವಾದಂತಾಯಿತು.

ಈ ಮಧ್ಯೆ ಜಪಾನೂ ಮಿತ್ರರೊಡನೆ ಒಪ್ಪಂದಮಾಡಿಕೊಳ್ಳಲು ಯತ್ನಿಸುತ್ತಿದೆಯೆಂಬ ವಾರ್ತೆ ಪ್ರಕಟವಾಗಿದೆ. ಜಪಾನು ಮೂಂಜುಕೊವನ್ನು ಬಿಟ್ಟು ಉಳಿದ ಆಕ್ರಮಿಸಲ್ಪಟ್ಟ ಭಾಗಗಳನ್ನೆಲ್ಲಾ ಬಿಟ್ಟುಕೊಡುವದಾಗಿ ಒಪ್ಪಿ ಮಿತ್ರರೊಡನೆ ಹೂಸಂಧಿ ನಡೆಸುತ್ತಿದೆಯೆಂದು ಸ್ವಿಸ್ ವಾರ್ತೆಯೊಂದು ತಿಳಿಸುತ್ತದೆ. ಮಿತ್ರರು ಜಪಾನರ ಕೈಗಾರಿಕೆಯನ್ನು ಅಲುಗಿಸದೆ ಬಿಟ್ಟರೆ ಮಾತ್ರ ಇದಕ್ಕೆ ಒಪ್ಪುವದು ಎಂದು ಜಪಾನರು ಹೇಳಿಕೊಂಡಿರುವರು. ಜಪಾನು ಒಪ್ಪಂದಮಾಡಿಕೊಳ್ಳುವದೆಂದರೆ ತನ್ನ ಮಿತ್ರ ಜರ್ಮನಿಯ ದೆಸೆಯನ್ನು ತಲೇ ಚಿಸಿ ಮಾಡಿಕೊಳ್ಳಬೇಕು. ಇಲ್ಲವೇ ತನ್ನ ಕೈಗಾರಿಕಾ ಸಂಪತ್ತನ್ನಷ್ಟವಾಗುವದೆಂದು ಮಾಡಿಕೊಳ್ಳಬೇಕು. ಇಲ್ಲವಿದ್ದರೆ ತನ್ನ ಶಕ್ತಿಪ್ರಾಸಾದಗಳುಪದರಿಂದ ಮಾಡಿಕೂಡಬೇಕು. ಜಪಾನಿಗೆ ಬಂದ ತೊಂದರೆಯೇನು? ಶಕ್ತಿಪ್ರಾಸಾದಗಿಲ್ಲವೆಂಬುದನ್ನು ವಿಶದವಾಗಿ ಕಳೆದ ವಾರ ಒರೆದಿದ್ದೇನೆ. ಜರ್ಮನರ ಹೀನದಶೆಯನ್ನು ಹಾಗೆ ಮಾಡಿಸಿತೇ ಎಂದು ನೋಡಿದರೆ 'ಹೌದೆಂದು ಹೇಳಲು ಇನ್ನೂ ಸಮಯಬೇಕು. ತನ್ನ ಕೈಗಾರಿಕೆ ನಶಿಸಾಗುವದೆಂದು ಅದು ಖಂಡಿತಾ ಭಾವಿಸಿರಲಿಕ್ಕಿಲ್ಲ. ಹಿಂದೂ ಭಾವನೆಯಿದ್ದಿದ್ದರೆ ಅದು ರಣರಂಗಕ್ಕೆ ಇಳಿಯುತ್ತಲೇ ಇರಲಿಲ್ಲ. ಹೇಗೂ ಒಪ್ಪಂದದ ಪ್ರಯತ್ನ ನಿಜವಾಗಿದ್ದರೆ ಅದರ ಕಾರ್ಯಕಾರಣಗಳು ಮುಂದೆ ಬಂದೇ ಬರಬೇಕು. ಅಲ್ಲಿಯವರೆಗೆ ನೀರೀಕ್ಷಿಸುವಾ.

---




ಯಾವುದೊಂದು ಮಿಶ್ರಣ ವಿಲ್ಲದೆ ಪ್ರತಿದಿನವೂ ಹುರಿದು ಪುಡಿ ಮಾಡಿದ್ದನ್ನೇ ಕೊಳ್ಳಿರಿ.

ನಿಮ್ಮ ಮನೆಗಳಲ್ಲಿರುವ ಕಾಫಿ ಬೀಜವನ್ನು ಕ್ರಮ ಪ್ರಕಾರವಾಗಿ ಹುರಿದು ಪುಡಿ ಮಾಡಿಸುವುದಕ್ಕೆ ಕೆಳಗಿನ ವಿಳಾಸವನ್ನು ಗಮನಿಸಿರಿ.



15)

ಅನುಭವಸ್ಥ ಕೆಲಸಗಾರರಿಂದ ತಯಾರಿಸಿದ ಸುಪ್ರಸಿದ್ಧ ಮಂಗಳೂರು

**ಮೋಹನ್ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ.**

ಎಲ್ಲಾ ತಂಬಾಕು ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

11) ಕೊಡಗಿನ ಪ್ರವರ್ತಕರು:—

ಸಿರಸಾಜೀಂದ್ರಪೇಜಗೆ— { ಶ್ರೀ ಯು. ಕೆ. ಮುದ್ದಪ್ಪನವರು } ಮಡಿಕೇರಿಗೆ— { ಶ್ರೀ ದುರ್ಗಾ ಸ್ಟೋರ್ಸ್.

ಮೋಹನ್ ಬೀಡಿ ವರ್ಕ್ಸ್, 278, ಲೈಟ್ ಸ್ಟೇಷನ್ ರಸ್ತೆ, ಮಂಗಳೂರು.

**ಧಾತು ವೃದ್ಧಿ ರಸಾಯನ (ZANDU)**

"ರ್ಯಾಕ್ಯೂ—ಫಸ್ಟ್ಲೋ—ಮೊಲ್ಪ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಮುಕರಿಗೆಯಾಸಿನಿ, ಆಲಸ್ಯಜೀವಿಗಳಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಬಲಧಾರಿಸಿಕೊಳ್ಳುವವರಿಗೆ, ಆರೋಗ್ಯಕ್ಕಾಗಿ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಪ್ರಾಧ್ಯಾಪಕರಿಗೆ, ಪ್ರಭುಗಳಿಗೆ, ಪ್ರಜೆಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಪ್ರೇಮಿಗಳಿಗೆ, ಪುರುಷನಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜರಾ ಗೃಹಿಸುವುದು. ಮನುಷ್ಯನ ತಾರುಣ್ಯವನ್ನು ಮೂರುತಿಂಗಳವರೆಗೆ ನಾಶವಿಲ್ಲದೆ ರಕ್ಷಿಸುವುದು. ಇದರಲ್ಲಿ ಸಮಜೀವಸಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಲ್ ಫಾಸ್ಫೋನೇಟ್ಸ್, ಹೈಪೋಫ್ಲಿಸರೀನ್, ಸೋಡಿಯಂ ಕೊಕೋ ಫೇಟ್ ಪೆನ್ಸನ್, ಸಾಲ್ಟ್, ಮಾರ್ಟ್ ಎಕ್ಸ್‌ಟ್ರಾಕ್ಟ್, ಮೊದಲಾದ ಪೌಷ್ಟಿಕ ವಿಷಯಗಳಿವೆ. ಇಂದಿಂದಲೇ ಸೇವಿಸಿ ಆನುಭವ ಪಡೆಯಿರಿ ಇದು ಎಲ್ಲಾ ಪ್ರಸಿದ್ಧ ಔಷಧಾಲಯಗಳಲ್ಲಿದೆ.

ರುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.
18)

# TO GREET YOU.

For the past
REMEMBRANCE
For the present
KIND THOUGHTS
For the future
GOOD WISHES

## The Canara Banking CorporatiOn Limited.

(Incorporated in British India Liablity of Members is Limited)
13) ETD—1906.
Head Office: UDIPI, South Kanara.

## ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಕರಾರುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸ್ಸುಗಳನ್ನು ಸೂಚಿಸಿ ಬರೆಯಿರಿ.

## ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.
17) ಪಿ. ಬಿ. ನಂ. 337, ಮದ್ರಾಸು.

## ಎಂಪೈರ್ ಆಫ್ ಇಂಡಿಯಾ
## ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

54) ಸ್ಥಾಪನೆ:—೧೮೯೭.

| | | |
|---|---|---|
| ೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು. | ಒಟ್ಟು ಆದಾಯ | ೯೭,೩೭,೦೦೦ ರೂಪಿ |
| | ಚಾಲ್ತಿಯಿರುವ ವಿಮೆ | ೧೬,೪೯,೮೬,೦೦೦ ,, |
| | ಆಸ್ತಿ .... .... | ೬,೩೦,೪೬,೦೦೦ ,, |
| | ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು | ೮,೩೮,೦೦,೦೦೦ ,, |

| ಅಂಗ ಕಛೇರಿ: | ಏಜೆನ್ಸಿ | ಪ್ರಧಾನ ಕಛೇರಿ: |
|---|---|---|
| ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು. | ಅರ್ಜಿಗಳನ್ನು ಸ್ವಾಗತಿಸಿದೆ. | ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ |

## "ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್ ಖಾನ್,
ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಚೇರಿ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ರಿಕೆ ಬರೆಯಿರಿ:
ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,
51) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

## ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,0೧೦, ಜನೂ ಬಂದ ರೇವಣಾತಿ 2,24,755 ವಸೂಲಾದ ಫ್ಲೋಮುನಿಧಿ 3,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳನ್ನೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಮು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 3. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.


Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

# ಸ್ವಾತಂತ್ರ್ಯ ದಿನಾಚರಣೆ.

## ಸರಕಾರದ ಪ್ರತಿಬಂಧನ.

## ದಸ್ತಗಿರಿಗಳು.

### ಪ್ಯಾರೆಲಾಲರ ಭಾಷಣ.

ಮಹಾತ್ಮಗಾಂಧೀಜಿಯವರ ಕಾರ್ಯದರ್ಶಿಗಳಾದ ಶ್ರೀ. ಪ್ಯಾರೆಲಾಲರವರು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಸೇವಾಗ್ರಾಮದಲ್ಲಿ ಭಾಷಣ ಮಾಡುತ್ತಾ ಹೀಗೆ ನುಡಿದರು. 'ನಾವೆಲ್ಲರು ಮಿಲಿಯ ಇರುವ ನಾವುಗಳು ಒಬ್ಬ ಮನುಷ್ಯನಂತೆ ಮಾತಾಡುವದು, ಕಾರ್ಯಮಾಡುವದಾದರೆ ನಾವು ಕೇಳುವದರಿಂದಲೇ ಹಿಂದೂದೇಶದ ಸ್ವಾತಂತ್ರ್ಯವು ಕರಗತವಾಗುವದು. ಸೈನ್ಯದಲ್ಲಿಯು ಸೈನಿಕನಿಗೆ ಶಿಸ್ತು, ಕಳವಾತು ಹೇಗೆ ಅವಶ್ಯವೋ ಹಾಗೆಯೇ ಸತ್ಯಾಗ್ರಹಿಗೂ ಅವಶ್ಯ. ಸೈನಿಕನು ವಿಷಾಶಕಾರಕ ಅಯುಧದ ಮೇಲೆ ಭರವಸೆಯಿಟ್ಟರೆ ಸತ್ಯಾಗ್ರಹಿಯು ಜನತೆಯ ಅಹಿಂಸಾಬಲದ ಮೇಲೆ ಭರವಸೆಯಿಡುವನು. ಇದಕ್ಕೆ ಜನತೆಯಲ್ಲಿ ಶಿಸ್ತು ಸಹಕಾರ ಬೇಕು. ನಾವು ನಮ್ಮ ದಳದ ದೃಷ್ಟಿಯಿಂದ ಕವಾತು, ಲೈನುಗಟ್ಟಿ ಹೋಗುವ ಅಭ್ಯಾಸ ಮಾಡಿದ್ದರೆ ಯಾವ ಪೋಲೀಸರ ಅಡಚಣೆಗೂ ಅದನ್ನು ಬಿಟ್ಟುಕೊಡಕೂಡದು.

ನಾವು ವಿಶ್ವಾಸಾರ್ಹ ಅಹಿಂಸಾಶಕ್ತಿಯನ್ನು ಪೂರ್ಣ ಸ್ವರಾಜ್ಯದೊರೆಯುವ ವರೆಗೆ ಸಡಿಸುವೆವೆಂದು ಪುನಃ ಪ್ರತಿಜ್ಞೆ ಮಾಡಿರುವೆವು. ಜೀಕೆಂದಲೇ ನಾವು ಸಾರ್ವಜನಿಕ ಪ್ರದರ್ಶನವನ್ನು ಮನ್ನಾ ಮಾಡಿರುವದಾಗಿದೆ. ಅಧಿಕಾರಿಗಳೊಡನೆ ಘರ್ಷಣೆ ನಮಗೆ ಬೇಕಿಲ್ಲ. ನಮ್ಮ ಹೃದಯ ಮತ್ತು ಆತ್ಮವನ್ನು ರಚನಾತ್ಮಕ ಕಾರ್ಯದಲ್ಲಿ ನಿಲ್ಲಿಸಿ ಮುಂದರಿಯುವಾ. ನಿಜ, ಅಧಿಕಾರಿಗಳೊಡನೆ ಘರ್ಷಣೆ ನಮಗೆ ಬೇಡ. ಆದರೆ ನಮ್ಮ ಜೈನಂದಿನ ಕಾರ್ಯಕ್ರಮಕ್ಕೆ ಅಡ್ಡಿ ಬರುವ ನಮ್ಮ ಅತ್ಯಗೌರವಕ್ಕೆ ಕುಂದುತರುವ ಕಿರುಕುಳಕ್ಕೆ ನಾವು ಶಿರಬಾಗೆವು.'

### ಸ್ವಾಮಿ ಆನಂದರ ಭಾಷಣ.

ಅತ್ಯವರಿಶುದ್ಧತೆಯ ಮತ್ತು ಸೇವೆಯ ಕಾರ್ಯಕ್ರಮದೊಂದಿಗೆ ಸೇವಾಗ್ರಾಮದಲ್ಲಿ ಸ್ವಾತಂತ್ರ್ಯ ದಿನವು ಆಚರಿಸಲ್ಪಟ್ಟಿತು. ಶ್ರೀ. ಸ್ವಾಮಿ ಆನಂದರು ರಾಷ್ಟ್ರೀಯ ಧ್ವಜಾರೋಹಣಮಾಡಿದರು. 'ವಂದೆ ಮಾತರಂ' ಮತ್ತು 'ಝಂಡಾ ಊಂಚ್ ರಹೇ ಹಮಾರಾ' ಗೀತೆಗಳಾದ ನಂತರ ಸ್ವಾಮಿ ಆನಂದರು ತಮ್ಮ ಭಾಷಣದಲ್ಲಿ ಹೀಗೆ ನುಡಿದರು. 'ಅನೇಕ ವರ್ಷಗಳಿಂದ ನಾವು ರಾಷ್ಟ್ರೀಯ ಧ್ವಜವನ್ನು ವಂದಿಸುತ್ತಿದ್ದೇವೆ. ಅನೇಕ ವರ್ಷಗಳಿಂದ ಸ್ವಾತಂತ್ರ್ಯಕ್ಕಾಗಿ ಪ್ರತಿಜ್ಞೆಯನ್ನು ತೆಗೆದುಕೊಳ್ಳುತ್ತಿದ್ದೇವೆ. ಜಗತ್ತಿನ ಪುಷ್ಕಾನುಪುಷ್ಕವಾಗಿ ಈ ಧ್ವಜವು ನಮಗೆ ಕೊಡಲ್ಪಟ್ಟಿದೆ. ಅದರಲ್ಲಿ ಚರಬಾಧ ಶಂಕೆತವಿದೆ. ಈ ಸಂಕೇತವೇ ಸ್ವಾತಂತ್ರ್ಯ ಸಾಧನೆಗೆ ನಮ್ಮ ಮಾರ್ಗವು ಸತ್ಯ ಮತ್ತು ಅಹಿಂಸೆಯೆಂಬುದನ್ನು ತೋರಿಸುತ್ತದೆ. ಈ ಧ್ವಜದ ಗೌರವ ಸ್ಥಿತಿಪ್ಪೆಗಳನ್ನು ರಕ್ಷಿಸಲಕ್ಕಾಗಿ ನಮ್ಮ ನೂರಾರು ಯುವಕ, ಮುದುಕರು, ಯುವತಿ ವೃದ್ಧೆಯರು ತ್ಯಾಗಮಾಡಿದ್ದಾರೆ. ಇಂಥಾ ಪರಿಶುದ್ಧ ಅಹಿಂಸಾತ್ಯಾಗದ ಹೆಗ್ಗಳಿಕೆಯನ್ನು ಜಗತ್ತಿನ ಯಾವ ಧ್ವಜವು ಹೇಳಿಕೊಳ್ಳಲಾರದು. ಈ ತ್ಯಾಗಗಳು ಅದಕ್ಕೆ ಅಂಥಾ ಪಾವಿತ್ರ್ಯತೆಯನ್ನು ತಂದುಕೊಟ್ಟಿವೆ. ಸಮಯ ಳಕೆದಂತೆ ಇದು ಇನ್ನೂ ಹೆಚ್ಚಾಗುವದು. ಈ ತ್ರಿವರ್ಣ ಧ್ವಜವು ಯಾವ ಪಕ್ಷದ ಯೂ ಕೋಮಿನ ಹಕ್ಕಿನದಲ್ಲ. ಸತ್ಯ ಮತ್ತು ಹಿಂಸಮಾರ್ಗದಲ್ಲಿ ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ಹೆಣಗುವವರಿಲ್ಲರಿಗೆ ಅದು ಸೇರಿದೆ. ಹಿಂದೂದೇಶದ ಸ್ವಾತಂತ್ರ್ಯವು ಎಂದಿನ ವರೆಗೆ ಒಪ್ಪಲ್ಪಡುವದಿಲ್ಲವೋ ಅಂದಿನ ವರೆಗೆ ನಮ್ಮ ಅಹಿಂಸಾಯುದ್ಧವು ಮುಂದರಿಯಬೇಕು. ಇದರಲ್ಲಿ ನಮ್ಮ ವಿಶ್ರಾಂತಿಯಿಲ್ಲ, ಶಾಂತಿಯ ಜೀವನವಿಲ್ಲ. ನ್ಯಾತಂತ್ರ್ಯದ ಅನ್ವೇಷಣೆಯಲ್ಲಿ ದಿಕ್ಕು ದಿಕ್ಕುಗಳಲ್ಲಿ ತಿರುಗಬೇಕು. ಇದೇ ನಮ್ಮ ನಿಶ್ಚಯ.'

### ಘಟನೆ.

ಸ್ವಾತಂತ್ರ್ಯ ದಿನಾಚರಣೆಯ ವೈಶಿಷ್ಟ್ಯವೆಂದರೆ ಪಾಕಿ ಮಾರಾಟದ ಹೊಸ ಯೋಜನೆಯ ಪ್ರಾರಂಭ. ಖಾದಿ ಕೊಳ್ಳುವವರು ರೂಪಾಯಿಗೆ ಇಂತಿಷ್ಟೆಂದು ನಿಶ್ಚಯಿಸಿದಷ್ಟು ಬೆಲೆಯ ನೂಲು ಕೊಟ್ಟಿರೇನೆ ಬಟ್ಟೆ ದೊರೆಯುವದೆಂದು ನಿಶ್ಚಯಿಸಲಾಗಿದೆ. ಗ್ರಾಮ ನೈರ್ಮಾಲ್ಯದ ಒಂದು ಪ್ರದರ್ಶನ ಏರ್ಪಟ್ಟಿತ್ತು. ಸೇವಾಗ್ರಾಮದ ವಿವಿಧ ಸಂಸ್ಥೆಗಳ 250 ಮಂದಿ ಸದಸ್ಯರು ಗುದ್ದಲಿ, ಹಾರೆ, ಪಿಕಾಸಿಗಳು, ಕುಳ್ಳೆಗಳನ್ನು ಹಿಡಿದು ಎರಡು ಸಂಗ್ರಿಯಲ್ಲಿ ಗ್ರಾಮ ಶುಚಿತ್ವಾಕಾರ್ಯಕ್ಕೆ ಮುಂದರಿದರು. 50 ಗಜ ಮುಂದರಿಯುವಷ್ಟಕ್ಕೆ ಪೋಲೀಸರು, ಜಿಲ್ಲಾ ಮೇಜಿಸ್ಟ್ರೇಟರ ಸನ್ನೇಕ ಬಂದು ಅವರನ್ನು ತಡೆದರು. ಶ್ರೀಮತಿ ಗಾಂಧಿಯವರ ನೇತೃತ್ವದಲ್ಲಿದ್ದ ಇವರು ಪೋಲೀಸರ ಜೀಪಿಗೆಗೆ ಹಿಂಬರಿಯಲಿಲ್ಲ. ಪೋಲೀಸರು ಮುಂಜೆ ಬಿಡದ ಕಾರಣ ಇವರು ರಸ್ತೆಯಲ್ಲಿಯೇ ಕುಳಿತರು. ಕೆಲವು ಸಮಯದ ತಂತರ ಪೋಲೀಸರು ಇವರನ್ನು ಬಿಟ್ಟರು. ಇವರು ಮುಂದರಿದು ಗ್ರಾಮನೈರ್ಮಲ್ಯ ಕಾರ್ಯದ ಪ್ರದರ್ಶನವನ್ನು ಯಶಸ್ವಿಯಾಗಿ ಕೊನೆಗೊಳಿಸಿದರು.

### ಗಾಂಧೀಜಿಯವರ ಭಾಷಣ.

ಸಾಯಂಕಾಲದ ಸ್ವಾರ್ಥನೆಯಾದ ನಂತರ ಮಹಾತ್ಮರು ನೆರೆದಿದ್ದವರನ್ನು ಸಂಬೋಧಿಸಿ ಈ ರೀತಿ ನುಡಿದರು. 'ವಿಧಾಯಕ ಕಾರ್ಯಕ್ರಮವು ಬಾಯಿ ದಿಭಂಗಕ್ಕಿಂಥಾ ಮೇಲಾದುದು. ಸೇವಾಗ್ರಾಮದ ಬಿಲ್ಲಿರುವ ವಿವಿಧ ಸಂಸ್ಥೆಗಳು ನನ್ನ ಸೂಚನೆಯಂತೆ ನಡೆಯುವದರಿಂದ ಅವುಗಳ ಬಗ್ಗೆ ನನಗೆ ಪೂರ್ಣ ಜವಾಬ್ದಾರಿಯಿದೆ. ವಿಧಾಯಕ ಕಾರ್ಯಕ್ರಮವನ್ನು ದೇಶದ ಮುಂದಿಡಲಾಗಿದೆ. ಅಹಿಂಸೆ ಮತ್ತು ಸತ್ಯಮಾರ್ಗಗಳಿಂದ ಸ್ವಾತಂತ್ರ್ಯವನ್ನು ಸಾಧಿಸಲು ಇದೇ ರಾಜಮಾರ್ಗ. ಹಿಂದೂದೇಶದ ಸ್ವಾತಂತ್ರ್ಯ ವೆಂದರೆ ಕೋಪಕ್ಕೆ ಒಳಗಾದ ಪೂರನ ಜನಾಂಗದ ಸ್ವಾತಂತ್ರ್ಯ. ಅದು ಕೋಪಿಸುವವರ ಆರ್ಥಾತ್ ಸಾಮ್ರಾಜ್ಯಶಾಹಿ ಇಂಗ್ಲೆಂಡ್ ಮತ್ತಿತರ ಸಾಮ್ರಾಜ್ಯಗಳ ಸ್ವಾತಂತ್ರ್ಯಕ್ಕೂ ಹೌದು. ನಮಗೆ ಸ್ವನಿಕ ಶಿಕ್ಷಣದಂಥಾ ಕಟ್ಟುನಿಟ್ಟಿನ ಶಿಸ್ತಿನ ಕಾರ್ಯಕ್ರಮಗಳು ಬೇಡ. ಆದರೆ ವಿಧಾಯಕ ಕಾರ್ಯಕ್ರಮವನ್ನು ವಿರೋಧಿಸುವರನ್ನು ಎದುರಿಸಲೆ ಹಿಂಜರಿಯುವದಕ್ಕಿಂತಲೂ ಸಾಯುವದು ಮೇಲು. ಒಂದು ಸೇವಕರ ತಂಡವು ಪಿಕಾಸಿ, ಕತ್ತಿ, ಬುಟ್ಟಿ ಹಿಡಿದು ಬೀಳಿಗ್ಗೆ ಗ್ರಾಮನೈರ್ಮಲ್ಯಕ್ಕೆ ಮುಂದರಿಯಿತು. ಈ ಸಾಧನಗಳು ಯುದ್ಧದ ಅಸ್ತ್ರಶಸ್ತ್ರಗಳಲ್ಲ. ಆದರೂ ಪೋಲೀಸರು ಅವರನ್ನು ತಡೆದರು. ತಮ್ಮ ಲೈನನ್ನು ಬಿಟ್ಟು ಚದರಿದರೆ ಮಾತ್ರ ಮುಂದೆ ಹೋಗಲು ಬಿಡುವದಾಗಿ ಪೋಲೀಸರಂದರು. ಇಂಥಾ ಸಮರ್ಪಗಳಲ್ಲಿ ತಮ್ಮ ಲೈನು ಬಿಡುವದೆಂದರೆ ಹೇಡಿತನ. ಇದು ಪ್ರತಿ ವರ್ಷ ತೆಗೆದುಕೊಳ್ಳಲ್ಪಡುತ್ತಿರುವ ಪ್ರತಿಜ್ಞೆಗೆ ಸರಿಹೋಗದು. ಅಸುಖದ, ಕಷ್ಟದ ಮಡಲಿನಲ್ಲಿಯೇ ಸುಖದ ಬೀಜವಿದೆ. ತ್ಯಾಗದಿಂದ, ಕ್ಷಮದಿಂದ ದೊರೆಯುವ ಸ್ವರಾಜ್ಯದಲ್ಲಿಯೇ ಸುಖ. ಆದ್ದರಿಂದ ಪೋಲೀಸರ ಅಪ್ಪಣೆಯನ್ನು ನಿರಾಕರಿಸಿದ್ದು ಹಿತವಾಯಿತು. ಪೋಲೀಸರ ಹಿತ್ತರ ತುಚ್ಛಾತಿಗಳೆದ್ದವು. ಆದರೆ ಸ್ವಯಂಸೇವಕರ ಗಾಂಭೀರ್ಯ ದೃಢನಿಶ್ಚಯದ ಮುಂದೆ ಅವು ಅಶಕ್ತಸಾಧನಗಳಾದವು. ಜನರು ತಮ್ಮ ಶಾಂತಿ ಕಳಕೊಂಡು ರೊಚ್ಚಿಗೆದ್ದು ಪೋಲೀಸರ ಮೇಲೆ ಬಿದ್ದಿದ್ದರೆ ಪೋಲೀಸರು ಬಿಡುಕಳಗುಂಡುಕಾರಿಸುತ್ತಿದ್ದರು. ಸ್ವಯಂಸೇವಕರು ಗುಂಡನ್ನು ಆವ್ಹಾನಿಸುವವರೂ ಅಲ್ಲ; ಅದಕ್ಕೆ ಹೆದರಿ ಹಿಂಜರಿಯುವವರೂ ಅಲ್ಲ. ಅವರಿಗೆ ಅವರ ಅಂತರಾತ್ಮನ ಅಣತಿಯೇ ಮಾರ್ಗದರ್ಶಕ ನುಡಿ. ಅವನ್ನೇ ನಾನು ದೇವರು ಯೂ ಸತ್ಯನೆನ್ನುತ್ತೇನೆ. ಆದ್ದರಿಂದ ನಿಜವಾದ ಸ್ವಾತಂತ್ರ್ಯವೂ ದೇವರೂ ಒಂದೇ.

'ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು' ಎಂಬುದಾಗಿ ಲೋಕಮಾನ್ಯ ತಿಲಕರು ನನಗೆ ಮಂತ್ರೋಪದೇಶಮಾಡಿದ್ದಾರೆ. ಈ ಮಂತ್ರವನ್ನು ಸಾಧಿಸುವ ಮಾರ್ಗವೆಂದರೆ ಸತ್ಯ ಮತ್ತು ಅಹಿಂಸೆಯೆಂದು ನಾನು ಹೇಳುತ್ತೇನೆ. ವಿಧಾಯಕ ಕಾರ್ಯಕ್ರಮವನ್ನು ಯೋಗ್ಯರೀತಿಯಿಂದ ಕೈಕೊಂಡರೆ ಇದು ಮಿಲಿಯಂತರ ಜನರಿಗೂ ಸಾಧ್ಯವಾಗುವದು.'

### ಇತರ ಕಡೆಗಳಲ್ಲಿ.

ಜವಾಹರಲೆಹರೂವರ ಮನೆಯಾದ ಆನಂದ ಭವನದ ಮೇಲೆ ರಾಷ್ಟ್ರೀಯ ಧ್ವಜವನ್ನು ಜವಾಹರರ ಒಂದು ವರ್ಷ ಪ್ರಾಯದ ಮರುಮಗನು ಹಾರಿಸಿದನು. ಬೆಳಿಗ್ಗೆ ಧ್ವಜವನ್ನು ಹಾರಿಸಲಾಯಿತು. ಜವಾಹರರ ಮಗಳಾದ ಇಂದಿರಾಗಾಂಧಿಯವರ ಒಂದು ವರ್ಷದ ಮಗುವು ಧ್ವಜದ ಹಗ್ಗವನ್ನು ತಾಯಿಯ ಸಹಾಯದಿಂದ ಎಳೆದು ಧ್ವಜ ಹಾರಿಸಿತು.

ಲಕ್ನೋದಲ್ಲಿ 7 ಜನರ ದಸ್ತಗಿರಿಯಾಗಿದೆ. ಗುಂಟೂರಿನಲ್ಲಿ ಜಿಲ್ಲಾ ಮೇಜಿಸ್ಟ್ರೇಟರು ಹೊರಡಿಸಿದ ಪ್ರತಿಬಂಧಕಾಜ್ಞೆಯನ್ನು ದೇಶಭಕ್ತ ಕೊಂಡವೆಂಕಟಪ್ಪಯ್ಯ ಮತ್ತಿತರ ಮಂದಿ ಜನರು ಮುರಿದರು. ಗುಂಟೂರಿನಲ್ಲಿ ಧ್ವಜವಂದನೆ ಮತ್ತು ಪ್ರತಿಜ್ಞೆ ತೆಗೆದುಕೊಳ್ಳಕೂಡದೆಂಬ ಆಜ್ಞೆ ವಿಧಿಸಲಾಗಿತ್ತು. ಕೊಂಡವೆಂಕಟಪ್ಪಯ್ಯನವರು ಈ ಪ್ರತಿಬಂಧನವನ್ನು ಮುರಿಯುವಾಗಿ ಬಲ್ಲಾ ಮೇಜಿಸ್ಟ್ರೇಟರಿಗೆ ನೋಟೀಸುಕೊಟ್ಟಿದ್ದರು. ದಸ್ತಗಿರಿಗಳಾಗಲಿಲ್ಲ.

ಖಂಡ್ವಾ, ಅಹಮದಾಬಾದ್, ನಂದಿಗಾವು, ವೆಲ್ಲೂರು, ಜೆಲ್ಲಿ, ಕಲ್ಯಾಣ್ ಮೊದಲಾದೆಡೆ ದಸ್ತಗಿರಿಗಳಾಗಿವೆ. ಅನೇಕ ಕಡೆ ವಿದ್ಯಾರ್ಥಿಗಳು ಶಾಲೆಗೆ ಹೋಗಲಿಲ್ಲ.

Reg.No. M. 1330.
KODAGU MERCARA. (Coorg).

# ಕೊಡಗು

ಸಂಪಾದಕರು:-ಶ್ರೀ ಪಿ. ಸಿ. ಬೆಳ್ಳಿಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೩ | ತಾರೀಕು ೯—೨—೧೯೪೫ನೇ ಶುಕ್ರವಾರ. | ಸಂಚಿಕೆ ೩೬

## ಬರ್ಲಿನಿಗೆ ಗಂಡಾಂತರ?

ಲೇ:- 'ಗುಸ್ತ'

—()—

ಯೂರೋಪಿನ ಯುದ್ಧಕ್ಷೇತ್ರದಲ್ಲಿ ಬಿಸಿಯೇರುತ್ತಾ ನಡೆದಿದೆ. ರಷ್ಯನರು ಈ ಕಳೆದ ಎರಡು ವಾರಗಳಿಂದ ಕೈಕೊಂಡಿರುವ ಛಲಿ ಕ್ರಮವನ್ನು ನೋಡಿದರೆ ಅವರು ಈ ಭಾಗದ ಯುದ್ಧದ ಕಡೇ ಅಂಕವ ಅಭಿನಯಕ್ಕೆ ತೊಡಗಿದ್ದಾರೆಂದು ಹೇಳಬಹುದು. ಇವರ ಮನ್ನಡೆಯು ಜರ್ಮನರಿಲ್ಲಿಗೆ ಗಾಬರಿಯನ್ನುಂಟುಮಾಡಿದೆ. ತಿರುಪು ಜರ್ಮನಿನ ಮೆಲ್ಲ ಸಗನವಾದ ಬರ್ಲಿನಿನಿಂದ ಕೇವಲ 36 ಮೈಲುಗಳ ದೂರದಲ್ಲಿರುವರೆಂದು ವರ್ತೆಬಂದಿದೆ. ನಗರದ ಹತ್ತಿರ ಬಂದಂತೆ ದಾರಿಯು ಕಷ್ಟವಾಗುತ್ತಾ ಬರುತ್ತಿರುವದೆಂದು ಹೇಳಲಾಗುತ್ತಿದೆ. ರಷ್ಯನ್ ಸೇನೆಗಳು ಅನೇಕ ಭಾಗಗಳಿಂದ ಮುಂದರಿಯುತ್ತಾ ತೊಡಗಿದ್ದಾರೆ. ಮಾರ್ಷಲ್ ಝುಕೋವ್‌ರವರು ಬಹು ಚಾಕಚಕ್ಯತೆಯಿಂದ ಸೈನ್ಯವನ್ನಡೆಸತೊಡಗಿದ್ದಾರೆ ಇವರು ಮುನ್ನಡೆಯುತ್ತಿರುವ ಭೂಭಾಗವು ಯುದ್ಧಕ್ಕೆ ಸಹಾಯಕವಾಗಿಲ್ಲ ಎಂಬಲ್ಲಿಗೂ ಒಂದಡೆ, ಶೀತಲೆ, ನೆರೆ ಇವುಗಳು ಅಲ್ಲಲ್ಲಿ ಅಡಚಣೆಯೂ ರಷ್ಯನರು ಇವನ್ನು ಪರಿಗಣಿಸದೆ ಮುಂದೆ ಸಾಗಿದ್ದಾರೆ. ಹವಾಗುಣವು ಶೀಘ್ರವೆ ಬದಲಾಗುವ ಚಿಹ್ನೆಯಿರುವದರಿಂದ ಮುಂದೆ ಜರ್ಮನರು ರಷ್ಯಾ ಮುನ್ನಡೆಯನ್ನು ತಡೆದು ನಿಲ್ಲಿಸಬಹುದೆಂದು ಅನೇಕ ತಜ್ಞರು ಅಭಿಪ್ರಾಯಪಡುತ್ತಾರೆ. ಈ ಮಧ್ಯೆ ತಾ. 30 ರಲ್ಲಿ ಹಿಟ್ಲರನ್ನು ತಾನು ಅಧಿಕಾರಕ್ಕೆ ಬಂದ 12 ನೇ ವಾರ್ಷಿಕೋತ್ಸವದ ಸಂಗರ್ಭದಲ್ಲಿ ಭಾಷಣಮಾಡಿತ್ತಾ ಹೀಗೆ ಹೇಳಿದನು. 'ಈಗ ನಾವು ಅನ ಭವಿಸುತ್ತಿರುವ ಕಷ್ಟಗಳು ಸಹಿಸಲಾರದವು. ರಷ್ಯಾ ಪ್ರದೇಶವನ್ನು ಜಯಿಸಿ ಲಿಯೂದರೆ ಮುಂದೆ ನಾವು ಪಡಬೇಕಾದ ಕಷ್ಟವು ಮುಂದೆ ಇರುವ ತೃಣವು ಯೆಂದಾಗುವದು. ಅವರಿಂದ ಗಿ ಎಷ್ಟೋ ಯೂರೋಪೇ ನೀಶವಾಗುವದು. 1933 ರಿಂದ ಜರ್ಮನಿಯು ಶಕ್ತಿಯಿಂದ ಪುನ್ನಮಿರಿ ಬೆಳೆಯುತ್ತಿದೆ. ಈ ಪ್ರತಿಭಟನ-ಶಕ್ತಿಯಿಂದ ನಾವು ಜಯವನ್ನು ಪಡೆಯುವಿರೆವು. ನಮ್ಮ ಜೊತೆಯಲ್ಲಿರುವ ಯೂರೇ ಅಗಲೀ ನಮ್ಮ ಹಿನ್ನೆಲೆಯಲ್ಲಿ ನಿಂತು ನಮ್ಮನ್ನಿರಿಯುವಾದರೆ ನಾವು ಬೆದರದೆ ವಿಜಯದ ಕನಕ ಮುಂದರಿಯುವೆವು ಇವಿದನರಿಗೆ ಯೋಗ್ಯ ಪ್ರತೀಕಾರವನ್ನು ಮಾಡುವೆವು. ಯುದ್ಧದಲ್ಲಿ ಮಿತ್ರರು ಜಯಪಡೆಯರು. ಪಡೆದರೂ ರಷ್ಯಾತತ್ವವನ್ನು ಸಾಧಗೊಳಿಸಲಾರರು. ನಮ್ಮ ಶತ್ರುವು ಯಾವದೇ ರೀತಿಯ ಪೀಡೆಯನ್ನನುಸರಿಸಲಿ ಅದನ್ನು ಲೆಕ್ಕಿಸದೆ ಯುದ್ಧ ಮಾಡುವೆವು. ತನ್ನ ಇಡೀ ಜೀವಮಾನವನ್ನೆಲ್ಲಾ ಪನ್ನ ಜನಾಂಗದ ಹಿತಕ್ಕಾಗಿ ಧಾರೆಯೆರೆದು ದುಡಿಯುತ್ತಿರುವ ಒಬ್ಬ ಮನುಷ್ಯನ ಶ್ರಮಕ್ಕೆ ದಯ್ಯಮಯನಾದ ದೇವರು ತಕ್ಕ ಫಲಕೊಡದಿರಲಾರನು. ಆದ್ದರಿಂದ ಜರ್ಮನರೆಲ್ಲರೂ ಒಗ್ಗಟ್ಟಾಗಿ ತಮ್ಮ ರಾಷ್ಟ್ರದ ಹಿತಕ್ಕಾಗಿ ಯುದ್ಧ ಮಾಡಬೇಕು. ಶಕ್ತಿಮಿರಿ ದುಡಿಯಬೇಕು.' ಹಿಟ್ಲರನ ಭಾಷಣದ ಸಾರವನ್ನು ನೋಡಿದರೆ ಎರಡು ಅಭಿವ್ಯಾಯಗಳು ಎದ್ದು ತೋರುತ್ತವೆ. ಒಂದು ರಷ್ಯಾ, ಬ್ರಿಟನ್‌ಗಳೊಳಗೆ ತಿಕ್ಕಾಟ ತರುವ ಅಭಿವ್ಯಾಯ ಮತ್ತೊಂದು ತಾನು ಜರ್ಮನಿಯ ಅಭಿವೃದ್ಧಿಯನ್ನು ಮಾಡಿರುವೆನು; ಅದಕ್ಕೆ ದೇವರ ಬೆಂಬಲ ಅಧಿಕ ತಿ ಜಯದೊರೆಯುವದೆಂಬಂಗ. ಒಂದನೆಯ ವಿಚಾರವನ್ನು ಪರಿಶೀಲಿಸಿದರೆ ಹಿಟ್ಲರನಿಗೆ ಸಫಲತೆದೊರೆಯುವದು ಗುಂದದೆ ಮಾತು. ರಷ್ಯನರು ಸೋವಾಗಿ ಬರ್ಲಿನಿಗೆ ಬಾಗುತ್ತಿರುವಾಗ ಈ ಸೂತ್ರನ ಪ್ರಯೋಜನ ಹೆಚ್ಚಿಲ್ಲ. ಒಂದು ವೇಳೆ ಬ್ರಿಟನ್ ರಷ್ಯಗಳೊಡನೆ ಮಂದೆ ಘರ್ಷಣೆಬಂದರೂ ಹಿಟ್ಲರನಿಗೆ ಲಭವಾಗುವ ಹಗೆಕಣ್ಣಪದಿಲ್ಲ. ರಷ್ಯನರು ಬರ್ಲಿನಿನ ಮೇಲೇರಿ ಬಾರದರೇ. 'ನಮಗೆ ಜಯವು ದೊರೆಯಿದರಿಲ್' ಎಂಬ ಆತನ ಎಡನೇ ನಂಬಿಕೆಯು ಜಿಕಾದ ಯೆಕವಾಗಿ ಕಂಡುಬರುವದಿಲ್ಲ. ಹಿಟ್ಲರನ ಭಾಷಣದಿಂದ ಆತನಲ್ಲಿ ಧೈರ್ಯವಿದೆ, ಕಚ್ಚಿದೆ, ಧೃತಿಯಿದೆ ಎಂಬುದು ಕಂಡ ಒಂದೂ ಅವರಿಗೆ ವಿಜಯಪೊರೆತೇಕೆಂಬುದಕ್ಕೆ ಈಗ ನನಗೆ ಕೊಡಲ್ಪಡುತ್ತಿರುವ ವಾರ್ತೆಗಳು ಸಮರ್ಥಕವಾಗಿಲ್ಲ ನನ್ನ ವಾರ್ತೆಗಳು ನಿಜವಿದ್ದರೆ ಹಿಟ್ಲರನು ಬರುವ ಎಂಡು ವಾರಗಳಲ್ಲಿ ಜರ್ಮನಿ ಬಿಟ್ಟೋಡಬೇಕು; ಯೂ ರಣರಂಗದಲ್ಲಿ ಸಾಯಲೇಕು. ಇಲ್ಲವೇ ತಲೆಕೆಟ್ಟು ಹುಚ್ಚನಾಗಬೇಕು. ಇಂಥಾ ಪರಿಸ್ಥಿತಿ ಜರ್ಮನಿಗೆ ಬಂದಿದೆಯೆಂಬುದನ್ನು ತಿಗಿನ ವಾರ್ತೆಗಳು ತೋರಿಸುತ್ತವೆ. ಆದರೆ ಹಿಟ್ಲರನ ಭಾಷಣದ ಧಾಟಿಯು ಹಿಮ್ಮೆಟ್ಟಿ ತೋಡಗಿರುವವನ ಮಾತಿನಂತಿಲ್ಲ. ಇರಲಿ, ಜರ್ಮನಿಗೆ ಗಂಡಾಂತರ ದಿನೇ ದಿನೇ ಸನ್ನಿಹಿತವಾಗುತ್ತಿದೆ. ದಂಡ್ಪಸ್ಟಚನೇನೋ ಕಚ್ಚಿಮದಲ್ಲಿ ಬಹು ಪ್ರಯಾಸದಿಂದ ಹೋರಾಡಿದರು ಪ್ರಯೋಜನವಾಗುತ್ತಿಲ್ಲ. ಮುನ್ನೆಜ್ಜೆಯ ಜನರಾಯಕರನ್ನು ಹಿನ್ನೆಟ್ಟಿಸಿ ಬಲಿಷ್ಠ ಸೈನ್ಯವನ್ನು ಹಿಮ್ಮರಿಸುವುದೂ ಕಷ್ಟಕರವಾಗಿದೆ.

ಈ ಮಧ್ಯೆ ವಿಶ್ವರಾಷ್ಟ್ರಗಳ ಮಹಾ ಮುಖ್ಯರಾದ ಮೂರು ಜನರ (ಸೊದಲು ನಾಲ್ಕು ಜನರಿದ್ದರು. ಆದರೆ ದಿನ ಕಳೆದಂತೆ ಪ್ರಬಲ ಚೀನಾದ ಚಿಯಾಂಗ್ ಕೈಶೆಕ್ ಹೊರತು ಈ ಶ್ರೀಮಂತರಗಳ ಒಟ್ಟಿಯಿಂದ ಮಾಯವಾಗತೊಡಗಿದೆ!) ರೂಸ್ವೆಲ್ಟ್, ಚರ್ಚಿಲ್, ಸ್ಟಾಲಿನ್-ಭೇಟಿಯು (ಮಾಸ್ಕೋ ಯಾನದೀ ಸ್ಥಳದಲ್ಲಿ ನಡೆಯುತ್ತಿರುವ ರಾಗಿ ತಿಳಿಯಬೇಕಿದೆ. ಈ ಮಾಸ್ಟಿಂಗ್‌ನ ಫಲಿಯೂ ಪಿಚಾರಗಳನ್ನು ಬರ್ಜಾಯವರೇ ತಿಳಿದಿರಬಹುದು.

ಈ ಮಧ್ಯೆ ಪೂರ್ವಭಾಗದಿಂದ ರಭವಾರ್ತೆಗಳು ಬಂದಿವೆ. ಸಿಲೆಷ್ಯೆನಿನಲ್ಲಾ ಗುತ್ತಿರುವ ಕದನವು ಭೀಕರರೂಪತಾಳುತ್ತಿದೆ. ಇದೀಗ ಫಿಲಿಷ್ಯೆನಿನ ಮುಖ್ಯನಗರವಾದ ಪಸಿಲ್ಲಾವು ಜನರಲ್ ಮೆಕಾರ್ಥರವರ ಕೈವಶವಾಗಿದೆ. ಜಪಾನರ ಯುದ್ಧ ಚಟುವಟಿಕೆಯ ವಿಷಯ ಹೆಚ್ಚಿನ ವರದಿಗಳೇನೂ ಬಂದಿರುವದಿಲ್ಲ.

ಬರ್ಮಾಗಡಿಯಲ್ಲಿ ಮಿತ್ರರ ಟ್ಯಾಂಕುಗಳು ಇರಾವತಿ ನದಿಯನ್ನು ದಾಟಿ ಮುಂದೆ ಸಾಗಿವೆ ಜಪಾನ್ ಪ್ರತಿಭಟನೆ ಜೋರಾಗಿಲ್ಲ ಬರ್ಮಾದಲ್ಲಿ ಜಪಾನರು ಹೊಸ ಸರಕಾರವನ್ನು ಸ್ಥಾಪಿಸಿರುವರು. ಹಿಂದಿನ ಸರಕಾರವನ್ನು ತೆಗೆದುಹಾಕಿದ್ದಾರೆ.

## ಹಿಂದೀ ಸಮಸ್ಯೆಯ ಪರಿಹಾರ.

ಲೇ:- 'ಪಸು'

ಹಿಂದೂಸ್ಥಾನದ ರಾಜಕೀಯ ಸಮಸ್ಯೆಯು ಒಂದು ಗೂಢಾರ್ಥವಾಗಿ ಅದನ್ನು ಪರೀಕ್ಷಿಸಿ ತಿಹರನ್ನು ಬಿಡಿಸಲು ನುಗ್ಗಿದವರಿಲ್ಲರೂ ವಾಲಿಂತಾದವರಾಗುತ್ತಿರುವದು ಸಿಷಾದದ ಸಂಗತಿ. ಅನೇಕರು ಹಿಂದೂಸ್ಥಾನ್ಯರನ್ನು ಬಗೆದರಿಸಲು ಸ್ವಯತ್ನ ಪಟ್ಟರು. ಅನೇಕರು ಸ್ವಯತ್ನಪಟ್ಟಿದ್ದಾರೆ ಆದರೆ ಯಸಸ್ಸಾಗಿಲ್ಲ. ಹೊತೆಗೆ ಸಮಸ್ಯೆಯನ್ನು ಬಗೆಹರಿಸಲು ಉಗ್ರಸ್ವರೂಪದ ಸೂಚನೆಯರ ಆಕಸ್ಮಿಕಗಳಲ್ಲಿ ಇವರ ಪ್ರಯತ್ನಗಳೆಲ್ಲಾ ಪಣ್ಣಾಗೂರಿಸುವ ಶಕ್ತಿಯೊಂದು ಈ ರಾಜಕೀಯ ಅರ್ಯಾಮಿಕತೆಯಲ್ಲಿದೆ. ಈ ವೈಚಾರಿಕ ಶಕ್ತಿಯ ಅರಿವು ಜನತೆಯಲ್ಲಿಗೆ ಮೊದಲೇ ಆಗಿದೆ. ಆದರಲ್ಲಿ ಭಾರತ ರಾಷ್ಟ್ರಗಳು ಕಾಂಗ್ರೆಸ್ಸು ಇದನ್ನು ಚೆನ್ನಾಗಿ ತಿಳಿದು ಆ ದಿಕ್ಕಿನಲ್ಲಿ ಇಲ್ಲಿಯವರೆಗೆ ಕೆಲಸ ಗಿದೆ' ಎಂಬುದು ಉಚ್ಚರಿಸಿ ಸುಡಿಯಲು. ಈ ಗೂಢ ವಾಕ್ಯಾರ್ಥದಲ್ಲಿ ಒಂದು ತಿಳಿಸಿಗ ದೇಶಿಯ, ಸಲಸಿಸಲಾಡಿಯಗಿ, ಜೈಕಸ್ಥಿದ ಜಲುಸೆಯಾಗಿರುವ ಸೃಷ್ಟಿ ಮಹಾಶಕ್ತಿ ಗಾಂಧೀಕಿಯವರು ನೆನ್ನೆಯಿಗೆ ಪೂರ್ಣ ಕಾಂಗ್ರೆಸಿನ ಬ್ರಿಟಿಷರೇ, ಹೇಟಿಟ್ಟು ತೊಲಗಿರಿ' ಎಂಬ ನಿರ್ಣಯವಷ್ಟೆ ಅಥ ವಸ್ತು ವಿವರಿಸಿದ್ದಾ. ಹಿಂದೂಸ್ಥೇರದಲ್ಲಿ ಬ್ರಿಟಿಷರು ಯೂ ಸುತ್ತಿನ ಜನಾಂಗದವರು ಇರಲು ಬಾರದೆಯಂತ ಅತಂಕವಿಲ್ಲ. ಆದರೆ ಅವರು ಸ್ವಹಿತರಂತೆ ಇರಬಾರದೇ ನಿಸರ್ಗದ ಜವಸಂಕಲ್ಪ' ಎಂದರೆ ಬ್ರಿಟಿಷರ ಅಧಿಕಾರ ಜಾರತ ವಿಂದ ತೊಲಗಬೇಕು. ಈ ಅಧಿಕಾರವೇ ವಿಂದೀ ಸಮಸ್ಯೆಯ ಉತ್ತರಕ್ಕೆ ತೆರೆದಾಗಿದೆ.

ಭುವನಾಯಿ ಮೈಸಾಯಿಯವರು ಮುಸ್ಕಿಂದೀಗಳ ಕಾರ್ಯಾಧಿಕಾರಗಳ ಕಾಲ ಕೆಳಾಸರ ಆಯೋಜನೆಯ ಪಲವಾರು ರಾಷ್ಟ್ರಗಳ ಕಾನ್ಸ್ಟಿಟ್ಯೂಷನ್ನು ಕಾದು ಸಾರಾಂಶ ಕೇಂದ್ರದಲ್ಲಿ ಸಮ್ಮಿಶ್ರ ಮಂತ್ರಿಮಂಡಲವನ್ನು ರಚಿಸುವ ಸಿಚಾರದಲ್ಲಿ ಲ್ಯಾಬರ್ ಪಕ್ಷದ ಒಲ್ಲಂದವಾಗಿದೆಯೆಂದೂ, ಇದ ಕಾರಣವೇ ಭುಲಾಬಾಯಿಯವರು ಸೈದ್ಧಾಂತಿಕ್ಕವನ್ನು ಮಾತ್ರಾತ್ಮಸ್ಸನ್ನು ಕಂಡರು; ಪೂರ್ಣ ಸೈದ್ಧಾಂತಿಕ್ಕವನ್ನು ಕಾಣಲಾಗದೆಂದು ಅಭಿಪ್ರಾಯಪಟ್ಟರು.

# ಕೊ ಡ ಗು

ತಾ. ೯-೨-೧೯೪೫ನೇ ಶುಕ್ರವಾರ


## ಕೆಲಸಗಾರರು ಮುಂದೆ ಬರಬೇಕು.

ಅಖಿಲ ಭಾರತ ಕಾಂಗ್ರೆಸಿನ ಆಶ್ರಯದಲ್ಲಿ ಮಾದರಿ ಗ್ರಾಮಗಳನ್ನು ರಚಿಸುವ ಕಾರ್ಯಕ್ರಮವು ಜಾರಿಗೆ ಹಲವೆಡೆ ಬಂದಿದೆ. ಇದಕ್ಕೆ ಬೇಕಾದ ಒಂದು ಲಕ್ಷ ಕೆಲಸಗಾರರನ್ನು ತರಬೇತು ಮಾಡುವ ಯೋಜನೆಯೂದರೂ ಬರುವ ಏಪ್ರಿಲ್ ತಿಂಗಳಿಂದ ಪ್ರಾರಂಭವಾಗಲಿದೆ. ಭರತ ಖಂಡದಂಥಾ ಹಳ್ಳಿಗರ ನಾಡಿನಲ್ಲಿ ಹಳ್ಳಿಗಳ ಉದ್ಧಾರವೇ ರಾಷ್ಟ್ರದ ಉದ್ಧಾರ. ಹಳ್ಳಿಗಳೇ ರಾಷ್ಟ್ರದ ಜೀವನಾಡಿಗಳು ಈ ನಾಡಿಗಳಲ್ಲಿ ಪರಿಶುದ್ಧರಕ್ತ ಸಂಚರಿಸುವಂತಾದರೆ ಆರ್ಥಿಕ ಹಳ್ಳಿಗಳ ಉದ್ಧಾರವಾದರೆ ನಾಡಿನ ದೇವತೆ ಭಾರತಾಂಬೆಯು ನಗುಮುಖದಿಂದ ನಲಿಯುವಳು, ಎಂಬುದರಲ್ಲಿ ಎರಡಭಿಪ್ರಾಯಗಳಿಲ್ಲ. ಆದರೆ ಯೊವ ಯೋಜನೆಯು ಯಶಸ್ವಿಯೂಗಬೇಕಾದರೂ ಅದಕ್ಕೆ ತಕ್ಕ ಕಾರ್ಯಕರ್ತರು ಬೇಕು. ಹಿಂದೂದೇಶದ ಆದ್ಯಂತಕ್ಕೂ ಜನತೆಯು ಮಹಾತ್ಮರ ಆಣತಿಯಂತೆ ವಿಧಾಯಕವಾದ ಈ ಗ್ರಾಮವು ನರುಜ್ಜೀವನ ಕಾರ್ಯಕ್ಕೆ ಕೈಹಾಕಕೊಡಗಿದೆ. ಅದಕ್ಕಾಗಿ ಬೇಕಾದ ಕೆಲಸಗಾರರ ತರಬೇತಿನ ವ್ಯವಸ್ಥೆ ಮಾಡತೊಡಗಿದೆ. ಈ ಕಾರ್ಯದಲ್ಲಿ 'ನೊಡಗು ಹಿಂದಿರಲು ಸಾಧ್ಯವಿಲ್ಲ. 'ಮಣಗಟ್ಟಿ ಮಾತಿಗಿಂಥಾ ಔನ್ಸಿನಷ್ಟು ಕೃತಿಮೇಲು' ಎಂಬ ನಾಣ್ನುಡಿಯಂತೆ ಕೊಡಗಿನವರು ಮುಂದೆ ಬಂದು ಮುಂದಿರುವ ರಾಷ್ಟ್ರರಚನಾಕೃತಿಯಲ್ಲಿ ಭಾಗವಹಿಸಬೇಕು ಅದಕ್ಕೆ ಯೋಗ್ಯರಾದವರು ಅಂದರೆ ಹಿಂದೀ ಭಾಷೆಯ ಪೂರ್ಣಜ್ಞಾನವಿರುವವರು, ತಮ್ಮ ಸರ್ವಸ್ವವನ್ನೂ ರಾಷ್ಟ್ರಹಿತಕ್ಕಾಗಿ ತ್ಯಾಗಮಾಡುವೆನೆನ್ನುವವರು, ಜಗತ್ತಿನ ಆಗುಹೋಗುಗಳ ಸಾಕಷ್ಟು ಜ್ಞಾನವಿರುವವರು ಈ ಗ್ರಾಮ ಕೆಲಸಗಾರರ ತರಬೇತಿಗೆ ಮುಂದೆ ಬರಬಹುದು. ಈ ತರಬೇತು ಸೇವಾಗ್ರಾಮದಲ್ಲಿ, ಮಹಾತ್ಮಗಾಂಧಿಯವರ ಸನ್ನಿಧಿಯಲ್ಲಿ ನಾಲ್ಕು ವರ್ಷಗಳವರೆಗೆ ನಡೆಯುವದು. ಅಲ್ಲದೆ ಇದೇ ತಾ. 22 ರಿಂದ ಮೂರುವಾರಗಳ ವರೆಗೆ ಕಸ್ತೂರ್‌ಬಾ ನಿಧಿಯ ಸಮಿತಿಯ ಕಾರ್ಯಕರ್ತರಿಗೂ, ಮತ್ತು ಆರುವಾರಗಳ ವರೆಗೆ ರಾಷ್ಟ್ರೀಯ ಶಾಲೆಯ ಮತ್ತು ವೈದ್ಯಕೀಯ ಪಥಕಗಳ ಶಿಕ್ಷಕರಾಗಲಿರುವವರಿಗೂ ತರಬೇತು ಸೇವಾ ಗ್ರಾಮದಲ್ಲಿ ಕೊಡಲಾಗುವದು. ಕೊಡಗು ಕಸ್ತೂರ್‌ಬಾ ನಿಧಿಯ ಸಮಿತಿಯವರು ಕೆಲವರನ್ನು ಮುಖ್ಯವಾಗಿ ಹೆಂಗಸರನ್ನು ತರಬೇತಿಗೆ ಕಳುಹಿಸಲು ನಿಶ್ಚಯಿಸಿರುವರೆಂದು ತಿಳಿಯ ಬಂದಿದೆ. ಆದ್ದರಿಂದ ಕೆಲಸ ಮಾಡಲು ಹುರುಪಿರುವ, ದೇಶದ ಹಿತಕ್ಕಾಗಿ ಕಾತುರರಿರುವ, ಭಾರತಾಂಬೆಯ ಸೇವೆ ಮಾಡಲಿರುವ ಮಹಿಳೆ ಮಹನೀಯರು ಮುಂದೆ ಬರಬೇಕಾಗಿದೆ. ತಾವು ಭರತ ಖಂಡದಲ್ಲಿ ಹುಟ್ಟಿದ್ದನ್ನು ಸಾರ್ಥಕಗೊಳಿಸಬೇಕೆಂದಿರುವವರು, ಇಹದಲ್ಲಿ ಸ್ವಾತಂತ್ರ್ಯ ಪರದಲ್ಲಿ ಮೋಕ್ಷ ಪಡೆದು ಪಾವನರಾಗಲು ಮುಂದೆ ಬರಬೇಕು. ಕೊಡಗುನಾಡಿನಲ್ಲಿ ಇಂಥಾ ಸೇವಕರಿಗೆ ಕೊರತೆಯಿಲ್ಲ ನೆಂಬದನ್ನು ರುಜುಪಡಿಸಬೇಕಾಗಿದೆ.

## ವರ್ತಮಾನ.

ತಾರೀಕು 3 ಮತ್ತು ನಾಲ್ಕರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರದರ್ಶನದಲ್ಲಿ ಕೊಡಗಿನ ಕಿತ್ತಳೆ ಮೂಂಟದ ಸಂಘವು ಪ್ರದರ್ಶಿಸಿದ ಕಿತ್ತಳೆ ಹಣ್ಣು, ಬಾಳೆ ಹಣ್ಣು ಮತ್ತು ಜೇನನ್ನು ವೈಸರಾಯ ದಂಪತಿಗಳು ನೋಡಿ ಪ್ರಶಂಸಿಸಿದರೆಂದೂ, ಅಲ್ಲಿದ್ದ ಕೊಡಗಿನ ಸಹಕಾರಿ ಇಲಾಖೆಯ ರಿಜಿಸ್ಟ್ರಾರವರು ಕೆಲವು ಕಿತ್ತಳೆ ಹಣ್ಣು ಮತ್ತು ಸ್ವಲ್ಪ ಜೇನನ್ನು ವೈಸರಾಯರ ಪತ್ನಿಗೆ ಒಪ್ಪಿಸಿದರೆಂದೂ, ಪ್ರದರ್ಶನದಲ್ಲಿ ಕೊಡಗಿನ ಕಿತ್ತಳೆ ಸಂಘವು ಬಹುಮಾನವಾಗಿ ಒಂದು ದೊಡ್ಡ ಬೆಳ್ಳಿಯ ಬಟ್ಟಲನ್ನು ಪಡೆಯಿತೆಂದೂ ತಿಳಿಯಬರುತ್ತದೆ.

ಶ್ರೀಮತಿಯರಾದ ಪಂದ್ಯಂಡ ಸೀತಾ ಬೆಳ್ಯಪ್ಪ, ಸಿ. ಎನ್. ಗೌರಮ್ಮ, ಪಟ್ಟಡ ದೇಚಮ್ಮ, ಮಿಸೆಸ್. ಪಾಂಡಂಡ ಸೋಮಪ್ಪ, ಶ್ರೀಯುತರುಗಳಾದ ಡಾ ನಂಜುಂಡೇಶ್ವರ, ಕೆ. ಸಿ. ಕರುಂಬಯ್ಯ, ಇವರುಗಳನ್ನು ಕಸ್ತೂರ್ ಬಾ ಸ್ಮಾರಕ ನಿಧಿಯ ಕಾರ್ಯಕಾರಿ ಮಂಡಳದ ಸದಸ್ಯರಾಗಿ ಆರಿಸಲಾಗಿದೆ.

ಆಹಾರ ಪರಿಷತ್ತಿನ ಸಂಬಂಧ ಡೆಲ್ಲಿಗೆ ಹೋಗಿದ್ದ ಚೀಫ್ ಕಮಿಷನರವರು ಈ ತಾ. 6ರಲ್ಲಿ ಕೊಡಗಿಗೆ ವಾಪಸು ಬಂದು ತಮ್ಮ ನಾಲ್ಕು ನಾಡು ಬಂಗ್ಲೆಗೆ ಹೋಗಿರುವರು. ತಾ. 9ರಲ್ಲಿ ಮಡಿಕೇರಿಗೆ ಬರಲಿರುವರು. ಇವರು ಡೆಲ್ಲಿಯಲ್ಲಿ ಇದ್ದಾಗ ಇವರ ಕಿರಿಯ ಪುತ್ರಿಯು ತಾರೀಕು 28-1-45ರಲ್ಲಿ ವೈಶೂರಿನಲ್ಲಿ ಶಿವಾಧೀನರಾದರು.

ತಾ. 8-2-45 ರಲ್ಲಿ ಮಡಿಕೇರಿಯಲ್ಲಿ ನಡೆದ ಕೊಡಗು ಕಸ್ತೂರ್ ಬಾ ಸ್ಮಾರಕ ನಿಧಿಯ ಸಭೆಯಲ್ಲಿ ಹನ್ನೆರಡು ಜನ ಸೂಲಗಿತ್ತಿಯರನ್ನು ಮತ್ತು ಎರಡು ಜನ 'ಹೆಲ್ತ್ ವಿಸಿಟರ್ಸ್'ಗಳನ್ನು ತರಬೇತುಮಾಡುವ ಯೋಜನೆಯನ್ನು ಒಪ್ಪಲಾಗಿದೆ.

ಸೋಮವಾರಪೇಟೆಯ ದಿವಂಗತ ತಮ್ಮಣ್ಣನವರ ಜ್ಞಾಪಕಾರ್ಥವಾಗಿ ಶ್ರೀ. ದಾಸಪ್ಪನವರು ಇಟ್ಟಿರುವ ಹಾಕಿಕಪ್ಪಿನ ಪಂದ್ಯಾವಳಿಯ ಕೊಡಗು ಎತ್ತಿಟಿಕ್ ಸಂಘದ ಆಶ್ರಯದಲ್ಲಿ ನಡೆದು ತಾ. 7-2-45 ರಲ್ಲಿ ಕಡೇ ಆಟಕ್ಕೆ ನಿಂತ ದಕ್ಷಿಣ ಕೊಡಗಿನ 'ವೈಟ್ ಯೂನಿಯನ್' ಟೀಮನ್ನು ಮಡಿಕೇರಿಯ 'ವಾಂಡರರ್ಸ್ ಬ್ಲೂ' ಟೀಮಿನವರು ಸೋಲಿಸಿ ಬಟ್ಟಲನ್ನು ಪಡೆದರು.

1942 ರಲ್ಲಿ ನಡೆದ ಅಸ್ಸಾಮು ಚಿಮೂರು ಕೇಸಿನ ಸಂಬಂಧ ಮರಣದಂಡನೆಗೆ ಗುರಿಮಾಡಲ್ಪಟ್ಟಿದ್ದ 15 ಜನರ ಪ್ರಾಣರಕ್ಷಣೆ ಮಾಡಬೇಕೆಂದು ದೇಶದ ಉದ್ದಗಲಕ್ಕೂ ಮನವಿಗಳು ಕಳುಹಿಸಲ್ಪಟ್ಟಂತೆ ಕೊಡಗಿನಿಂದಲೂ ಹಲವು ಜನರಿಂದ ಸಹಿ ಮಾಡಲ್ಪಟ್ಟ ಒಂದು ಮನವಿಯು ತಾ. 27-1-45 ರಲ್ಲಿ ಮಧ್ಯಪ್ರಾಂತದ ಗವರ್ನರರಿಗೆ ಕಳುಹಿಸಲ್ಪಟ್ಟಿದಲ್ಲದೆ, ವೈಸರಾಯರಿಗೆ ಒಂದು ತಂತಿಯನ್ನೂ ಕಳುಹಿಸಲಾಗಿತ್ತು. ಶಿಕ್ಷೆಗೆ ಗುರಿಮಾಡಲ್ಪಟ್ಟ ಮೇಲ್ಕಂಡ ಮಹನೀಯರನ್ನು ಮರಣ ದಂಡನೆಗೆ ಗುರಿಮಾಡದೆ ಜೀವಾವಧಿ ಶಿಕ್ಷೆಗೆ ಇಳಿಸಿರುವದಾಗಿ ಇತ್ತಲಾಗಿ ತಿಳಿದು ಬಂದಿದೆ.

ಕೊಡಗು ನ್ಯಾಯವಿಧಾಯಕ ಸಭೆಯ ಬಜೆಟ್ ಮೀಟಿಂಗು ತಾ. 12.3.45 ರಲ್ಲಿ ನಡೆಯುವದು. ಅರಾವು ಕಳುಹಿಸಲು ಕಡೇ ತಾರೀಕು 28-2-45 ಎಂದು ನಿಶ್ಚಯಿಸಿದೆ.

ಕೊಡಗಿನಲ್ಲಿ ಡಿಸೆಂಬರ್ ತಿಂಗಳಲ್ಲಿ 210 ಜನನಗಳೂ 305 ಮರಣಗಳೂ ಸಂಭವಿಸಿವೆಯೆಂದು ಪ್ರಕಟವಾಗಿದೆ.

ತಾ. 4-2-45 ರಲ್ಲಿ ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ ಕೊಡಗಿನ ಹೈಸ್ಕೂಲುಗಳ ವಾರ್ಷಿಕೋತ್ಸವ ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ನಡೆಯಿತು. ಸೋಮವಾರಪೇಟೆ ಹೈಸ್ಕೂಲಿನ ಶ್ರೀ. ಪುಟ್ಟಸ್ವಾಮಿಯವರಿಗೆ ಪ್ರಥಮ ಬಹುಮಾನವೂ, ಮಡಿಕೇರಿ ಹುಡುಗಿಯರ ಹೈಸ್ಕೂಲಿನ ಶ್ರೀಮತಿಯರಾದ ಕೆ. ಟಿ. ಬೋಜಮ್ಮ ಮತ್ತು ಎಂ. ಎಂ. ಮುತ್ತಮ್ಮ ನವರಿಗೆ ದ್ವಿತೀಯ ಮತ್ತು ತೃತೀಯ ಬಹುಮಾನಗಳೂ ದೊರೆತವು. ಅದೇ ದಿನ ಶ್ರೀ ಕೆ. ಪಿ. ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀ. ಎಂ. ಎಸ್. ಅನಂತ ಪದ್ಮರಾಯರು 'ಕನ್ನಡ ಹಬ್ಬ'ದ ವಿಚಾರ, ಶ್ರೀ. ಬಿ. ಡಿ. ಗಣಪತಿಯವರು 'ಕನ್ನಡ ಸಾಹಿತ್ಯ'ದ ವಿಚಾರ ಮತ್ತು ಶ್ರೀ. ಜಕ್ರದಾನ ಮೂರ್ತಿ ಬಿ. ಎ. ಇವರು 'ಶಿವಶರಣ ಸಾಹಿತ್ಯ'ದ ವಿಚಾರ ಭಾಷಣಮಾಡಿದರು.

ತಾ. 14-2-45 ರಿಂದ 20-2-45 ರ ವರೆಗೆ ಪ್ರತಿ ದಿನ ಸಾಯಂಕಾಲ 7 ಗಂಟೆಗೆ ಶ್ರೀ. ರಾಮಕೃಷ್ಣ ಜಯಂತಿಯ ನಿಮಿತ್ತ ಮಡಿಕೇರಿ ವೇದಾಂತಮಂದಿರದಲ್ಲಿ ಭಾಷಣ, ವಾಚನ, ಸಂಗೀತ, ಹರಿಕಥೆ ಮೊದಲಾದುವನ್ನು ಏರ್ಪಡಿಸಲಾಗಿದೆಯಂತೆ.

### ಸಿದ್ದುಪಡಿ

ಮುಜರಾಯಿ ಇಲಾಖಾ ಕಮಿಟಿಯಲ್ಲಿ ಖಾಲಿಬಿದ್ದಿರುವ ಸ್ಥಳದ ಚುನಾವಣೆಯ ತಾ. 21-2-45 ರಲ್ಲಿ ವೀರಾಜಪೇಟೆಯಲ್ಲಿ ಅಡಿಕೆ ನಂಜಪ್ಪನವರ ಛತ್ರದಲ್ಲಿ ಮಧ್ಯಾಹ್ನ 12 ಗಂಟೆಯಿಂದ 5 ಗಂಟೆಯ ವರೆಗೆ ನಡೆಯುವದು.

---

## 'ಜಪಾನು ಬೇಗನೆ ಶರಣು ಹೊಡೆಯದು'

ಅನೇರಿಕಾದ 'ನ್ಯೂ ಯಾರ್ಕ್ ಟೈಮ್ಸ್' ಪತ್ರಿಕೆಯಲ್ಲಿ ಜಾರ್ಜ್ ಎಕ್ಸೆಲ್‌ಸನ್ ಎಂಬುವವರು ಜಪಾನಿನಲ್ಲಿ 7 ವರ್ಷಗಳ ವರೆಗಿದ್ದ ಒಬ್ಬ ಸ್ವೆಯಿನ್ ದೇಶದ ಮಿಶನರಿಯ ಅಭಿಪ್ರಾಯವನ್ನು ಹೀಗೆ ಬರೆದಿದ್ದಾರೆ. 'ಪ್ರಥಮವಾಗಿ ನಾನು ಧೃಢಪಡಿಸಿ ಹೇಳುವದೇನಂದರೆ ಜಪಾನು ಶೀಘ್ರವಾಗಿ ಸೋಲಲಾರದು, ಜಪಾನೆಂದರೆ ಇಂಗ್ಲೆಂಡಿನಂತೆಯೇ ಒಂದು ದ್ವೀಪಸ್ತೋಮ. ಪ್ರತಿಯೊಂದೂ ಯುದ್ಧದೃಷ್ಟಿಯಿಂದ ಒಳ್ಳೆ ಆಯಕಟ್ಟಿನ ಸ್ಥಳದಲ್ಲಿವೆ. 1940-41 ರಲ್ಲಿ ಆಜೇಯವೆನಿಸಿದ್ದ ಜರ್ಮನ್ ಸೈನ್ಯಕ್ಕೆ ಹೇಗೆ ಇಂಗ್ಲೆಂಡನ್ನು ನುಗ್ಗುವದು ಅಸಾಧ್ಯವಾಯಿತೋ ಹಾಗೆಯೇ ಜಪಾನಿನ ದ್ವೀಪಗಳಿಗೆ ಕಾಲಿಡಲು ಮಿತ್ರರಾಷ್ಟ್ರದವರಿಗೆ ಅಸಾಧ್ಯ. ಕಳೆದ ಆನೇಕ ವರ್ಷಗಳಿಂದ ಈ ದ್ವೀಪಗಳ ರಕ್ಷಣೆಯು ಶಿಸ್ತಿನಿಂದ ಶಾಸ್ತ್ರೀಯ ರೀತಿ ನಡೆದಿದೆ. ಜಪಾನರಲ್ಲಿ ಯುದ್ಧದಲ್ಲಿ ತಮಗೆ ಅಪಜಯವಾದೀತೆಂಬ ಭಾವನೆ ಕನಸಿನಲ್ಲಿಯೂ ಇಲ್ಲ. ಜಪಾನರಿಗೆ ತಮ್ಮ ವಿಮಾನಬಲದ ಮೇಲೆ ಹೆಚ್ಚು ನಂಬಿಕೆಯಿದೆ. ಮಿತ್ರರು ತಮ್ಮ ವಿಮಾನ ಧಾಳಿಗಳಿಂದ ಒಂದು ವೇಳೆ ಟೋಕಿಯೋ ನಗರವನ್ನು ನಾಶಪಡಿಸಿದರೂ ಅನಿಸೆ ಸುಸಿಕಟ್ಟಿದಷ್ಟು ಇದರ ಪರಿಣಾಮವೂ. ಜಪಾನರ ಮೇಲಾಗಲಾರದೆಂದು ಅವರು ಭಾವಿಸಿದ್ದಾರೆ. ಯಾಕೆಂದರೆ ಜಪಾನಿನ ಯುದ್ಧಕಾರ್ಖಾನೆ ಮತ್ತಿತರ ಉತ್ಪಾದನಾ ವ್ಯವಸ್ಥೆ ಟೋಕಿಯೋದಲ್ಲಿ ಇಲ್ಲ. ಇಡೀ ದೇಶದ ಉದ್ದಗಲಕ್ಕೂ ಈ ಕೈಗಾರಿಕೆಗಳು ಹಬ್ಬಿವೆ. ಜಪಾನನ್ನು ಆಹಾರವಿಲ್ಲದೆ ತೊಂದರೆಗೀಡುಮಾಡಬಹುದೆಂಬುದೂ ಕನಸಿನ ಮಾತು. ಜಪಾನರು ಈಗೀಗ ಹೆಚ್ಚು ಹಾಲುಗೆಡ್ಡೆಯನ್ನು ಉಪಯೋಗಿಸುತ್ತಾರೆ. ಇದಕ್ಕಾಗಿ ಇವರ ವ್ಯವಸಾಯವೂ ವಿಶಾಲವಾಗಿ ನಡೆದಿದೆ. ಒತ್ತಪ ಬೆಳೆಯು ಎಂದಿಗಿಂತಲೂ ಉತ್ಕೃಷ್ಟ ರೀತಿಯಲ್ಲಿದೆ. ತಿಂಗಳಿಗೆ ಮೂರುವಾರಗಳವರೆಗೆ ಅಕ್ಕಿಯನ್ನು ಮತ್ತೊಂದು ವರಹಾಲುಗೆಡ್ಡೆಯನ್ನು ಉಪಯೋಗಿಸಿ ಉಳಿದ ಅಕ್ಕಿಯನ್ನು ಮುಂದಿನ ಗಂಡಾಂತರ ಕಾಲಕ್ಕೆ ಇವರು ತೆಗೆದಿಟ್ಟಿರುವರು. ಜಪಾನರಿಗೆ ಯೋಧರ ಅಭಾವವೂ ಇಲ್ಲ. ಜಪಾನಿನ ಜನನ ಸಂಖ್ಯೆ ಪ್ರತಿ ವರ್ಷಕ್ಕೆ 2 ಮಿಲಿಯದಂತೆ. ಆದ್ದರಿಂದ ಸೈನ್ಯಕ್ಕೆ ವರ್ಷಕ್ಕೆ ಒಂದು ಮಿಲಿಯ ಜನರು ದೊರೆಯುವರೆಂಬುದು ಸ್ವಯಂಸಿದ್ಧ. ಜಪಾನು ಯುದ್ಧಕ್ಕಿಳಿದ ಅಂದರೆ 1941 ರಿಂದ ಪ್ರತಿವರ್ಷ 1 ಮಿಲಿಯದಂತೆ 3 ಮಿಲಿಯ ಯೋಧರನ್ನು ತಯಾರಿಸಿಟ್ಟಿದೆ. ಈ ಹೊಸ ಸೈನಿಕರು ಹಳೆಯ ಸೈನಿಕರಷ್ಟೇ ದಕ್ಷರೂ, ಕಾರ್ಯಕುಶಲರೂ ಆಗಿರುವರು. ಜಪಾನರಿಗೆ ಸ್ವಲ್ಪ ನಷ್ಟವೂ ಆಗಿದೆ. ನೌಕಾಪಡೆಯಲ್ಲಿ ನಷ್ಟವಾಗಿದೆ ಮಿತ್ರರು ನೌಕಾಮೊಗ್ಗದಲ್ಲಿ ಯಶಸ್ವಿಯಾಗಿ ಅವರಿಗೆ ತೊಂದರೆಕೊಡುತ್ತಿದ್ದಾರೆ. ಮಿತ್ರರ ಈ ಯೋಜನೆಯು ಜಪಾನರ ಶಕ್ತಿಯನ್ನು ಕೆಲಮಟ್ಟಿಗೆ ಕುಂದಿಸಬಹುದಾದರೂ ಜಪಾನರನ್ನು ಸೋಲಿಸಲಾರದು. ಜಪಾನರಿಗೆ ಲೋಹಧಾತುಗಳ ಬಗ್ಗೆ ಅಭಾವವಿದೆಯೆಂದರೂ ಮುಂದೃಷ್ಟಿಯಿಂದ ಅವರು ಅಪಾರ ಲೋಹಧಾತುಗಳನ್ನು ಸಂಗ್ರಹಿಸಿಟ್ಟಿರುವರು. ಆದ್ದರಿಂದ ಜಪಾನು ಬೇಗನೆ ಶರಣಾಗತವಾದೀತೆಂಬುದು ತಪ್ಪುಕಲ್ಪನೆ.'

# PROSPECTUS.

*(A Copy of this Prospectus has been filed with the Assistant Registrar of Joint Stock Companies, North Malabar, Tellicherry, as required by Section 92 (2) of the Indian Companies Act VII of 1913)*

(Consent of the Central Government has been obtained to this issue under the Defence of India Rule 94-A It must be distinctly understood that in giving this consent the Government of India do not take any responsibility for the financial soundness of any scheme or for the correctness of the statements made or opinions expressed with regard to them )

The subscription list will open on the 25th January 1945 and will close without notice.

NO PART OF THIS ISSUE HAS BEEN OR WILL BE UNDERWRITTEN

# The Western India Plywoods, Limited.

(Incorporated in British India under the Indian Companies Act/1913)

**AUTHORISED CAPITAL** .... .... .... .... .... .... ... **15,00,000.**

Divided into 10,000 ordinary Shares of Rs. 100/ each and 5000, Five per cent Cumulative Preference Shares (free of British Income tax) (of Rs 100) each.

PRESENT ISSUE:-10,000 ordinary Shares of Rs 100/- each and 5,000 Five per cent Cumulative Preference Shares of Rs. 100/- each Of these, 3,852 fully paid-up Ordinary Shares to the value of Rs 3,85,200/-are to be issued to the firm of The Western India Plywoods being the amount payable to the firm for the machinery and other moveables to be purchased from them, the shares to be allotted in the names of Vendor as well as other Partners of the firm and their nominees in the proportion of their investment in the said firm and 128 fully paid-up Ordinary Shares to the value of Rs 12,800/-are to be issued to Arinhal Karuvantevalapp l Kunhah Kutty Saheb being the value of lands to be purchased from him The Directors and their friends have agreed to take 3000 ordinary Shares and 1000 Preference Shares. The remaining shares detailed below are now offered for public subscription.

3020 Ordinary Shares of Rs. 100 each payable Rs 50/ per share with application and the balance of Rs 50/-per share on allotment.

and

4000 Five per cent Cumulative Preference shares of Rs 100/-each, payable Rs. 50 -per share with application and the balance of Rs. 50/-per share on allotment

The Preference Shares aforesaid shall confer on the holders the right to a fixed cummulative preferential dividend at the rate of five per cent per annum, free of British Indian Income-tax on the capital for the time being paid thereon from the date of allotment and the right in any winding up to repayment of capital and arrears of dividend, whether earned or declared up to the commencement of winding up, in priority to the Ordinary Shares, but shall not confer any further right to participate in profits or assets

## *DIRECTORS.*

1. A K. KUNHIMAYAN HAJI SAHEB BAHADUR, Merchant, Pannat, Uhyil post.
   *Managing Director*-The Muslim Printing and Publishing Co Ltd , Tellicherry.
   *Director*:-The Kohinoor Saw Mill Co , Ltd , Baliapatam
   ,, Timber and Trading Co., Ltd., ,,
   ,, Ayisha Hosiery Factory Ltd , Palapparamba.
   ,, Tellicherry Tiles Company, Ltd , Pinarayi.
2. C. SAMUEL AARON, ESQ , Merchant, Pappinisseri.
   *Managing Director* -The Aaron Spinning and weaving Mills, Ltd , Pappinisserri.
   *Director* -The Shoranur Metal Industries, Ltd , Shoranur
3. KHAN BAHADUR HAJEE V. ALY BARAMY SAHEB BAHADUR, Merchant, Calicut.
   *Managing Director*-The Kohinoor Saw Mill Co , Ltd., Baliapatam
   *Director* -The Kerala Timber Supply Corporation, Ltd., Kallai
4. V. L. VENUGOPAL, ESQ, Merchant, 'Villa Approach', San Thome High Road, Mylapore, Madras
   *Managing Director* -The Standard Tile and Clay Works, Ltd , Feroke.
   *Director* -The Karnatak Industrial and Plywood Co , Ltd., Supa
   ,, The Standard Furniture Co , Ltd , Kallai
   ,, Stoneware Pipes (Madras) Ltd , Bombay.
   , Vijaya Tiles, Ltd , Colombo
   ,, Indian Sugars and Refineries, Ltd., Hospet
   ,, Vilupuram Industries, Ltd , Villupuram
   ,, Standard Button works (Madras) Ltd.
   ,, Balakrishna Saw Mills Ltd., Feroke
5. JOHN KURUVILLA ESQ, Merchant, Chalakudi
   *Director*.-The Kerala Timber Supply Corporation, Ltd , Kallai.
   ,, Annamalai Timber trust, Ltd , Chalakudi
6. KAYIATH DAMODARAN ESQ , Merchant, Cannanore
   *Director*, Timber and Trading Co., Ltd., Baliapatam
7. A. K. KUNHATTKUTTY SAHEB BAHADUR, Merchant, Pannat, Uhyil
   *Director* -Timber and Trading Co , Ltd , Baliapatam
8. PURUSHOTHAM GOCULDAS SAIT, EQR, Merchant and Banker, Cannanore.
9. A K KADERKUTTY SAHEB BAHADUR, M L A , Merchant, Pannat, Uhyil.
   *Managing Director*:-Timber and Trading Co , Ltd , Baliapatam
   *Director* -Malabar Timber and Saw Mill Co , Ltd., ,,
   ,, Ayisha Hosiery Factory, Ltd , Palapparamba,
   ,, The Aaron Spinning and Weaving Mills, Ltd., Pappinisserri.
   ,, Kohinoor Saw Mill Co., Ltd., Baliapatam.
   ,, The Muslim Literature Society Ltd., Tellicherry
   ,, The Kerala Timber Supply Corporation Ltd , Kallai

**Managing Director:-**

**A. K Kader Kutty Saheb Bahadur**, M. L A., Pannat, Uhyil

**Bankers:-**

The INDIAN BANK Ltd., Cannanore.
The INDIAN OVERSEAS BANK Ltd., Cannanore.

**Leagal Advisers.-**

Sri G Damodara Rao, B A, B L, Advocate, Tellichery.
Sri R Lakshmana Iyer, B A, B L, Advocate, Calicut

**Auditors:-**

Messers. K K. Thampan and Co., Registered Accountants and Auditors, Calicut and
Messers T K Menon and Co., Registered Accountants and Auditors, Calicut.

**Registered Office -**

Mill Road, BALIAPATAM (North Malabar)

**Objects.**-The Company has been formed generally for the purpose of carrying on all or any of the objects set forth in the Memorandum of Association which is annexed hereto and forms part of this prospectus and in particular to

engage in the manufacture and marketing of plywoods and veneers of all sizes. .... .... .... ....

The property proposed to be acquired for erecting the factory was purchased by Mr. A K. Kunhali Kutty for Rs. 12,000/- from the prior owners on the 10th July 1944. Mr. A. K. Kunhali Kutty has since taken a direct renewed lease from the Jenmi for a term of 12 years as and from 27th July 1944, authorising the lessee to erect factory buildings to instal machinery and to use the premises for running a Mill. For the renewal of the lease, a sum of Rs. 800/-was spent by him and he is conveying the property to the Company for his actual cost, namely Rs 12,800/.

**Prospectus**:-There is a great demand for veneer and plywoods now on account of fall in imports due to war conditons Researches have shown that these can be successfully utilised wherever lightness and strength are required in wood work. The directors feel that even in the post war period, demand from home markets would be considerable on account of their utility for various industrial purposes and modern building construction and house furnishing. .... .... .... .... ....

The Directors feel that it would be possible to complete the erection of the machineries and necessary buildings within six months and the Directors hope that the Company would be able to pay dividend even from the first year of its working.

**Directors' Qualification and Remuneration**:—The Qualification of a director other than the Ex-officio director shall be the holding on his own name of shares of the nominal value of Rs 10,000/-. The articles provide that every director including the Ex-Officio director shall be paid out of the funds of the company as remuneration for his service the sum of Rs. 50/-for every meeting of the Directors at which he shall be present in person irrespective of the number of days which the meeting may continue consecutively. He shall also in addition be entitled to be paid travelling allowance on the basis of first class fare as also reasonable boarding and hotel charges for attending such meetings.

The managing Director who is also an Ex-Officio director of the Company shall also be entitled to the like fee and expenses over and above the remuneration payable to him. The managing Director shall not be liable to retirement, nor shall he be liable to be removed by an extraordinary resolution of the Company.

**Interest of Directors**:-Of the directors, Messers. A. K Kunhi Mayan Haji Saheb Bahadur, C. Samuel Aaron, A. K. Kader Kutty Saheb, Khan Bahadur Haji V. Aly Baramy and A K Kunhalikutty Saheb are the partners of the firm of messers. The Western India Plywoods, Baliapatam, from whom the machinery and other movaables for purposes of the factory are proposed to be acquired. Mr. A. K. Kunahalikutty is also the Vendor of the immovable property proposed to be acquired by the company for erecting the factory building and other appurtenances. Mr. A. K. Kader Kutty is to be the managing Director (Managing Agent) of the Company for a term of twelve years.

**Management**:-Subject to the supervision and control by the Board of Directors, the management of the affairs of the company will be in the hands of a Managing Director. Mr. A. K. Kader Kutty shall be the first Managing Director of the company and he shall hold office for a term of twelve years from the date of incorporation of the company. The said Mr. A. K. Kader Kutty has been appointed Managing Director under the Articles of Association of the company and the company is to enter into an agreement with him appointing him. Managing Director in terms of a draft Agreement which for purposes of identification has been subscribed by Mr. Lakshmana Iyer, Advocate, Calicut.

The Managing Director Mr. A. K. Kader Kutty shall be entitled to a monthly remuneration of Rs. 1000/- from the date of incorporation of the company. He shall also be itled to an additional remuneration by way of commission at the rate of 7½ per cent of the net profits of the company in any year in which the net profits earned shall not be less than 5% of the paid up capital of the company at the end of the year, such net profits to be calculated as per provisions contained in Section 87-C of the Indian Companies Act, 1913.

**Preleminary Expenses**:-The company is to meet the preliminry expences which are not likely to exceed a sum of Rs. 15,000/-

**Minimum Subscription**:-The minimum subscription on which the directors may proceeed to allotment is Rs. 3,00,000.

**Voting Rights**:-1. Every holder of ordinary shares in the Company shall be entitled to one vote on a show of hands and one vote for every ordinery share held by him in the event of a poll.

2. No member holding preference shares in the Company is entitled to any vote in any meeting of the share holders of the Company unless the cumulative preferential dividend of 5% fixed by Article 3 is not paid in any two consecutive years. .... .... .... .... ....

Applications for shares are to be made in the forms attached here to and forwarded with the application money of Rs. 50/- per share to the Registered Office of the Company or to the Company's bankers .... .... ....

Copies of the Prospectus and application for shares can be had from the Registered Office of the Company as well as from the Bankers of the Company.

Baliapatam, dated the 16th day of January 1945.

1. (Signed) A. K. Kunhi Mayan Hajee.
2. ,, C. Samuel Aaron,
3. ,, H. V. Aly Baramy.
4. ,, V L. Venugopal.
5. ,, E. John Kuruvilla.
6. ,, Kayiath Damodarn.
7. ,, A. K. Kunhalikutty.
8. ,, Purushotham Goculdas.
9. ,, A. K. Kader Kutty.

---

No..... *Application for Ordinary / Preference Shares.*

**The Western India Plywoods, Limited.**

(Incorporated in British India under the Indian Companies Act, 1913)

Registered office: MILL ROAD, BALIAPATAM, S. MALABAR.

Athorised Capital .... .... .... .... 15,00,000

Divided into 10,000 Ordinary shares of Rs. 100/- each and 5,000 Five per cent Cumulative Preference Shares (free of British Indian Income-tax) of Rs. 100 - each.

ISSUE OF 10,000 Ordinary / 5,000 Preference Shares Rs. 100 - each.

Payable as follows:-Rs. 50/- per share with application and Rs. 50/- per share on Allotment.

TO

THE WESTERN INDIA PLYWOODS, LIMITED
MILL ROAD, BALIAPATAM.

GENTLEMEN,

I/We hereby request you to allot to me/us.....Ordinary/ Preference Shares of Rs. 100/- each in the above named company, and I/We agree to accept such shares or any smaller number yo may allot to me/us, subject to the provisions of the Memorandum and Articles of Association of the company. I/We send herewith Rs..... beirg the amount payable on application for.....shares applied for. I/We agree to pay the balance of Rs. 50/-per share on allotment and I/We authorise you to place my/our name on the Register of Members in respect of the shares allotted to me/us.

Name in Full.....

Father's name.....

Occupation.....

Address.....

Date.....1945 Yours faithfully,

Signature.

Reg.No. M. 1550.
KODAGU MERCARA. (Coorg).

# ಕೊಡಗು

ಸಂಪಾದಕರು:-ಶ್ರೀ ಪಿ. ಬಿ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ. ೩-೮-೦.

ಸಂಪುಟ ೨೩ | ತಾರೀಕು ೧೬—೨—೧೯೪೭ನೇ ಶುಕ್ರವಾರ. | ಸಂಚಿಕೆ ೪೭

## ಕಸ್ತೂರ್ಬಾರ ಪುಣ್ಯತಿಥಿ.

— ಲೇ:-'ವಸು' —

—()—

'ಮಾನವನು ಹುಟ್ಟುವಾಗ ಅಳುತ್ತಾ ಹುಟ್ಟುತ್ತಾನೆ. ತಾನು ಸಾಯುವಾಗ ಇತರರನ್ನು ಅಳುವಂತೆ ಮಾಡಬೇಕು' ಎಂಬುದೊಂದು ನಾಣ್ನುಡಿಯಿದೆ. ಇತರರು ತನಗಾಗಿ ಅಳುವಂತೆ ಮಾಡುವದೆಂದರೆ ಬೇರೊಬ್ಬರ ನಿಮಿತ್ತವಾಗಿ ನಮ್ಮನ್ನೆ ಅಳಲಾರರು. ನಮ್ಮ ಅಗಲಿಕೆಯಿಂದ ಇವರಿಗೆ ನಿಕೃವಾಗುವದಾದರೆ ಅಳುತ್ತಾರೆ. ಹಾಗೆಯೇ ಒಂದು ರಾಷ್ಟ್ರ ಒಂದು ಜನಾಂಗ ಒಂದು ವ್ಯಕ್ತಿಗಾಗಿ ಅಳಬೇಕಾದರೆ ಆ ವ್ಯಕ್ತಿ ಜನಾಂಗದ, ರಾಷ್ಟ್ರದ ಪ್ರಗತಿಗೆ ಬಹುವಿಟ್ಟಿಗೆ ಮಾಡಿರಬೇಕು; ಅ ಸಮಾನ ತ್ಯಾಗಮಾಡಿರಬೇಕು. ಅಂಥಾ ವ್ಯಕ್ತಿಯು ಕಣ್ಮರೆಯಾದ ಗ ಇದೀ ರಾಷ್ಟ್ರ ಕಂಬನಿಮಿಡಿಯುತ್ತದೆ. ಸಜ್ಜನರ ಜೀವನವೆ ಸರ್ವಸ್ವ ಇದು. ಅವರು ತಮಗಾಗಿ ಬದುಕುವದಲ್ಲ ಅವರು ಬದುಕಿರಲಿ ಎಂಬಲಿದವರಿಗೂ ಬದುಕುವದಕ್ಕೆ ಸಹಾಯಕವಾಗುತ್ತದೆ. ಅವರು ಮತ್ತೆಂದಿಗೂ ಅವರ ಜೀವನ ಕಥೆಯು ಎದುಬಲದವರಿಗೆ ಮಾರ್ಗದರ್ಶಕವಾಗುತ್ತದೆ. ಪೂಜ್ಯಳಾತೆಯಾಗಿದ್ದ ಕಸ್ತೂರ್ಬಾರವರು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿ ಒಂದು ವರ್ಷವಾಯಿತು. ಅವರ ಪುಣ್ಯತಿಥಿಯು ಆಚರಣೆಯು ತಾ. 11 ರಿಂದ 18ರ ವರೆಗೆ ಇಡೀ ಭಾರತವಿಡಿದ ಉದ್ದಗಲಕ್ಕೂ ಆಚರಿಸಲ್ಪಡುತ್ತಿದೆ.

"ಕಸ್ತೂರ್ಬಾರವರ ಜೀವನ, ಗೋಚ್ಯವಾದ ಜೀವನ. ಮಹಾತ್ಮಗಾಂಧೀಜಿಯವರ ಜೀವನಯಾತ್ರೆಯಲ್ಲಿ ಅವರ ನೆರಳಾಗಿದ್ದ ಸಹಿಸಲಾರದ ಕಷ್ಟವನ್ನು, ಎಣೆಯಿಲ್ಲದ ತ್ಯಾಗವನ್ನು ಮಾಡಿದ್ದಾರೆ. ಆದರೆ ಮಹಾತ್ಮಗಾಂಧೀಜಿಯವರ ಮಹಾ ಮೇರುವಿನಂಥಾ ವ್ಯಕ್ತಿತ್ವದ ಮರೆಯಲ್ಲಿ ಪ್ರದರಿಂದ ಬಹಿರ್ಜಗತ್ತಿಗೆ ಅವರ ಪ್ರತಿಭೆಯು ಗೋಚರವಾಗಿರಲಿಲ್ಲ. ಗಂಧದ ತಪ್ಪನ್ನು ತಾನು ತೇದು ಸವೆಯಿಸಿಕೊಂಡಾಗಲೇ ಕಮನೀಯವಾದ ಕಂಪನ್ನು ಕೊಡಬಲ್ಲುದು. ಇನಿವಾದ ಕಬ್ಬು ನು ಹುಡಿಹುಡಿಯಾಗಿ ಜಜ್ಜಲ್ಪಟ್ಟರೇನೆ ಮಧುರ ರಸವನ್ನು ಕೊಡಲಾಪುದು. ಅ ದೇ ರೀತಿ ಕಸ್ತೂರ್ಬಾರವರು ರಾಷ್ಟ್ರಸೇವೆಯಿಂದ ತನ್ನ ಪ ರ್ಧಿಸ ರರಿವರನ್ನು ಜೈಲಿನಲ್ಲಿ ಬಲಿಕೊಟ್ಟಗಲೇ ಇಡೀ ಜಗತ್ತಿನ ದೃಷ್ಟಿ ಆ ಕಡೆಗೆ ಹೊರಳಿತು ಗಾಂ ಪ್ರವಾಗಿದ್ದ ಆ ಪವಿತ್ರ ಜೀವನ ಸೌಂದರ್ಯ ವನ್ನು ನೋಡಿ ಮುದ್ದಾಯಿತು. ಹಿಂದೂ ದೇವರ ಆದರ್ಶವನಿತೆಯಾಗಿ, ರಾಷ್ಟ್ರಸೇವಕೆಯಿತ ಕಣ್ಮಣಿಯಾಗಿ, ಪವಿತ್ರಗೃಹಿಣಿಯರ ಮಾರ್ಗದರ್ಶಿಕೆಯಾಗಿ, ಸೀತಾ, ಸಾವಿತ್ರಿ, ದಮಯಂತಿಯರಂಥಾ ತಾಯಿಯಾಗಿ, ಜಗತ್ತಿನ ಅಧ್ಯಾತಿಯ ವ್ಯಕ್ತಿಯ ಪತ್ನಿಯಾಗಿ ಕಣ್ಮರೆಯಾದ ಮೂತೆ ಕಸ್ತೂರ್ಬಾಳ ಪುಣ್ಯಸ್ಮರಣೆಯು ಭಾರತೀಯರನ್ನು ಬಡಿದೆಬ್ಬಿಸುತ್ತಿದೆ. ಆಕೆಯು ನೆರೆ ಮನೆಯ ಲ್ಲಿ ರೀರವನ್ನು ತೊರೆದ ನೆನಪು ಭಾರತೀಯರಿ ದ ಸ್ಮದ ಸರಿಯವನ್ನು ಇನ್ನಷ್ಟು ಮಾಡಿರುತ್ತಿದೆ. ಆಕಯು ರಾಷ್ಟ್ರ ಸೇವೆಯಲ್ಲಿ ತನುವನ್ನು ಧಾರೆಯೆರೆದ ಆದರ್ಶವು ಭಾರತೀಯರಿಗೆ ಯೋಗ್ಯ ಪಾಠವಾಗಿದೆ.

ಕಸ್ತೂರ್ಬಾರವರ ಪುಣ್ಯತಿಥಿಯ ಆಚರಣೆಯು ಸುಲಭದ ವಿಚಾರವಲ್ಲ. ಸಭೆಯಲ್ಲಿ ನಿಂತು ಸಂತಾಪಸೂಚಿಸಿ 'ದೇವರು ಮೃತರ ಆತ್ಮಕ್ಕೆ ಶಾಂತಿಕೊಡಲೆಂದು' ಪ್ರಾರ್ಥಿಸಿದರೆ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಾಗಲಿಲ್ಲ ಕಸ್ತೂರ್ಬಾರೆಂಬರೆ ನುಪಾತ್ಮಗಾಂಧಿಯವರು. ಮಹಾತ್ಮಗಾಂಧೀಬದುವರೆಂದರೆ ಕಸ್ತೂರ್ಬಾರವರು. ಬೀಗಿರುವಾಗ ಮಹಾತ್ಮರ ಆದೇಶವಂತೆ ಈ ದಿನವು ಆಚರಿಸಲ್ಪಡಬೇಕು.

ಕಸ್ತೂರ್ಬಾರವರ ಪ್ರಜಾವ ಹಿಂದೂ ದೇಶದಲ್ಲಿ ಯೂ ರೀತಿ ಇದೆಯೆಂಬುದು ಅವರ ಸ್ಮಾರಕನಿಧಿಯ ಬಗ್ಗೆ 75 ಲಕ್ಷ ರೂಪಣ ಕೇಳಿಬಂದಿದ್ದಕ್ಕೆ ಜನತೆಯೊ ಸಲಾಗಿ 124 ಲಕ್ಷಕ್ಕೆ ಮಿಕ್ಕಿದ್ದರಿಂದಲೇ ಗೊತ್ತಾಗುತ್ತದೆ. ಮಹಾತ್ಮಗಾಂಧೀಜಿಯವರು ಮತ್ತು ಈ ನಿಧಿಯ ಕಾರ್ಯಕರ್ತರು ಈ ಧನವನ್ನು ಹ್ರೀಯರಿ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಅರ್ಪಿತ ರಾಷ್ಟ್ರರಚನಾಕಾರ್ಯಕ್ಕಾಗಿ ವಿನಿಯೋಗಿಸಲು ನಿರ್ಧರಿಸಿದ್ದಾರೆ ರಾಷ್ಟ್ರರಚನಾಕಾರ್ಯದಲ್ಲಿಯೇ ತನಗೆ ತೃಪ್ತಿ, ಸಂತೋಷ ವೆಂದು ಮಹಾತ್ಮರು ನುಡಿದಿದ್ದಾರೆ. ಇದೇ ಕಣ್ಮರೆಯಾದ ಕಸ್ತೂರ್ಬಾರವರಿಗೂ ಪ್ರಿಯವಾದ ಕೆಲಸ. ಗಾಂಧೀಜಿಯವರು ಜೈಲಿನಿಂದ ಬಿಡುಗಡೆಯಾದ ತಂತರ ವಿಧಾಯಕ ಕಾರ್ಯಕ್ರಮದ ಬಗ್ಗೆ ತಮ್ಮ ಪೂರ್ಣವಚನ್ನು ಹೊಕಿದ್ದಾರೆ. ವಿಧಾಯಕ ಕಾರ್ಯಕ್ರಮವೇ ಕಾಂಗ್ರೆಸಿಗರ ಜೀವಾಳವೆಂದು ಮೇಲಿಂದ ಮೇಲೆ ಸಾರಿದ್ದಾರೆ. ಅಂದಮೇಲೆ ನಾವು ಕಸ್ತೂರ್ಬಾ ಸ್ಮಾರಕನಿಧಿಯ ಸತ್ಯಾಗ್ರಹದಿಂದ ಮಾಡುವವರಾಗಿದ್ದರೆ ದೇಶದ ಏಳಿಗೆಗೆ ಕಾರಣವಾಗುವ ವಿಧಾಯಕ ಕಾರ್ಯಕ್ರಮವನ್ನು ಕೈಕೊಳ್ಳುವ ನಿರ್ಧಾರಮಾಡಬೇಕು. ಇತರ ಜೌಪಚಾರಿಕ ಕಾರ್ಯಕ್ರಮಗಳನ್ನು ಬಿಟ್ಟುಬಿಡಬೇಕೆಂದಲ್ಲ. ಅವುಗಳನ್ನು ಒಂದು ವೇಳೆ ಬಿಟ್ಟರೂ ಅದಕ್ಕಾಗಿ ಕಸ್ತೂರ್ಬಾರವರ ಆತ್ಮವು ಚಿಂತಿಸಲಿಕ್ಕಿಲ್ಲ. ಆದರೆ ಅವರ ಆತ್ಮದ ಅರಯವಾದ ವಿಧಾಯಕ ಕಾರ್ಯಕ್ರಮವನ್ನು ಮಾತ್ರ ಯಾರೂ ದಲರ್ಕ್ಷಿಸಲಾಗದು. ಇದೇ ಕಸ್ತೂರ್ಬಾರವರಿಗೆ ಪ್ರಿಯವಾದುದು. ಮಹಾತ್ಮಗಾಂಧಿಜಿಯವರಿಗೆ ಪ್ರೀಯವಾದುದು. ಹಿಂದೂದೇಶದ ಹಿತಸಾಧನೆಗೆ ಅಗತ್ಯವಾದುದು.

ಬಾವರು ಪುಣ್ಯತಿಥಿಯ ಈ ಕಾಲದಲ್ಲಿ ನಾವು ಅವರ ಅಮೂಲ್ಯ ತ್ಯಾಗ ಜೀವನವನ್ನು ನೆನೆಯು ಕಾರ್ಯೋನ್ಮುಖರಾಗುವಾ. ಅವರು ಯಾವ ಧ್ಯೇಯಕ್ಕಾಗಿ ಜೀವಿಸಿದರೋ, ಯಾವ ಧ್ಯೇಯಕ್ಕಾಗಿ ಸೆರೆಮನೆಯಲ್ಲಿ ಶರೀರ ವೃಜಿಸಿದರೋ ಆ ಧ್ಯೇಯವು ಭಾರತೀಯರ ಮನಸ್ಸಿನಿಂದ ಮರೆಯಾಗದಿರಲಿ. ದೇಶಕ್ಕಾಗಿ ಅಳಿದ ವೀರ ವನಿತೆಯರ ಸಾಲಲ್ಲಿ ಹುಟ್ಟಿರುವ ನಾವು ಅವರ ಕೀರ್ತಿಗೆ ತಕ್ಕಂತೆ ದೇಶಕ್ಕಾಗಿ ಶ್ರಮಿಸುವುದಾಗಲಿ.

— ಶೇಲಡಾ —

ಎಂಟು ಮಲೇರಿಯಾ ಜ್ವರಗಳಿಗೆ

ಎಲ್ಲ ಕರದ ಜ್ವರ, ಜ್ವರ ಗಡ್ಡೆ, ತಜ್ಜನ್ಯ ಆರಕ್ತತೆ ಮೇಲೆ ರಾಮಬಾಣ; ಲಿವರ, ಪೂಟ್ಸೆನೋವ, ಮಲಬದ್ಧತೆ, ಸುಧಾರಿಸಿ ಶಕ್ತಿ ಬೆಳೆಸುತ್ತದೆ ಕ್ವಿನೈನ್ ಬದಲು ವೈದ್ಯ ಡಾಕ್ಟರರು ದಿವಾ ಖಾನೆಗಳಲ್ಲಿ ಉಪಯೋಗಿಸುವರು, 1000 ಗುಳಿಗೆಗಳಿಗೆ ರೂ. 15-0-0, 100ಕ್ಕೆ ರೂ. 1-12-0 ಈ ಔಷಧಿಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿ ಕೊಟ್ಟವರಿಗೆ ಒಂದು ಸಾವಿರ ರೂ. ಬಹುಮಾನ ಕೊಡಲಾಗುವುದು. ಪ್ರತಿ ಊರಿನಲ್ಲಿ ಮಾರಾಟಕ್ಕೆ ಏಜೆಂಟರು ಬೇಕು.

ಶೇಲಡಾ ಕೆಮಿಕಲ್ ಕಂಪೆನಿ,
ಶಿರಸಿ, ಉತ್ತರ ಕನ್ನಡ.
ಸೋಲ್ ಏಜೆಂಟರು—
ಎಸ್. ಎಲ್. (ಅಯ್ಯರ್ವಾ) ಭಾಕಪ್ಪ,
ಬಡವರ ಔಷಧಿ ಸರ್ವಿಸ್,
ಶಿರಸಿ, ಉತ್ತರ ಕನ್ನಡ

## ಜರ್ಮನಿಯನ್ನು ಹಂಚಿಕೊಳ್ಳಬೇಕು

ಮಿತ್ರರಾಷ್ಟ್ರಗಳ ನುಂದಾಳುಗಳಾದ ಚರ್ಚಿಲ್, ರೂಸ್‌ವೆಲ್ಟ್ ಮತ್ತು ಸ್ಟಾಲಿನರು ಕ್ರಿಮಿಯಾದ್ವೀಪದ ಯಾಲ್ಟಾ ಎಂಬಲ್ಲಿ ನೇರಿ ಎಂಟು ದಿನಗಳ ವರೆಗೆ ಏಷ್ಯಿಂಗ ನಡೆಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬಂದಿರುವರು—

(1) ಜರ್ಮನಿಯು ಶರಣಾಗತವಾಗಲು ಬೇಕಾದ ಶಿಕ್ಷಣಗಳನ್ನು ಒಪ್ಪಲಾಗಿದೆ. ಈ ಮೂರು ಶಕ್ತಿಗಳು ಜರ್ಮನಿಯ ಪ್ರತ್ಯೇಕ ಭಾಗಗಳನ್ನು ಪ್ರಾಂತಾವಾರು ಆಕ್ರಮಿಸಿಕೊಳ್ಳುವದು. ತನಗೆ ಬೇಕಾದ ಭಾಗವನ್ನು ಆಕ್ರಮಿಸಿಕೊಳ್ಳುವಂತೆ ಫ್ರಾನ್ಸನ್ನು ಆಹ್ವಾನಿಸುವದು. ಜರ್ಮನಿಯ ಎಲ್ಲಾ ಮಿಲಿಟರಿ ಶಕ್ತಿಯನ್ನು ಹರಿದುಹಾಕಿ ಅದು ಎಂದೂ ಮಿಲಿಟರಿ ದೃಷ್ಟಿಯಿಂದ ತಲೆಯೆತ್ತದಂತೆ ಮಾಡುವದು. ಜರ್ಮನಿಯಲ್ಲಿಯ ನಾಝಿ ಪಕ್ಷವನ್ನು ಸಮೂಲನಾಶಮಾಡುವದು.

(2) ಸಂಯುಕ್ತ ರಾಷ್ಟ್ರಗಳ ಸಮ್ಮೇಳನ ಒಂದು ಬದುವ ವರ್ಷದ ಏಪ್ರಿಲ್ ತಿಂಗಳಲ್ಲಿ ಸೇರಿ ಶಾಂತಿಯ ಮತ್ತು ಭದ್ರತೆಯ ಕೌಲನ್ನು ದಂಬರ್ಟನ್ ಓಕ್ಸ್‌ರಚನೆಗನುಸಾರ ರೂಪಿಸುವದು.

(3) ಲೂಬ್ಲಿನ್‌ನಲ್ಲಿರುವ ಪೋಲೆಂಡ್ ಸರಕಾರವನ್ನು ಪುನರ್ವ್ಯವಸ್ಥೆಗೊಳಿಸಿ ಪೋಲೆಂಡಿನ ಪ್ರಜಾಪ್ರಭುತ್ವ ಮುಂದಾಳುಗಳು ಅದರಲ್ಲಿ ಸೇರ್ಪಡೆಯಾಗುವಂತೆ ಮಾಡುವುದು. ಪೋಲೆಂಡಿನ ಪೂರ್ವಭಾಗದಲ್ಲಿ ಕರ್ಝನ್‌ಲೈನಿನ ವರೆಗಿನ ಪ್ರದೇಶವು ರಷ್ಯಾಕ್ಕೆ ಸೇರಬೇಕು. ಅದಕ್ಕೆ ಸರಿಯಾಗಿ ಬೇರೆ ಪ್ರದೇಶವನ್ನು ಪೋಲೆಂಡಿಗೆ ಕೂಡಲಾಗುವದು.

ಜರ್ಮನ್ ಜನತೆಯನ್ನು ನಾಶಮಾಡುವದು ತಮ್ಮ ದೃಷ್ಟಿಯಲ್ಲವೆಂದು ಈ ಮೂವರು ಹೇಳಿದ್ದಾರೆ.

# ಕೊ ಡ ಗು

ತಾ. ೧೬-೨-೧೯೪೫ನೇ ಶುಕ್ರವಾರ


## ನಾ ಚಿ ಕೆ ಗೇ ಡು.

ಕೊಡಗಿನ ಒಟ್ಟು ಆದಾಯವು ಸುಮಾರು 18 ಲಕ್ಷ ರೂಪಾಯಿಗಳು. ಇದರಲ್ಲಿ ಎಕ್ಸೈಸ್ ಅಂದರೆ ಸೇಂದಿ, ಸಾರಾಯಿ, ಗಾಂಜ ಮೊದಲಾದ ಮಾದಕ ಪದಾರ್ಥಗಳ ಮೂಲಕದಿಂದ ಬರುವ ಉತ್ಪತ್ತಿ ಸುಮಾರು 6 ಲಕ್ಷ ರೂಪಾಯಿಗಳು! ಹಾಗೆಂದರೇನು? ಕೊಡಗು ಕುಡುಕರ ನಾಡಾಗಿದೆ. ಕುಡಿಯುವುದೇ ಕೊಡಗರ ಜೀವನ ಧ್ಯೇಯವಾಗಿದೆ. ಕೇವಲ ಒಂದುವರೆಲಕ್ಷ ಜನಸಂಖ್ಯೆಯಿರುವ ನಾಡಿನಲ್ಲಿ ಸರಕಾರಕ್ಕೆ ಆರುಲಕ್ಷ ರೂಪಾಯಿಗಳ ಆದಾಯ ಈ ಮಾದಕ ಪದಾರ್ಥಗಳಿಂದಾಗಿ! ಕೊಡಗಿನಲ್ಲಿ 45 ರಿಂದ 50 ಸಾವಿರಕ್ಕೂ ಮಿರಿ ಸಾರಾಯಿ ಒಂದೇ ಖರ್ಚಾಗುತ್ತಿದೆಯಂತೆ. 'ಪಾನನಿರೋಧದ ಬಗ್ಗೆ ಪ್ರಚಾರವೇಕೆ? ನಾವೇ ಕುಡಿದು ಮುಗಿಸಿಬಿಟ್ಟಿರುವೆವು' ಎನ್ನುವಷ್ಟರ ಮಟ್ಟಿಗೆ ಜನತೆಯ ಮನೋಭಾವ ಕೆಳಗಿಳಿದಿದೆ. ಈ ರೀತಿಯ ಒಂದು ಅಧಃಪತನ ಹಿಂದೂದೇಶದ ಯಾವ ಭಾಗದಲ್ಲೂ ಆಗಿರಲಿಕ್ಕಿಲ್ಲ. ತಾ. 9-2-45 ರಲ್ಲಿ ಉತ್ತರಕೊಡಗಿನ ಸೇಂದಿ ಸಾರಾಯಿ ಟೆಂಗಡಿಗಳ ಹರಾಜು ನಡೆಯಿತು. ಉತ್ತರಕೊಡಗಿನಲ್ಲಿ ಈ ವರ್ಷ ಕಳೆದ ವರ್ಷಕ್ಕಿಂದಾ ಮುಕ್ಕಾಲು ಲಕ್ಷ ರೂಪಾಯಿ ಆದಾಯ ಹೆಚ್ಚಾಗಿದೆ. ಇದು ಕೇವಲ ಉತ್ತರಕೊಡಗಿನಲ್ಲಿ! ಇದು ವ್ಯಸನಪಡಬೇಕಾದ ವಿಷಯ. ಕಂಟ್ರಾಕ್ಟುದಾರರು ಯಾವ ಧೈರ್ಯದಿಂದ ಈ ರೀತಿ ವರ್ಷೇ ವರ್ಷೇ ಹೆಚ್ಚಿನ ಬೆಲೆಗೆ ಅಂಗಡಿಗಳನ್ನು ಕೂಗುತ್ತಿರುವರು? ಒಂದು, ಬೇಕಾದಷ್ಟು ಜನರು ಬಂದು ಸಾರಾಯಿ ಖರ್ಚಾಗುತ್ತದೆಂಬ ಭರವಸೆ ಮತ್ತೊಂದು ಸಾರಾಯಿ ಸಾಕಷ್ಟು ಇಲ್ಲದಿದ್ದರೂ ನೀರು ಸೇರಿಸಿ ದುಡ್ಡುಗಳಿಸಿಯೇನೆಂಬುದು. ಇಲ್ಲದಿದ್ದರೆ ಕಳೆದ ವರ್ಷ ರೂ. 17000 ಹೋದ ಆಗಡಿ ಈ ವರ್ಷ 31000 ಹೊಂದುದರ ಅರ್ಥವೇನು? ಜನರ ತಲೆ ತಿರುಗಿದೆ. ಕಳ್ಳೇ ಅವರ ಜೀವನ ಸರ್ವಸ್ವವಾಗಿದೆ. ಅದ್ದರಿಂದ ಹೇಗೂ ನಮ್ಮ ಜೇಬುತುಂಬುವದರಲ್ಲಿ ಸಂಶಯವಿಲ್ಲವೆಂಬ ಭರವಸೆ ಕಂಟ್ರಾಕ್ಟುದಾರರಿಗೆ ಇದ್ದೇ ಇರಬೇಕು. ಇಲ್ಲದಿದ್ದರೆ ಹೀಗೆ ವರ್ಷೇ ವರ್ಷೇ ಆಬ್ಕಾರಿ ಆದಾಯವು ಹೆಚ್ಚಲು ಬೇರೆ ಕಾರಣವಿಲ್ಲ. ಇದು ಜನರ ಅಧೋಗತಿಯ ಚಿಹ್ನೆಯೊಂದಲ್ಲ; ಜನತೆಯ ಸಂಸ್ಕೃತಿಯ, ನಾಡಿನ ಅವನತಿಯ ಚಿಹ್ನೆ.

ಕೊಡಗು ನಾಡಿನ ಮಹನೀಯರು ಈ ರೀತಿ ಕುಡುಕರಾಗಿಬಾರದು. ಸರಕಾರವೂ ತನಗೆ ಆದಾಯಬರುತ್ತಿದೆಯೆಂದು ತೃಪ್ತಿಗೊಂಡು ಜನತೆಗದ ನೈತಿಕ ಅಧಃಪತನದ ನಿವಾರಣೆಗೆ ಕಿರುಬೆರಳನ್ನು ಅಲ್ಲಾಡಿಸದೆ ಇರುವದು ತಪ್ಪು. ಜನರ ನೈತಿಕ ಅಧಃಪತನಕ್ಕೆ ಸಹಾಯಕರಾಗಿ ಅದರ ಲಾಭದಿಂದ ಪುನಹ ಅವರನ್ನು ಮೇಲೆತ್ತಲು ಯತ್ನಿಸುವ ಪ್ರಯತ್ನಕ್ಕೆ ಧಿಕ್ಕಾರವಿರಲಿ. ಜನತೆಯು ತಮ್ಮ ಜವಾಬ್ದಾರಿಯನ್ನರಿತುಕೊಳ್ಳಬೇಕು. ಪಾನನಿರೋಧ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಸರಕಾರವು ಜನಹಿತ ಸರಕಾರವೆಂದುಕೊಳ್ಳುವದಾದರೆ ಅದಕ್ಕೆ ಬೆಂಬಲಕೊಡಬೇಕು. ಕೊಡಗಿನ ಪ್ರತಿ ಗ್ರಾಮಗಳಲ್ಲಿಯೂ ಪಾನನಿರೋಧ ಸಮಿತಿಗಳನ್ನು ನೇಮಿಸಿ ಪ್ರಚಾರನೂಡುವದು, ಮದುವೆ ಮುಂಜಿಗಳಲ್ಲಿ ಸಾರಾಯಿ ಸೇರಿಸದಂತೆ ಮೂಡುವದು, ಸೇರಿಸುವ ಮದುವೆಗಳಲ್ಲಿ ಊಟನೂಡದೆ ಅಸಹಕರಿಸುವದು ಮೊದಲಾದವನ್ನು ಕೈಕೊಳ್ಳಬೇಕು. ಸಮಾಜ ಸುಧಾರಕರೂ, ಸರಕಾರವೂ ಕೊಡಗು ಇಂದು ಬಿದ್ದಿರುವ ಅಧಃಪತನದಿಂದ ಮೇಲೆತ್ತಲು ಪ್ರಯತ್ನಿಸಬೇಕು. ಕೊಡಗು ಕುಡುಕರ ನಾಡಿಲ್ಲ; ಅದಕ್ಕೂ ಒಂದು ನೀತಿ ಸಂಸ್ಕೃತಿಯಿದೆಯೆಂಬುದನ್ನು ತೋರಿಸಬೇಕು.

## ಅನಾಸಕ್ತಿಯನ್ನು ಬಿಡಬೇಕು.

ಕೊಡಗಿನ ಜಾನುವಾರಗಳಿಗೆ ದೊಡ್ಡ ರೋಗ ತಗಲದಂತೆ ಖಡ್ಡಾಯವಾದ ಇಂಜೆಕ್ಷನ್ ಮೂಡುವ ಖಾನೂನು ಜಾರಿಗೆ ಬಂದು ತಿಂಗಳುಗಳಾದವು. ಆದರೆ ಕೊಡಗಿನಲ್ಲಿ ಈ ವರೆಗೆ ಕೇವಲ 'ಗೋಟ್ ಟಿಶ್ಯುವೇಕ್ಸಿನ್'ನ್ನೇ ಉಪಯೋಗಿಸಿದ್ದಾಗಿದೆ. ಈ ವೇಕ್ಸಿನನ್ನು ಇಟ್ಟುಕೊಳ್ಳಲು ಯೋಗ್ಯ ಸಲಕರಣೆಗಳಿಲ್ಲದಿದ್ದರೆ ಅದು ನಿಷ್ಪ್ರಯೋಜಕವಾಗುತ್ತದೆಂದು ತಜ್ಞರ ಅಭಿಪ್ರಾಯವಿದೆ. ಕೊಡಗಿನಲ್ಲಿ ಇದನ್ನು ಭದ್ರವಾಗಿ ಇಟ್ಟುಕೊಳ್ಳಲು ಯಾವ ಏರ್ಪಾಡೂ ಇಲ್ಲ. ಅದು ಮುಕ್ತೇಶ್ವರದಿಂದ ಇಲ್ಲಿಗೆ ಬಂದು ತಲಪುವಾಗಲೇ ಉಪಯೋಗಿಸಲು ಅನರ್ಹವಾಗಿರುತ್ತದೆಂದೂ ಅವರ ಅಭಿಪ್ರಾಯ. ಆದಕ್ಕಾಗಿ ಬೆಂಗಳೂರಿನಲ್ಲಿ ತಯಾರಿಸುವ 'ಗೋಟ್ ಬ್ಲಡ್ ವಿರಸ್'ನು ಉಪಯೋಗಿಸುವದು ಉತ್ತಮವೆಂದು ಅವರು ಸೂಚಿಸಿದ್ದಾರೆ. ಇಂಥಾ ಸೂಚನೆಗಳು ಬಂದರೂ ಸರಕಾರವು ಸಂಬಂಧವಿಲ್ಲದಂತೆ ನಿರ್ಲಿಪ್ತವಾಗಿರುವದು ಯೋಗ್ಯವಲ್ಲ. ಕೊಡಗು ವೆಟರ್‌ನರಿ ಇಲಾಖಾ ಸಂಘದವರು ತಮ್ಮ ಕಳೆದೊಂದು ವರ್ಷಾಂತಿನಲ್ಲಿ ಕೊಡಗಿನಲ್ಲಿ ಇವೆರಡು ವೇಕ್ಸಿನುಗಳನ್ನೂ ಉಪಯೋಗಿಸಿ ಪರೀಕ್ಷೆ ನೂಡುವ ಏರ್ಪಾಡು ಮಾಡಬೇಕೆಂದು ತೀರ್ಮಾನಿಸಿದ್ದರು. ಸರಕಾರವು ಅಂಥಾ ಏರ್ಪಾಡನ್ನು ಮಾಡಿ ಕೊಡಗಿನ ಯಾವ ವೇಕ್ಸಿನು ಉಪಯೋಗಕ್ಕೆ ಅರ್ಹವೆಂಬುದನ್ನು ನಿಶ್ಚಯಿಸಿ ಅದನ್ನು ಉಪಯೋಗಿಸಬೇಕು. ಆಗ ಜನತೆಗೂ ಈ ಕಾರ್ಯದಲ್ಲಿ ಒಂದು ನಂಬಿಕೆ ಬಂದು ಸರಕಾರದ ಯೋಜನೆಯು ಯಶಸ್ವಿಯಾಗುವದು.

ಖಡ್ಡಾಯ ಇಂಜೆಕ್ಷನಿನ ಯೋಜನೆಯನ್ನು ಏರ್ಪಡಿಸಿ ದೈತನಿಂದ ಜಾನುವಾರಕ್ಕೆ ಎರಡಾಣೆಯಂತೆ ವಸೂಲ್ಮಾಡುತ್ತಿರುವದು ವಿಷಾದದ ಸಂಗತಿ. ಯಾವ ಆರ್ಥಿಕ ತತ್ವಕ್ಕೂ ಇದು ಸರಿಹೋಗದು. ಸರಕಾರವು ಈ ಫೀಜನ್ನು ಮನ್ನಾಮಾಡಬೇಕಾಗಿದೆ. ಸರಕಾರವು ಆತಿ ಪ್ರಾಮುಖ್ಯ ಸಮಸ್ಯೆಯಾದ ಜಾನುವಾರುಗಳ ಹಿತರಕ್ಷಣೆಯ ಬಗ್ಗೆ ತನ್ನ ಅನಾಸಕ್ತಿಯನ್ನು ಬಿಟ್ಟು ಕಾರ್ಯಪ್ರವರ್ತರಾಗಬೇಕಾಗಿ ನಮ್ಮ ಆಶಯ.

## ವ ರ್ತ ಮಾ ನ.

'ಕೊಡವರ ಅಂತರ್ಜಾತಿ ವಿವಾಹ' ಎಂಬ ವಿಶಯದಲ್ಲಿ ಅತ್ಯುತ್ಸಾಹವಾದ ಪತ್ರ ಬಂಧಬರೆದ ಕೊಡವರಿಗೆ ರೂಪಾಯಿ 30 ರ ಬಹುಮಾನ ಒಂದನ್ನು ಕೊಡುವ ಏರ್ಪಾಡನ್ನು ಮೇಜರ್ ಕೋಟೆರ ಅಪ್ಪಣ್ಣನವರು ಮೂಡಿದ್ದಾರೆ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಪ್ರಬಂಧವನ್ನು 15-5-45 ರೊಳಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಧ್ಯಾಯರಿಗೆ ತಲುಪುವಂತೆ ಕಳುಹಿಸಬೇಕಾಗಿ ತಿಳಿಯಬರುತ್ತದೆ.

ಸಾರ್ವಜನಿಕ ಸಹಾಯದಿಂದ ಕಟ್ಟಿದ ವೀರರಾಜನೇಟೆ ಬಾಡಗ ಈಶ್ವರದವಸ ಭಂಡಾರವನ್ನು ತೆರೆಯುವ ಉತ್ಸವವು ತಾ. 26-2-45 ರಲ್ಲಿ ಶ್ರೀ. ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದು. ಈ ಸಂದರ್ಭದಲ್ಲಿ ಖಾದಿ ಪ್ರಚಾರ, ನಿಷಾನಿಶೇಧ ಮೊದಲಾದುವುಗಳ ವಿಚಾರ ಭಾಷಣಗಳನ್ನೂ, ಹರಿಕಥಾಕ್ಷೇಪ್ಯ ಶ್ರೀ ಬಿ. ಕೆ. ಗೋವಾಲದಾನರ ಹರಿಕಥೆಯನ್ನೂ ಏರ್ಪಡಿಸಿರುವರು.

ಹುದಿಕೇರಿಯಲ್ಲಿರುವ ಶ್ರೀ ಕಿರಿಯಮಾಡ ಬೆಳ್ಯಪ್ಪನವರ ಸಹೋದರಿಯನ್ನು ಅಜ್ಜಿಕುಟ್ಟೀರ ಮನೆಗೆ ವಿವಾಹ ಮಾಡಿಕೊಡಲು ನಿಶ್ಚಯವಾಗಿತ್ತೆಂದೂ ಆದರೆ ಹುಡುಗಿಗೆ ಈ ಏರ್ಪಾಡಿನ ಬಗ್ಗೆ ಇಷ್ಟವಿರಲಿಲ್ಲವಾದ ಕಾರಣ ಒಂದು ಪತ್ರ ಬರೆದಿಟ್ಟು ಮನೆಯಲ್ಲಿ ಗುಂಡುಹೊಡೆದುಕೊಂಡು ಆತ್ಮಹತ್ಯಮಾಡಿಕೊಂಡಿರುವದಾಗಿ ತಿಳಿಯಬರುತ್ತದೆ.

[ಇಂಥಾ ಪ್ರಸಂಗ ಇದೇ ಹೊಸದಲ್ಲ. ಇನ್ನಾದರೂ ಮಕ್ಕಳ ತಂದೆ ತಾಯಿಗಳು ಯಾ ಪೋಷಕರು ತಮ್ಮ ಆಶ್ರಯದಲ್ಲಿರುವವರನ್ನು ದಬ್ಬಿದ ಮೂಕದನಗಳಂತೆ ತಮ್ಮ ಮನಬಂದವರಿಗೆ ಮದುವೆಮಾಡಿ ಕೊಡುವ ಯಾ ತರುವ ಪಾಶವಿ ಪದ್ಧತಿಯನ್ನು ನಿಲ್ಲಿಸಿ ಮದುವೆಯೊಗುವವರ ಅಭಿಪ್ರಾಯಕ್ಕೆ ಬಿಟ್ಟು ವೇಲ್ಯಂಡ ರೀತಿಯ ದಾರುಣಹತ್ಯೆಗೆ ಕಾರಣರಾಗಬಾರದು. ಸಂ.]

ಕೊಡಗಿನಲ್ಲಿ ಬಿಳಿಯ, ಕೆಂಬತ್ತ, ಮುಳ್ಳುಬತ್ತವನ್ನು ರೂಪಾಯಿಗೆ 9 ಸೇರಿಗೆ ಕಡಿಮೆಯಿಲ್ಲದೆಯೂ ಅಕ್ಕಿಯನ್ನು 4 ಸೇರಿಗೆ ಕಡಿಮೆಯಿಲ್ಲದೆಯೂ ಮಾರಬೇಕೆಂದು ನಿಯಂತ್ರಿಸಲಾಗಿದೆ.

ಅನ್ಯತ್ರಿಯಲ್ಲಿ ತಾ 6-2-45 ರಲ್ಲಿ ಹೊಸದಾಗಿ ಒಂದು ಕಿಕೆಟ್ ಆಟದ ಮೈದಾನವನ್ನು ತೆರೆಯಲಾಗಿದೆ.

ತಾ. 7-2-45 ರಲ್ಲಿ ನಡೆದ ಸೆಂಟ್ ಎಲೋಸಿಯಸ್ ಕಾಲೇಜ್ ಸೋಶಿಯಲ್‌ನಲ್ಲಿ ವಾಕ್‌ಸ್ಪರ್ಧೆಯಲ್ಲಿ ಶ್ರೀ. ಮುಕ್ಕಾಟೀರ ಗಣಪತಿಯವರಿಗೂ, ನಾಟಕ ನಟನೆಯಲ್ಲಿ ಶ್ರೀ. ಐಜಿಟ್ಟೀರ ಐಯ್ಯಪ್ಪನವರಿಗೂ ಬಹುಮಾನಗಳು ದೊರೆತವೆಂದು ತಿಳಿಯಬರುತ್ತದೆ.

ತಾ 22-2-45 ನೇ ಗುರುವಾರ ಮೂರ್ನಾಡಿನಲ್ಲಿ ದಿವಂಗತ ಹರಿದಾಸ ಅಪ್ಪಚ್ಚಕವಿಗಳ ಸ್ಮಾರಕ ನಿಧಿಯ ಮಿಟಿಂಗೂ, ಕೊಡವ ವಿದ್ಯಾಭಿವೃದ್ಧಿನಿಧಿಯ ಮಹಾಸಭೆಯೂ ರಾ ಬ. ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದು.

ಕೊಡಗು ಜಿಲ್ಲಾ ಬೋರ್ಡಿನ ಮಿಟಿಂಗು ತಾ. 9-2-45 ರಲ್ಲಿ ನಡೆಯಿತು. ಆದರ ಕಾರ್ಯವಿವರವನ್ನು ಮುಂದಿನ ವಾರ ಕೊಡಲಾಗುವದು.

ಟೆಂಪಲ್‌ಫಂಡ್ಸ್ ಕಮಿಟಿಯ ಚುನಾವಣೆಗೆ ಮಡಿಕೇರಿಗೆ ರಾ. ಸಾ. ಪಾಂಡಂಡ ಚಂಗಪ್ಪ, ಕೆ. ನಂಜಪ್ಪ, ಎನ್. ಸಿ. ಬಿದ್ದಪ್ಪ. ಬಿ. ಕೆ. ಮೂರ್ತಿ ಇವರುಗಳೂ, ವೀರಾಜಪೇಟೆಗೆ ಶ್ರೀಗಳಾದ ಎಸ್. ಎಂ ಅಚ್ಚಯ್ಯ ಮತ್ತು ಬಿ. ಐ. ಕರುಂಬಯ್ಯನವರೂ ಉಮೇದುವಾರರಾಗಿ ನಿಂತಿದ್ದಾರೆ.

ತಾ, 23 ನೇ ಶುಕ್ರವಾರ ಸಾಯಂಕಾಲ 8-15 ಗಂಟೆಗೆ ಭಾರತ ವಾಚನ ಮತ್ತು 24 ನೇ ಶನಿವಾರ ಸಾಯಂಕಾಲ 8-15 ಗಂಟೆಗೆ ಸಂಗೀತವೆ ಕಾರ್ಯಕ್ರಮವನ್ನು ಮೈಸೂರು ಆಕಾಶವಾಣಿಯಲ್ಲಿ ಮಡಿಕೇರಿ ಹೈಸ್ಕೂಲು ವಿದ್ಯಾರ್ಥಿಯೂದ ಶ್ರೀ. ಕೋಟೆರ ಎಂ. ಮೇದಪ್ಪನವರು ಮೂಡುವರು.

ನೆರವಂಡ ಅಪ್ಪಚ್ಚು ಸ್ಮಾರಕ ಹಾಕಿ ಕಪ್ಪಿನ ಪರಿದ್ಯಾಟವು ತಾ. 15-2-45 ರಿಂದ ಮಡಿಕೇರಿ ಎಜ್ಜೆಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ಪ್ರಾರಂಭವಾಗಿದೆ. ಪ್ರಥಮ ದಿನದ ಆಟಗಳಲ್ಲಿ ಮಡಿಕೇರಿ ಮಾಂಡರಿನ್ಸ್ ಕ್ಲಬ್ಬಿನವರು ವೀರಾಜಪೇಟೆ ಟೀಮನ್ನು ಸೋಲಿಸಿದರು

---

1942ರಲ್ಲಿ ಅಮೇರಿಕಾ ಸ್ತ್ರೀಯರು ತುಟಿಯ ಬಣ್ಣ, ಮುಖಪೌಡರ್ ಮುಂತಾದ ಖುಷಾಮತ್ತುಗಳಿಗೆ 180 ಕೋಟಿ ರೂ. ವ್ಯಯ ಮಾಡಿರುವರು.

ಸ್ಯಾರಿಸ್ಸಿನವರು ಬೆಕ್ಕನ್ನು ತಿನ್ನುತ್ತಿದ್ದಾರೆ. ಈಗಾಗಲೇ ಅಲ್ಲಿಯ 30 ಸಾವಿರ ಬೆಕ್ಕುಗಳು ಮಾಯವಾಗಿವೆಯಂತೆ. ಒಂದು ಬೆಕ್ಕಿನ ಕ್ರಯ 30 ಶಿಲಿಂಗು ಮೊಸಕ್ಕೆ 15 ಶಿಲಿಂಗು-ತೊಗಲಿಗೆ 15 ಶಿಲಿಂಗು.

## ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.

## ಇವರ ಸಿದ್ಧೌಷಧಗಳು.

1. **ನಿಕಾಫ್ ಟೂತ್ ಪೌಡರ್.** ಬೆಲೆ ಪುಟ್ಟ ಒಂದಕ್ಕೆ 0-1-0
(ಹಲ್ಲುನೋವು, ಕೀವು ಮತ್ತು ರಕ್ತ ಸುರಿಯುವುದು, ಸಾರುವುದು ಇತ್ಯಾದಿಗಳಿಗೆ)

2. **ಪಾಮರಿ ಚೂರ್ಣ** .... ... ಬೆಲೆ ಪೊಟ್ಟ ಒಂದಕ್ಕೆ 0-6-0
(ಕಜ್ಜಿ, ತುರಿ, ನಿಷಬು, ಇತ್ಯಾದಿ ಎಲ್ಲಾ ಚರ್ಮ ರೋಗಗಳಿಗೆ)

3. **ಬಾಲವಧಿನಿ ಮಿಶ್ರಣ** .... ಬೆಲೆ ಬಾಟ್ಲಿ ಒಂದಕ್ಕೆ 1-4-0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಆಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)

4. **ದ್ರಾಕ್ಷಾರಿಷ್ಟ** ... .... ಬೆಲೆ ಒಂದು ಬಾಟ್ಲಿಗೆ 2-6-0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾರ್ಯಗಳಿಗೆ)

ಉಚಿತ ಕ್ಯಾಟಲಾಗಿಗೆ ಬರೆಯಿರಿ—

**ಸೋಲ್ ಏಜೆಂಟ್ಸು** (ಮೈಸೂರು ಮತ್ತು ಕೊಡಗು)
ದಿ ಅಶ್ವಿನಿ ಮೆಡಿಕಲ್ ಹಾಲ್,
215, ಸುಲ ನ್ ಪೇಟೆ, ಬೆಂಗಳೂರು ಸಿಟಿ.



ಯೂಪುದೊಂದು ಮಿಶ್ರಣ ವಿಲ್ಲದೆ ಪ್ರತಿ ದಿನವೂ ಹುರಿದು ಪುಡಿ ಮಾಡಿದ್ದನ್ನೇ ಕೊಳ್ಳಿರಿ.

ನಿಮ್ಮ ಮನೆಗಳಲ್ಲಿರುವ ಕಾಫಿ ಬೀಜವನ್ನು ಕ್ರಮ ಪ್ರಕಾರವಾಗಿ ಹುರಿದು ಪುಡಿ ಮಾಡಿಸುವುದಕ್ಕೆ ಕೆಳಗಿನ ವಿಳಾಸವನ್ನು ಗಮನಿಸಿರಿ.



16)

ಅನುಭವಸ್ಥ ಕಲಸಗಾರರಿಂದ ತಯಾರಿಸಿದ ಸುಪ್ರಸಿದ್ಧ ಮಂಗಳೂರು
## ಮೋಹನ್ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ.
ಎಲ್ಲಾ ತಂಬಾಕು ಅಂಗಡಿಗಳಲ್ಲಿಯೂ ಮಾರಲ್ಪಡುತ್ತಿದೆ.

12) ಕೊಡಗಿನ ಪ್ರವರ್ತಕರು:—
ವೀರರಾಜೇಂದ್ರಪೇಟೆಗೆ— ಸುಬ್ರಹ್ಮಣ್ಯಕ್ಕೆ—
ಶ್ರೀ ಯು. ಕ. ಮುದ್ದಪ್ಪನವರು ಶ್ರೀ ದುರ್ಗಾ ಸ್ಟೋರ್ಸ್.
**ಮೋಹನ್ ಬೀಡಿ ವರ್ಕ್ಸ್**, 273, ರೈಲ್ವೆ ಸ್ಟೇಷನ್ ರಸ್ತೆ, ಮಂಗಳೂರು.

## ಧಾತು ವೃದ್ಧಿ ರಸಾಯನ (ZANDU)
**"ರ್ಯಾಕ್ಯೂ—ಫಾಸ್ಫೋ—ಮೊಲ್ಸ್"**
ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ **ರಸಾಯನ** ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ಕೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಆರಕ್ತರಿಗೆ ಟಾನಿಕ್. ವಿದ್ಯಾರ್ಥಿಗಳಿಗೆ, ವಕೀಲರಿಗೆ, ನ್ಯೆದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು ಇದು ಆರೋಗ್ಯವನ್ನು ಸಂರಕ್ಷಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯನ್ನುಂಟುಮಾಡುವುದು. ಇದರಲ್ಲಿ ಸಮಜೀವಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಗಳಿವೆ.

ಇದರಲ್ಲಿ ಇಬೆಕ್ಟ್ರಿಕ್ ಫಾಸ್ಫೋನೊಲ್ಟ್, ಹೆಮೋಗ್ಲೋಬಿನ್, ಸೋಡಿಯಂ ಸಿರೊ ಫಾಸ್ಫೇಟ್ ಪೆಪ್ಸಿನ್, ಸಾಲ್, ನಕ್ಸ್ ವಾಮಿಕ್ಸ್‌ಬ್ರಾಕ್ಸ್ ಮೊದಲಾದ ಪ್ರಸಿದ್ಧ ಔಷಧಗಳಿವೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಾಲಯಗಳಲ್ಲಿದೆ.

**ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,**
ಗೋಖಲೆ ರೋಡ್, ಬೋಂಬೆ.
19)


## ಸರಕಾರದ ಅನೀತಿ.

ಕೇಂದ್ರ ಎಸೆಂಬ್ಲಿಯಲ್ಲಿ ನಡೆದ ಚರ್ಚೆಗಳಲ್ಲಿ ಕೆಲವು ಮನೆನೀಯ ವಿಚಾರಗಳು ಹೊರಬಿದ್ದಿವೆ. ಯುದ್ಧ ಪ್ರಚಾರದಲ್ಲಿ ಸರಕಾರವು ಅಸಾಧ್ಯವಾದ ಮುಂದುವೆಚ್ಚವೂಡುತ್ತಿದೆಯೆಂದೂ, ಕೇಂದ್ರ ಸರಕಾರದ 3 ಕೋಟಿ ರೂಪಾಯಿಗಳನ್ನು ಬಂಗಾಳ ಸರಕಾರದ ನಿರಾಕರಣಶೋರಣೆಯ ಹೆಸರಿನಲ್ಲಿ ಪಾಳುನೂಡಲಾಗಿದೆಯೆಂದೂ, ಇದಕ್ಕೆ ಸಮಾನವೆ ಲೆಕ್ಕವಸತ್ರಗಳೇ ಇಲ್ಲವೆಂದು ತಿಳಿದುಬಂದಿದೆ. ಸರಕಾರದ ಅರ್ಥಸಚಿವರು ಈ ತಪ್ಪನ್ನು ಒಪ್ಪಿಕೊಂಡು ಇವನ್ನು ವಿಚಾರಿಸುವುದಾಗಿ ಭರವಸೆಯಿತ್ತರು. ರಾಷ್ಟ್ರೀಯ ಸಂರಕ್ಷಣಾಬಾಂಡುಗಳನ್ನು ಮೂರುವದರಲ್ಲಿ ಅಧಿಕಾರಿಗಳು ಕೆಲವು ಕಡೆ ಆನುಸರಿಸಿದ ನೀತಿಯು ಹೊರಬಂದಿದೆ. (1) ಪ್ರತಿಯೊಬ್ಬ ತಂದೆಯು ತನ್ನ ಶಾಲೆಗೆ ಹೋಗುವ ಮಕ್ಕಳಿಗೆ ತಲೆ ಒಂದರ ರೂ. 20 ರಂತೆ ಸಂರಕ್ಷಣಾಖರಾರು ಪಡೆಯಬೇಕಂತೆ. ಇಲ್ಲದಿದ್ದರೆ ಮಕ್ಕಳಿಗೆ ಶಾಲೆಗಳಲ್ಲಿ ಪ್ರವೇಶವಿಲ್ಲ. (2) ಪ್ರತಿಯೊಬ್ಬ ಕೋವಿ ಲೈಸನ್ಸ್‌ದಾರನು ವರ್ಷಕ್ಕೆ 200 ರಿಂದ 500 ರೂ ವರೆಗಿನ ಸಂರಕ್ಷಣಾಖರಾರು ಕೊಂಡು ಕೊಳ್ಳಬೇಕು ಇಲ್ಲವಾದ್ದರೆ ಲೈಸೆನ್ಸ್ ದೊರೆಯದು. (3) ಎರಡು ವ್ಯಾಪಾರಸ್ಥರು ರೂ. 10000 ದಂತೆ ಕರಾರು ಪಡೆಯಬೇಕೆಂದು ಕಂಪು ಅಧಿಕಾರಿಗಳು ಒತ್ತಾಯಮಾಡಲು ಅವರು ಅಷ್ಟು ರಕ್ಕಿಯಿಲ್ಲವೆಂದೂ 1000 ರೂಪಾಯಿಗಳಂತೆತೆಗೆದುಕೊಳ್ಳುವೆವೆಂದು ಹೇಳಿದರೂ ಅಧಿಕಾರಿಗಳು ಒಪ್ಪದೆ ಈ ಬಗ್ಗೆ ಕೋರ್ಟಿನಲ್ಲಿ ಮುಕದ್ದಮ್ಮೆಯಾಗಿ ಜಡ್ಜರು ಅಧಿಕಾರಿಗಳನ್ನು ಎಚ್ಚರಿಸಿದರು ಎಂಬ ಉದಾಹರಣೆಯೂ ಇಂತು. (4) ಕಂದಾಯ ಪಾವತಿಮಾಡುವಾಗ ಸ್ವಲ್ಪ ಹಣವನ್ನು ಸಂರಕ್ಷಣಾಖರಾರಿಗೆ ಉಪಯೋಗಿಸಿ ಬಾಕಿ ಹಣ ತರಲು ರೈತರನ್ನು ಒತ್ತಾಯಮಾಡುವರು. ಹಣತಾರದಿದ್ದರೆ ರಶೀತಿಕೊಡದೆ ಸತಾಯಿಸುವರು. (5) ಸಂರಕ್ಷಣಾಖರಾರು ಪಡೆಯಲಾರದ ಬಡವರಿಂದ ಒಸ್ತಿ ಕೆಗೆದುಕೊಳ್ಳುವದು ಇವೇ ಮೊದಲಾದ ಸರಕಾರ ಅಧಿಕಾರಿಗಳು ಕೈಕೊಳ್ಳುವ ಅನೀತಿಗಳು ಬಹಿರಂಗವಾದುವು

——

## ಟೆಂಡರು ನೋಟೀಸು.

ಆನೆಚೌಕೂರು ಮತ್ತು ಪೂವುಕೂಟ್ಟೆ ಟೋಲು ಗೇಟುಗಳ 1945-46 ನೇ ವರ್ಷದ ಕಂಟ್ರಾಕ್ಟಿನ ಬಗ್ಗೆ ಈ ಕೆಳಗಿನ ಆಸ್ತಿಸಿಗೆ ತಾ. 28-2-45 ರೊಳಗೆ ಸೀಲು ಮಾಡಿ ಕವರಿನಲ್ಲಿ ಖಾಯಿಸ್ ಇರುವ ಕಂಟ್ರಾಕ್ಟುದಾರರು ತಮ್ಮ ಟೆಂಡರುಗಳನ್ನು ಕಳುಹಿಸಬಹುದು. ಪೂವು ಕೂಟ್ಟೆ ಟೆಂಡರು ಕಳುಹಿಸುವವರು ತಮ್ಮ ಅರ್ಜಿಯ ಜೊತೆಯಲ್ಲಿ ರೂ 10/-, ಆನೆಚೌಕೂರಿನ ಟೆಂಡರುದಾರರು ರೂ. 25/- ನ್ನೂ ರೇವಣಾತಿ ಹಣವಾಗಿ ಕಳುಹಿಸಬೇಕು. ಹೆಚ್ಚು ಮೊಲಗಿನ ಟೆಂಡರು ದಾರರ ಅರ್ಜಿಯನ್ನು ಅಂಗೀಕರಿಸಲಾಗುವದು. ಈ ಬಗ್ಗೆ ಪ್ರಸಿಡೆಂಟರ ತೀರ್ಮಾನವೇ ಕಡೆ ತೀರ್ಮಾನವಾಗುವದು. ಅಂಗೀಕರಿಸಲ್ಪಡದ ಟೆಂಡರುದಾರರ ಡಿಪಾಜಿಟ್ಟು ಹಣವನ್ನು ವಾಪಸು ಮಾಡಲಾಗುವದು ಟೆಂಡರುಗ ಫಲಿತಾಂಶವನ್ನು ತಾ. 1-3-45 ರಲ್ಲಿ ಪ್ರಕಟಿಸಲಾಗುವದು. ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಬೋರ್ಡು ಆಫೀಸಿನಿನಲ್ಲಿ ಯಾ ನಾಡುಖ ಜೀರಿಗಳಲ್ಲಿ ತಿಳಿದು ಕೊಳ್ಳಬಹುದು.

ಪ್ರೆಸಿಡೆಂಟ್,
ಕೊಡಗು ಜಿಲ್ಲಾ ಬೋರ್ಡು, ಮಡಿಕೇರಿ.

—೦—

## ಬೇಕಾಗಿದ್ದಾರೆ.

ಕಂಪೋಸಿಂಗ್, ಬೈಂಡಿಂಗ್, ಪ್ರೀ ಟಿಂಗುಗಳಲ್ಲಿ ಯೋಗ್ಯ ಮೂರು ಜನರನ್ನು ತರಬೇತುಮಾಡಿ, ದಕ್ಷರೆಂದು ಕಂಡುಬಂದರೆ 'ಕೊಡಗು' ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವುದಾಗಿ ಲೋವರ್ ಸೆಕೆಂಡರಿ ಪರೀಕ್ಷೆಯಾದವರಿಂದ ಅರ್ಜಿಗಳನ್ನು ಕರೆಯಲಾಗಿದೆ. ಅರ್ಜಿದಾರರು ತಮ್ಮ ಸ್ವಂತ ಬರಹದಿಂದ ಅರ್ಜಿಮಾಡಬೇಕು. ಆರಿಸಲ್ಪಟ್ಟವರಿಗೆ ತರಬೇತುಮಾಡುವಾಗ ಸ್ಟೈಪಂಡು ಕೊಡಲಾಗುವದು. ತರಬೇತಿನ ಅವಧಿ ಒಂದು ವರ್ಷವಾಗಿದೆ. ಖಾಯಿಸ್ ಇರುವವರು ತಾ. 28-2-45 ರೊಳಗೆ ಈ ಪತ್ರಿಕೆಗೆ ಬರೆಯಬಹುದು.

ಮೇನೇಜರ್.
'ಕೊಡಗು' ಮಡಿಕೇರಿ.


## ನಂಬಿಕೆಗರ್ಹವಾದ ಸಂಖ್ಯೆಗಳು.
**23ನೇ ತ್ರೈವಾರ್ಷಿಕ ಮೌಲ್ಯಗಣನೆ.**
**ಮೂರು ವರ್ಷಗಳ ಬೋನಸ್ ಲಾಭ 1,50,88,092.**
ವಿಮಾದಾರರ ಕ್ಷೇಮನಿಧಿ 54 ಲಕ್ಷ ಸೇರಿಸಿದೆ.
ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%
ಎಂಡೋಮೆಂಟ್ .... .... 1000ಕ್ಕೆ ವರ್ಷಕ್ಕೆ 10½%

## 'ಓರಿಯಂಟಲ್'
**ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್**
ಸ್ಥಾಪನೆ ಭಾರತದಲ್ಲಿ 1874] [ಮುಖ್ಯ ಖಜೇರಿ—ಬೊಂಬಾಯಿ.
ಶಾಖೆ—'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು.
ಇನ್ಸ್‌ಪೆಕ್ಟರರ ಆಫೀಸು—ಕೆ. ಸದಾಶಿವ ರೋಡು, ಮಂಗಳೂರು

## The Canara Banking Corporation Limited.

(Incorporated in British India Liabiity of Members is Limited)
14) ETD—1906

**Head Office: UDIPI, South Kanara.**

| | | |
|---|---|---|
| Authorised Capital | .... | Rs. 25,00,000 |
| Issued & Subscribed Capital | ... | Rs. 16,00,000 |
| Paid up capital | .... | Rs 14,76,355 |
| Reserves | . | Rs 4,14,302 |

TOTAL WORKING CAPITL Exceed:
ONE CRORE & 35 LAKHS

## ದಿ ಜೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

**ಜನಬಳಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತ್ತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸ್ಸುಗಳನ್ನು ಸೂಚಿಸಿ ಬರೆಯಿರಿ.**

## ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು
18) ಪಿ ಬಿ ನಂ. 337, ಮದ್ರಾಸು

## ಎಂಪೈರ್ ಆಫ್ ಇಂಡಿಯಾ

### ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

55) ಸ್ಥಾಪನೆ:—೧೮೯೭

| | | |
|---|---|---|
| ೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು | ಒಟ್ಟು ಆದಾಯ | ೯೭,೩೭,೦೦೦ ರೂಪಾಯಿ |
| | ಚಾಲ್ತಿಯಿರುವ ವಿಮೆ | ೧೬,೪೯,೪೮,೦೦೦ ,, |
| | ಜಿಸ್ | ೬,೩೦,೪೬,೧೦೦ ,, |
| | ಕಂಪನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು | ೨,೩೮,೦೦,೦೦೦ ,, |

| ಆಂಗ ಕರ್ತರು: | ವಿಮೆನ್ನು | ಪ್ರಧಾನ ಕಛೇರಿ |
|---|---|---|
| ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರನ್ನ. ಬೆಂಗಳೂರು | ಅರ್ಜಿಗಳನ್ನ ಸ್ವಾಗತಿಸಿದ | ಎಂಪೈರ್ ಆಫ್ ಇಂಡಿಯಾ ಲೈಫ ಬಿಲ್ಡಿಂಗ್ ಬೋಂಬೆ |

## "ಟ್ರಾಪಿಕಲ್"

ಸಂ. ಮೋತಿಲಾಲ್ ನೆದರೂ, ಹಕೀಮ್ ಅಜಮಲ್‌ಖಾನ್,
ಡಾ. ಯಂ ಎ ಅನ್ಸಾರಿ, ಸುಭಾಶ್‌ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಲ್ಪಟ್ಟ
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ

ಜೀವನ ಸಂಪಾಕ್ಯ ಕಂಪನಿಯ ಜೀವಮಾನದಲ್ಲಿ ಸಿಮಸ್ಸು ರೂ.ಸ್ಯಾದು ಅದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಒಂದಾದ ಟ್ರಾಪಿಕಲ್‌ಇನ್ಸೂರೆನ್ಸ್ ಪಿನ ವಾಯಿ ವಿಚಾರಿಸಿ ಬರೆಯಿರಿ: ಡೂಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

**ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್.** ಯಂ ರಂಗನಾಥಶೆಟ್ಟಿ,
52) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು

## ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಸ್ಕರಾರ ವಿಸ್ತರಿಸಿದೆ (1921ರಲ್ಲಿ ಸ್ಥಾಪಿತವಾಗಿದೆ
ವಸೂಲಾದ ಷೇರ್ ಬಂಡವಾಳ ರೂ ೫೨,೦೦೦, ಜನರ ಬಂಡವಾರಾತಿ 2,೫೫,೦೦೦ ವಸೂಲಾದ ಕ್ಷೇಮ ನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,೦೦೦

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ವಿಶೇಷ ಟ್ಟುವಾರಿ ಅವರ ವಿಷಯಿಟ್ಟು ಅಧಿಕವಿದ್ದಲ್ಲಿ 90% ಕೊಡಲಾಗುತ್ತೆ ನಿಶ್ಚಿತ ರೇವಾಗಿ ಗಳಿಗೆ ಒಂದು ವಷ ವಿಂದ ಮೂರು ವರ್ಷಗಳ ವರೆಗೆ ಶೇಕಡ 2 ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½ ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½ ಹತ್ತು ವರ್ಷಕ್ಕಿಂತ ಮೇಲ್ಪಟ್ಟವುಗಳಿಗೆ 4½ ಸೇವಿಂಗ್ಸ್ ಬ್ಯಾಂಕ್ (on daily balance) ವಿಷಯಿಟ್ಟು ಗಳಿಗೆ ಶೇಕಡ 0—8—0 ವರ್ಷಕ್ಕೊಮ್ಮೆ ವಿಚಿತ್ರವಾಗಿ ಲೆಕ್ಕ ಪರಿಶೋಧನೆ ಮಾಡುತ್ತಾರೆ


Edited, Printed and Published by P. I Bellappa at 'Kodagu Press, Mercara for 'Kodagu' Ltd

# "ಜರ್ಮನಿಯು ಬೇಗ ಸೋಲಲಿಕ್ಕಿಲ್ಲ"

## ಭೂಮಧ್ಯ ಸಮುದ್ರದ ಮೇಲೆ ರಷ್ಯನರ ದೃಷ್ಟಿ ?

### ಪೂರ್ವ ಬಂಗಾಳದ ಮೇಲೆ ಬಾಂಬು.

ಲೇ:— 'ಗುಪ್ತ'

ಪಶ್ಚಿಮ ರಂಗಗಳ ಅಂದರೆ ಜರ್ಮನಿಯು ಯುದ್ಧ ಮುಗಿಯುತ್ತಾ ಬಂತು ಎಂದು ವಾರ್ತೆಗಳು ಸಾರುತ್ತಿದ್ದರೂ ಯುದ್ಧದ ಅಂತ್ಯ ಇನ್ನೂ ಕಣ್ಣಿಗೆ ಕಾಣುತ್ತಿಲ್ಲ. ಪೂರ್ವ ಫ್ರಾನ್ಸಿನಿಂದ ಮುಂದೆತ್ತಿ ಒಲಿನಿಸ ಮೇಲೆ ಆಸ್ಟ್ರಿಯಾ ವರತಲು ಬರುತ್ತಿರುವ ರಷ್ಯ ಬೆಂಗಳೂರಿನ ವರ್ಷಲ್ ಝುಕೋಫಿನ ಗಂಡುಗಲಿ ಶಪ್ತು ಕೇಳಿಸುತ್ತಿದ್ದರೂ ಯುದ್ಧ ಇಲ್ಲಿ ಅಂತ್ಯಗೆ ಳ್ಳುವ ಚಿಹ್ನೆ ಇಲ್ಲ. ಸೈಬೀರಿಯಾದಿಂದ ಜಪಾನ್ ಸೈನ್ಯವನ್ನು ತೆಗೆದು ಜರ್ಮನಿಯನ್ನೇ ಪರಾಭವಿಸಿಕೊಳ್ಳಲು ಯತ್ನಿಸುತ್ತಿರುವ ರಷ್ಯನರಕ್ತಿಯು ಗುಟ್ಟಿಸಲು ಎಂದು ಕೆಲವರು ಸಮ್ಮನ್ನು ಸ್ಥೈರ್ಯ ಕೊಟ್ಟುಕೊಳ್ಳಲಾರಂಭಿಸಿದ್ದಾರೆ. ಇದಕ್ಕೆ ಸುಲಭದಲ್ಲಿ ಅತ್ತರ ಸಿಗುವುದಿಲ್ಲ—ರಷ್ಯಾವು ನಿರಾಶವಾದ ದೇಶ. ಫಲವತ್ತಾದ ಪ್ರದೇಶ ಜನಸಂಖ್ಯೆಗಳಿಕ್ಕೆ ಬೇಕಾಗುವ ಸರ್ವ ಸಾಮಗ್ರಿಗಳು ತಲ್ಲಿ ದೊರೆಯುತ್ತವೆ. ಯುದ್ಧಕ್ಕೆ ಬೇಕಾದ ಲೋಹದ ಸಾರಸ್ಯ ಸಂಪತ್ತಿಗಳಲ್ಲಿ ಜೆರೆಯುವಾಗಿದೆ. ಅಮೆರಿಕಾದ ಸಾಂಕೇತಿಕ ರಸ್ತಾಗಳಿಗೆ ತಮ್ಮ ವಿಷಯ ಸಾಂಪ್ರದಾಯಿಕ ಯಶಸ್ಸಿನಿಂದ ಸಮ್ಮಿಲಿಸಿ ಬೇರೆ ರಾಷ್ಟ್ರದ ಜಂಡಿ ಆರು ನೆಡುವ ಸಾಲ್ಲ. ರಷ್ಯಾವು ಆಸಂಖ್ಯ ಪೌರಾಣಿಕ ಸಂಪತ್ತಿನಿಂದ ಬಂಬಿದ ಯುದ್ಧಶಕ್ತಿಯ ಬಲ್ಲವನ್ನೆಲ್ಲಾ ಜೀವನ್ಮರಣದ ಹೋರಾಟದಲ್ಲಿ ಯುದ್ಧಕ್ಕೆ ಬಿಡುವ ಸಾಧ್ಯತೆಯಿದೆ. ಅದು ಸಂಪೂರ್ಣವಾಗಿ ಸಮಾಪ್ತಿಯಾಗುವ ಮೊದಲು ಜರ್ಮನಿಯ ಸೋಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ಕೆಲವರಲ್ಲಿ ಬೇರೂರಿದೆ.

ಸೈಬೀರಿಯಾದ ಸೈನ್ಯವನ್ನು ಈಗ ಪೂರ್ವ ಪ್ರಶ್ಯಾಗಡಿಗೆ ರವಾನಿಸಲಾಗುತ್ತಿದೆ ಎಂಬ ಸುದ್ದಿಯನ್ನು ಕೇಳಿ ಹಿಟ್ಲರ್ ಸೈನ್ಯವು ಪೂರ್ವ ಪ್ರಶ್ಯಾದಿಂದ ಹಿಂದೆಗೆದು ಜರ್ಮನಿಯ ಪಶ್ಚಿಮ ಗಡಿಯಲ್ಲಿ ಸೇರಿಸಿಕೊಳ್ಳುತ್ತಿದೆ ಎಂಬ ಸುದ್ದಿಯು ಹಬ್ಬಿತ್ತು. ಆದರೆ ಇದು ಸುಳ್ಳು ಸುದ್ದಿ ಎಂಬುದು ಈಗ ಸ್ಪಷ್ಟವಾಗಿದೆ. ಪೂರ್ವ ಪ್ರಶ್ಯಾದಲ್ಲಿ ಜರ್ಮನರ ಸೈನ್ಯ ಬಲವು ಹಿಂದಿನಷ್ಟೇ ಇದೆ. ಅಲ್ಲಿ ಸೈನ್ಯವನ್ನು ಕಡಿಮೆ ಮಾಡಿಲ್ಲ

Regd.No. M. 1666.
KODAGU MERCARA. (Coorg).

Regd.No. M. 1666.
KODAGU MERCARA. (Coorg).

ಅಚ್ಚು,ಮಾಡುವವರು ಮತ್ತು

# ಕೊಡಗು

ಸಂಪಾದಕರು:—ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೩ | ತಾರೀಕು ೨೩—೨—೧೯೪೫ನೇ ಶುಕ್ರವಾರ. | ಸಂಚಿಕೆ ೩೮

## ಕಸ್ತೂರ್ಬಾ ನಿಧಿ ಯಾರಿಗೆ ಏನಿಯೋಗಿಸಬೇಕು?

ಪಧ್ಯನಲ್ಲಿ ತಾ. 18ರಲ್ಲಿ ಸೇರಿದ್ದ ಕಸ್ತೂರ್ ಬಾ ನಿಧಿಯ ಪ್ರಾಂತೀಕ ಕಾರ್ಯದರ್ಶಿಗಳ ಸಭೆಯಲ್ಲಿ ಸರ್ವಾನುಮತದಿಂದ ಕೆಳಗಿನ 8 ರಾಪುಗಳು ಅಂಗೀಕರಿಸಲ್ಪಟ್ಟವು.

(1) ಕಸ್ತೂರ್ ಬಾ ನಿಧಿಯ ಧ್ಯೇಯಕ್ಕನುಸಾರವಾಗಿ ಕೆಲಸಮಾಡುವ ಸಂಸ್ಥೆಗಳಿಗೆ ಧನಸಹಾಯ ಕೊಡುವದು. ಇಂಥಾ ಸಂಸ್ಥೆಗಳಿಗೆ ಸಹಾಯಮಾಡಲು ಜಿಲ್ಲಾ ಮತ್ತು ತಾಲ್ಲೂಕಿನ ಸಮಿತಿಗಳ ಶಿಫಾರಸ್ಸು ಅವಶ್ಯಕ್ಕವಾಗಿದ್ದು.

(2) ಸಾಮಾನ್ಯವಾಗಿ ಪ್ರತಿ ಜಿಲ್ಲೆಯ ಕಾರ್ಯಯೋಜನೆಯು ಕೇಂದ್ರ ಸಮಿತಿಯಿಂದ ಧನಸಹಾಯ ಕೇಳಿಬಂದಿಲ್ಲವೆ.

(3) ಕಸ್ತೂರ್ ಬಾ ನಿಧಿಯ ಆಶ್ರಯದಲ್ಲಿ ಗಂಡಸರು ಹೆಂಗಸರು ಮತ್ತು ಮಕ್ಕಳಿಗೆ ಸಂಗಸೂತನವಾದ ಕೂಲಿ ಯಿಡುವ ಕೆಲಸ ಕೊಡಲ್ಪಡಬೇಕು.

(4) ಕಲಸಗಾರರನ್ನು ತರಬೇತುಮಾಡಿದಲು ರೂಪಿಸಲ್ಪಟ್ಟ ಪ್ರಕಟವಾಗಿರುವ ಕೇಂದ್ರಸಮಿತಿಯ ಯೋಜನೆಯನ್ನು ಸಾಧ್ಯವಾದಷ್ಟು ಬೇಗ ಜಾರಿಗೆತರುವದು. ತರಬೇತುಹೊಂದುವ ಗಂಡಸರಿಗೆ ಕಸ್ತೂರ್ ಬಾ ನಿಧಿಯಿಂದ ಸಬ್ಸಿಡಿ ಕೊಡಲ್ಪಡಕೂಡದು.

(5) ಈ ನಿಧಿಗೆ ಸಂಬಂಧಿಸಿದಲ್ಲಿ ಕೆಲಸದ ಧ್ಯೇಯವು ಮಹಿಳೆಯರ ಪುರೋಭಿವೃದ್ಧಿಯ ದೃಷ್ಟಿಯೇ ಆಗಿರಬೇಕು.

(6) ಮಕ್ಕಳ ಶಿಕ್ಷಣ ಮತ್ತು ತಾಯಿಯರ ಆರೋಗ್ಯವು ಈ ನಿಧಿಯ ಕಾರ್ಯಕ್ರಮದ ಅವಿಭಾಗ್ಯವಾಗಿದ್ದು ಒಂದು ವ್ಯಾಪಕ ಸಹಕಾರವಿರಬೇಕು.

(7) ಈ ನಿಧಿಯು ಆಶ್ರಯ ಪಡೆದಿರುವ ಕೆಲಸವು ಕಷ್ಟವಲ್ಲಿರುವವರಿಗೆ ಸಹಾಯಮಾಡುವದೇ ಅಲ್ಲದೆ ಕಷ್ಟದಕಾರಣವನ್ನು ಕಂಡುಹಿಡಿಯು ಅವನ್ನು ನಿವಾರಣವಾಗಿ ನಿರ್ಮೂಲನ ಮಾಡಬೇಕು.

(8) ಕಟ್ಟಿಗೆ, ಜಾಗ, ಮೊದಲಾದ ಪ್ರಯೋಜನವನ್ನು ಕೊಂಡುಕೊಳ್ಳಲು ಸಾರ್ವತ್ರಿಕವಾಗಿ ಈ ನಿಧಿಯಿಂದ ಧನವ್ಯಯಮಾಡಬಾರದು.

ಮಹಾತ್ಮಗಾಂಧಿಯವರು 18 ನಿಮಿಷಗಳ ವರೆಗೆ ಮಾತಾಡಿದರು. ನಂತರ ಪ್ರಶ್ನೆಗಳನ್ನು ಆಹ್ವಾನಿಸಿ ಉತ್ತರವನ್ನಿತ್ತರು. ಮಹಾತ್ಮರ ಆರೋಗ್ಯವು ಶಿಥಿಲವಾಗಿದ್ದರಿಂದ ಈ ದಿನಗಳಲ್ಲಿ ಬಹುಬೇಸರವನ್ನು ಮೌನವ್ರತ ತೆಗೆದುಕೊಳ್ಳುತ್ತಾರೆ.

## ಗಾಂಧೀಜಿಯವರ ಸಲಹೆ.

—೦೦:—

ನಿಧಿಗೆ ಸಂಗ್ರಹವಾಗಿರುವ ಒಂದು ಕೋಟಿ 24 ಲಕ್ಷ ರೂಪಾಯಿಗಳ ವಿಷಯವಾಗಿ ಪತ್ರಿಕಾ ವರದಿಗಾರರೊಬ್ಬರು ಪ್ರಸ್ತಾಪಿಸಿದಾಗ, ಮಹಾತ್ಮರು ಹೇಳಿದರು: ಈ ಹಣವನ್ನು ಸಮರ್ಪಕವಾಗಿ ಖರ್ಚುಮಾಡಲು ಬಹಳ ಜಾಗರೂಕತೆಯಿಂದ ಯೋಚಿಸಬೇಕಾಗಿದೆ. ಹಣವನ್ನು ಸಂಗ್ರಹಿಸಿದವರು ಅದನ್ನು ಖರ್ಚುಮಾಡಲು ಸಲಹೆಯನ್ನು ಕೊಡಬೇಕಾಗಿಲ್ಲ. ಅವರು ಸಂಗ್ರಹಿಸಿದ ಹಣವನ್ನು ಅವರೇ ಖರ್ಚುಮಾಡಬೇಕು. ಆದರೆ ಈ ಹಣವು ಸಂಗ್ರಹವಾಗಿರುವದು ಒಂದು ವಿಶೇಷ ಉದ್ದೇಶಕ್ಕಾಗಿ. ಆದ್ದರಿಂದ ಅದನ್ನು ಖರ್ಚುಮಾಡುವ ಜವಾಬ್ದಾರಿಯು ಕಾರ್ಯದರ್ಶಿಗಳ ಮೇಲಿದೆ. ಅವರು ಈ ಹಣವನ್ನು ಸಮರ್ಪಕವಾಗಿ ಖರ್ಚುಮಾಡಲು ಸಾಧ್ಯವಾಗದಿದ್ದರೆ ಅದನ್ನು ಹಿಂತಿರುಗಿಸಬೇಕು. ಆಗ ಅದನ್ನು ಬೇರೆ ಯಾರಾದರೂ ಖರ್ಚುಮಾಡಬಹುದು. ಈ ಹಣವನ್ನು ಖರ್ಚುಮಾಡಲು ಸಾಧ್ಯವಾಗದಿದ್ದರೆ ಅದನ್ನು ಹಿಂತಿರುಗಿಸಲು ಸಂಕೋಚಪಡಬೇಕಾಗಿಲ್ಲ. ಅದನ್ನು ಹಿಂತಿರುಗಿಸಿದರೆ ಅದರಿಂದ ಯಾರಿಗೂ ಯಾವ ನಷ್ಟವೂ ಆಗುವದಿಲ್ಲ. ಹಣವನ್ನು ಸಂಗ್ರಹಿಸಿದವರು ಅದನ್ನು ಖರ್ಚುಮಾಡಲು ಸಲಹೆಯನ್ನು ಕೊಡಲು ಹೋಗಬಾರದು.

# ಕೊಡಗು

ತಾ. ೩೦-೧-೧೯೪೫ರಂದು ಶನಿವಾರ

## ಜಿಲ್ಲಾ ಬೋರ್ಡಿನ ಆದಾಯ ವೆಚ್ಚ.

ಕ್ರಯಿದ ತಾ. 9-2-45 ರಲ್ಲಿ ಜಿಲ್ಲಾ ಬೋರ್ಡಿನ ಬಜೆಟ್ ವಿಮರ್ಶನ ನಡೆಯಿತು. 1945-46 ನೇ ಸಂವತ್ಸರದಲ್ಲಿ ಬೋರ್ಡಿನ ಖರ್ಚು ಒಂದು ಲಕ್ಷದ 85 ಸಾವಿರವೆಂದು ಅಂದಾಜು ಮಾಡಲಾಗಿದೆ. ಅಂದರೆ ಈ ವರ್ಷದ ಆದಾಯ ಕ್ಕಿಂತಾ ರೂ. 25 ಸಾವಿರ ಹೆಚ್ಚು ಖರ್ಚಾಗಬೇಕಿದೆ. ಈ ಕಾರಣವನ್ನು ಬೋರ್ಡಿನ ಹಿಂದಿನ ಉಳುವರಿಯಿಂದ ಭರ್ತಿ ಮಾಡುವ ವ್ಯವಸ್ಥೆಯಿಂದ ಬಜೆಟ್ಟನ್ನು ಸರಿಗಟ್ಟಲಾಗಿದೆ.

ಬೋರ್ಡಿನ ಆದಾಯವು ಆದರ ಖರ್ಚಿಗೆ ಸರಿಯಾಗಿ ಹೆಚ್ಚುತ್ತಿಲ್ಲ. ಬೋರ್ಡು ಮಾಡುತ್ತಿರುವ ಖರ್ಚಾದರೂ ಆಸವಾರ್ಯವಾದ ಜನಹಿತಕಾರಕ ಖರ್ಚುಗಳು. ಕೊಡಗಿನ ಜನಹಿತಕಾರ್ಯಗಳ ಬಹುಭಾಗವು ಬೋರ್ಡಿನಿಂದಲೇ ನಿರ್ವಹಿಸಲ್ಪಡುತ್ತಿದೆ. ಆದರೆ ಯೋಚಿಸಿದಂತೆ ಜನತೆಯ ಸೇವೆಮಾಡಲು ಬೋರ್ಡಿಗೆ ಶಕ್ತವಷ್ಟು ಧನಬಲವಿಲ್ಲ. ಯುದ್ಧೋತ್ತರ ಕಾಲದಲ್ಲಿ ಬೋರ್ಡಿನಿಂದ ಆಗಬೇಕಾದ ಮಹಾಕಾರ್ಯಗಳಿವೆ. ಕೊಡಗಿನ ವಿದ್ಯಾಭಿವೃದ್ಧಿಯು ಬಹುಭಾಗವು ಬೋರ್ಡಿಗೆ ಸಂಬಂಧಿಸಿದ್ದಿದೆ. ವೈದ್ಯಕೀಯ ವಿಚಾರದಲ್ಲೂ ಅದಕ್ಕೆ ಜವಾಬ್ದಾರಿಯಿದೆ. ಪಶುವಾರ್ತೆಯ ವಿಚಾರದಲ್ಲಿ ಅಲ್ಲೊಂದಲ್ಲೊಂದು ಎಂಬಿರುವ ಕ್ಷಾಂತೀಕ ರಸ್ತೆಗಳನ್ನು ಬಿಟ್ಟು ಉಳಿದವೆಲ್ಲವೂ ಬೋರ್ಡಿನ ಹೊಣೆಯಲ್ಲಿದೆ. ಈ ದೊಡ್ಡ ಕಾರ್ಯಭಾರವನ್ನು ನಿರ್ವಹಿಸಲು ಹಣ ಬೇಕು. ಆದರೆ ಬೋರ್ಡು ಈ ವಿಚಾರದಲ್ಲಿ ತಂಟಾ ಬಡವಾಗಿದೆ.

ತನ್ನ ಆಸ್ಪತ್ರೆಯಲ್ಲಿರುವ ಅಧ್ಯಾಪಕರಿಗೆ ಸಂಬಳವನ್ನು ಕೊಡಲು ಮನಸ್ಸಿದ್ದರೂ ಕೊಡಲಾರದೆ ಕಷ್ಟವಲ್ಲಿದ್ದಾಗ ಸರಕಾರವು ನೆರವಿಗೆ ಬಂದು ಸಹಾಯಮಾಡಿದ್ದುಂಟು. ಹಾಗೆಯೇ ಬೋರ್ಡು ನಿರ್ವಹಿಸಬೇಕಿರುವ ಇತರ ವ್ಯಾಮುಖ್ಯ ಜನಹಿತಕಾರ್ಯಗಳಿಗೂ ಸರಕಾರವು ಧನಸಹಾಯಮಾಡುವುದು ಕರ್ತವ್ಯ. ಬೋರ್ಡು ಮೇಲುಸ್ತುವಾರಿ ನೋಡುತ್ತಿರುವ ರಸ್ತೆಗಳ ಸ್ಥಿತಿ ಹೇಗ್ಗಾಗಿಲ್ಲ. ಅವುಗಳ ಖರ್ಚುಮಾಡಲು ಬೋರ್ಡಿನಲ್ಲಿ ಸಾಕಷ್ಟು ಹಣವಿಲ್ಲ. ಆದ್ದರಿಂದ ವ್ಯಾಪಾರ ವಹಿವಾಟಿಗೆ ಕ್ಷಾಮುಖ್ಯವಾಗಿ ಹಳ್ಳಿಯ ಜೀವನಕ್ಕೆ ತುಂಬಾ ಕಷ್ಟವಾಗಿದೆ. ಮೋಟಾರು, ಬಾರಿ ವಾಹನಗಳಿಂದ ಬರುವ ಉತ್ಪತ್ತಿಯಷ್ಟನ್ನು ಸರಕಾರವೇ ತೆಗೆದುಕೊಳ್ಳುತ್ತಿದೆ. ಇದಕ್ಕೆ ಪ್ರತಿರೂಪವಾಗಿ ಈ ವರ್ಷದಲ್ಲಾದರೂ 22000 ರೂಗಳಿಗೆ ಬಂಡಿಗೆ ರೂ ಕುಸ್ತಿದೆ. ಈ ಜಾತಿಯಿಂದ ಸರಕಾರಕ್ಕೆ ಒಂದು ಲಕ್ಷದ ಹತ್ತಿರ ಉತ್ಪತ್ತಿಯಿರುವಾಗ ಬೋರ್ಡಿಗೆ ಹೆಚ್ಚಿನ ಬಂಡಿಗೆ ಕೊಡಬೇಕಾದುದು ಕರ್ತವ್ಯ. ಮುಂದೆ ಬರುವ ವರ್ಷಗಳಲ್ಲಿ ಬೋರ್ಡು ಹೆಚ್ಚು ಸ್ವಂತ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಅದಕ್ಕೆ ಬೇಕಾದ ಧನವನ್ನು ವದಗಿಸಿಕೊಳ್ಳಲು ಸರಕಾರವೂ ಸಹಾಯಕವಾಗಬೇಕು. ಎಕ್ಸೈಸ್ ಉತ್ಪತ್ತಿಯಿಂದ ಇಂತಿಯೂ ಸರಕಾರಕ್ಕೆ ಕೊಡಗಿನಿಂದ ದೊರೆಯುವ ಲಕ್ಷಾಂತರ ರೂಪಾಯಿಗಳ ಉತ್ಪತ್ತಿಯಲ್ಲಿ ಒಂದು ಲಕ್ಷವನ್ನು ಜಲ್ಲಾ ಬೋರ್ಡಿಗೆ ಬಂಡಿಗೆ ರೂಪದಲ್ಲಿ ಕೊಡಿಸಲು ಸ್ಥಳೀಯ ಸರಕಾರವು ಪೂರ್ಣ ಪ್ರಯತ್ನಮಾಡಬೇಕು.

ಕೊಡಗಿನ ವಿದ್ಯಾಭ್ಯಾಸವು ಯೋಗ್ಯ ಅಧ್ಯಾಪಕರಿಲ್ಲದೆ ಹಿಂದುಡಿಯಿಡುತ್ತಿದೆ ಯೆಂಬ ಕೂಗು ಹಬ್ಬಿದೆ. ಹೆಚ್ಚು ವೇತನಕೊಟ್ಟು ಯೋಗ್ಯ ಅಧ್ಯಾಪಕರನ್ನು ನೇಮಿಸುವ ಶಕ್ತಿ ಬೋರ್ಡಿಗೆ ಇಲ್ಲ. ಆದರೂ ಸಹ ತನ್ನ ಈ ದುರ್ದೆಶೆಯಲ್ಲೂ ಕೂಡ ಆರು ಜನ ಅಧ್ಯಾಪಕರನ್ನು ಸೆಕೆಂಡರಿ ಗ್ರೇಡಿಗೆ ಏರಿಸುವ ತೀರ್ಮಾನಮಾಡಿದ್ದು ಸ್ತುತ್ಯ. ಅಧ್ಯಾಪಕರಿಗೆ ಈ ರೀತಿಯ ಪ್ರೋತ್ಸಾಹಕೊಡುತ್ತಾ ಬಂದರೆ ಉಪಾಧ್ಯಾಯವೃತ್ತಿಯು ಇಂದಿನಂತೆ ಬೇರೆಲ್ಲೂ ಕೆಲಸ ದೊರೆಯದವರೆಗೆ ಇರುವ ವೃತ್ತಿಯಾಗಲಾರದು.

ಕೊಡಗು ಸರಕಾರಕ್ಕೆ ಇಂದು ದುಡ್ಡಿನ ಅಡಚಣೆಯಿಲ್ಲ ಇಂಥಾ ಸಂದರ್ಭದಲ್ಲಿ ವಿಶಾಲರೀತಿಯಲ್ಲಿ ಜನಹಿತ ಕೆಲಸ ನೂಡುವ ಬೋರ್ಡಿಗೆ ಸಹಾಯನೀಡಿ ಜನತೆಯ ಮೆಚ್ಚುಗೆಯನ್ನು ಕೋರುವದು ಸರಕಾರದ ಅದ್ಯಕರ್ತವ್ಯ.

## ದಂತವೈದ್ಯರು.

ಜನತೆಯು ನಾನಾ ರೀತಿಯ ರೋಗಗಳಿಗೆ ಒಳಗಾಗುವಂತೆಯೇ ಹಲ್ಲು ನೋವಿಗೂ ಒಳಗಾಗುವದು ಸ್ವಾಭಾವಿಕ. ಈಗೀಗ ಹಲ್ಲು ನೋವಿನಿಂದ ನರಳುವವರ ಸಂಖ್ಯೆ ಹೆಚ್ಚಾಗತೊಡಗಿದೆ. ಆದರೆ ಆದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಿಸಲು ಸಾರ್ವಜನಿಕವಾದ ವ್ಯವಸ್ಥೆಯಿಲ್ಲದಿರುವದು ವ್ಯಸನಕರ. ಈಗಿನ ಸಿವಿಲ್ ಆಸ್ಪತ್ರೆಗಳಲ್ಲಿ ಹಲ್ಲನ್ನು ಕೀಳುತ್ತಾರೆ ನಿಜ. ಆದರೆ ಅದು ಆ ವಿದ್ಯೆಯಲ್ಲಿ ತರಬೇತಾದವರಿಂದ ಶಾಸ್ತ್ರೀಯ ರೀತಿ ನಡೆಯದ ಕಾರಣ ಬಹುಮತ ಜನರು ಹೆದರಿ ತಮ್ಮ ದಂತದ ಕಾಯಿಲೆ ಚಿಕಿತ್ಸೆಗೆ ಖಾಸಗಿ ಡಾಕ್ಟರುಗಳಲ್ಲಿಗೆ ಹೋಗುತ್ತಾರೆ. ಅವರಿಂದ ಸಾರ್ವಜನಿಕ ಹಿತ ದೃಷ್ಟಿಯಿಂದ ಪ್ರಥಮವಾಗಿ ಮಡಿಕೇರಿ ಮತ್ತು ವೀರಾಜಪೇಟೆ ಸಿವಿಲ್ ಆಸ್ಪತ್ರೆಗಳಲ್ಲಿ ಒಬ್ಬೊಬ್ಬರಂತೆ ದಂತ ವೈದ್ಯರನ್ನು ನೇಮಿಸಬೇಕೆಂದು ನಮ್ಮ ಅಗ್ರಹದ ವಿನಂತಿ. ಒಂದೇ ಬಾರಿ ಇಬ್ಬರನ್ನು ನೇಮಿಸುವದು ಕಷ್ಟವಾದರೆ ಪ್ರಥಮವಾಗಿ ಮಡಿಕೇರಿಯಲ್ಲಾದರೂ ನೇಮಿಸಬೇಕೆಂದು ನಮ್ಮ ಪಡಿತಯ.

## ವರ್ತಮಾನ.

ಹಿಂದೀ ಪ್ರಚಾರ ಸಂಚಾಲಯು ಸಹಾಯಾರ್ಥವಾಗಿ ತಾ. 11-2-45 ರಲ್ಲಿ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ಹಿಂಡೀನಾಟಕವೊಂದು ಅಭಿನಯಿಸಲ್ಪಟ್ಟಿತು.

ವೀರಾಜಪೇಟೆ ಮುನ್ಸಿಪಲ್ ಹಿಂದೂಸ್ಥಾನಿ ಶಾಲಾ ಮುಖ್ಯೋಪಧ್ಯಾಯರಾಗಿದ್ದ ಶ್ರೀ. ಎಂ. ಅಹಮದ್ ಸಾಹೇಬರು ತಾ. 6-2-45 ರಲ್ಲಿ ಶಿವಾಧೀನರಾದರು.

ಕೊಡಗಿನ ಆದಾಯ-ಕಂದಾಯ ಆಫೀಸರಾಗಿ ಶ್ರೀ. ಟಿ. ವೆಂಕಟೇಶ್ವರರಾವ್ ಇವರನ್ನು ಇಂಡಿಯಾಸರಕಾರದವರು ನೇಮಿಸಿರುವರೆಂದು ತಿಳಿಯಬರುತ್ತದೆ.

ಕೊಡಗಿನಲ್ಲಿ ಒಂದು ತಾಲೂ ನೈಸರ್ಗಿಕ ಸಂಪತ್ತಿನ ಸರೀಕ್ಷಣೆಕೇಂದ್ರವನ್ನು ತಾಲೂಮೆರ್ಕ್ಯಂಟಿಂಗ್ ಬೋರ್ಡಿನವರು ತೆರೆಯಲಿರುವರೆಂದು ತಿಳಿಯಬಂದಿದೆ.

ಕಿಗ್ಗಟ್ಟುನಾಡು ಹೈಸ್ಕೂಲನ್ನು ನಡೆಸಲು ಅನುವಾಗುವಂತೆ ಹೊಂಗಾಮಿ ಕಟ್ಟಡ ಒಂದನ್ನು ಕಟ್ಟುವ ವ್ಯವಸ್ಥೆಮಾಡಿರುವ ತಾ. 27-2-45 ರಲ್ಲಿ ಅವರ ಆಸ್ಥಿಭಾರ ಹಾಕಲು ನಿಶ್ಚಯವಾಗಿದೆ. ಹೈಸ್ಕೂಲಿನ ಖಾಯಂ ಕಟ್ಟಡಕ್ಕೆ ಬೇಕಾದ ಸಾಹಿತ್ಯಗಳ ಸಂಗ್ರಹವು ನಡೆದಿದೆ. ವಸೂಲಾತಿಯೂ ತೃಪ್ತಿಕರವಾಗಿ ನಡೆಯುತ್ತಿದೆಯೆಂದು ತಿಳಿಯಬರುತ್ತದೆ

ವೀರಾಜಪೇಟೆಯಲ್ಲಿ ಹಿಂದೀ ಪರೀಕ್ಷೆಯು 18-2-45 ರಲ್ಲಿ ಇಲ್ಲಿಯ ಹೈಸ್ಕೂಲ್ ಹಾಲ್‌ನಲ್ಲಿ ಇಲ್ಲಿಯ ಮುಖ್ಯೋಪಧ್ಯಾಯರಾದ ಶ್ರೀ. ಆರ್. ಎಚ್. ಶೆಟ್ಟಿಯವರ ನೇತೃತ್ವದಲ್ಲಿ ನಡೆಯಿತು. 19 ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದರು.

ವೀರಾಜಪೇಟೆ ಕ್ರೈಸ್ತರ ಗುರುಗಳಾದ ಕ. ಫಾದರ್. ಐ ಬಿ ಸಿಂಪೋರವರು ಬೆಂಗಳೂರಿಗೆ ವರ್ಗವಾದ ಕಾರಣ ಅವರನ್ನು ಬೀಳ್ಕೊಡುವ ಸಮಾರಂಭವು ತಾ. 18-2-45 ರಲ್ಲಿ ನಡೆಯಿತು. ಆವರ ಬದಲು ಗುರುಗಳಾಗಿ ಕ ಫಾ. ಜೆ ಎ. ಡಿಸೋಜರವರು ಬಂದಿರುವರು.

ಕಸ್ತೂರಿ ಬಾ ಪುಣ್ಯತಿಥಿಯ ಸಂಬಂಧ ತಾ. 14-2-45 ರಲ್ಲಿ ಪೊನ್ನಂಪೇಟೆಯಲ್ಲಿ ಒಂದು ಸಾರ್ವಜನಿಕ ಸಭೆಯು ಡಾ. ಪಿ ಎಸ್. ನಾಣಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಸ್ಥಳೀಯ ಆದರ್ಶ ಜೀವನ ವೈಶಿಷ್ಟ್ಯವನ್ನು ಕೊಂಡಾಡಲಾಯಿತು.

ಕೊಡಗು ಎಜ್ಯುಟೇಷನ್ ಎಸೋಸಿಯೇಶನಿನ ಆಶ್ರಯದಲ್ಲಿ ನಡೆದ ನೀರವಂಡ ಅಪ್ಪಚ್ಚು ಸ್ಮಾರಕ ಹಾಕಿಕಪ್ಪಿನ ಪಂದ್ಯಾಟದ ಕಡೇ ಆಟವು ಮಡಿಕೇರಿ ಹೈಸ್ಕೂಲ್ 'ಎ' ಟೀಮಿನವರಿಗೂ ಮಡಿಕೇರಿ ವಾಂಡರರ್ಸ್ ಟೀಮಿನವರಿಗೂ ನಡೆದು ಹೈಸ್ಕೂಲ್ ಟೀಮಿನವರು ಜಯಶೀಲರಾಗಿ ಕಪ್ಪನ್ನು ಗೆದ್ದರು.

ಕೈಕೇರಿ, ಅಮ್ಮತ್ತಿ, ಹೊಸೂರು ಗ್ರಾಮಗಳನ್ನೊಳಗೊಂಡು ಒಂದು ನೂರರಿ ಗ್ರಾಮವನ್ನು ರಚಿಸುವ ದೃಷ್ಟಿಯಿಂದ ಅಮ್ಮತ್ತಿಯ ಕಾರ್ಕಳಾದು ಹೊಳೆಯ ಬಲಸಾರ್ವಜನಿಕ ಸಭೆಯೊಂದು ಕಾರ್ಯಕ್ರಮ 10-3-45 ನೇ ಶನಿವಾರ ಬೆಳಿಗ್ಗೆ 10 ಗಂಟೆಗೆ ನಡೆಯುವದು.

ಕೊಡಗಿನ ಸಿವಿಲ್ ಸರ್ಜನರಾಗಿದ್ದ ಮಿ. ಪ್ರೇನರ್‌ರವರು ತಮ್ಮ ಕೆಲಸದ ಚಾರ್ಜನ್ನು ಅ. ಸರ್ಜನರಾದ ಶ್ರೀ ಸಿ. ಬಿ. ಮೇದಪ್ಪನವರಿಗೆ ಕೊಟ್ಟು ಹೋಗಿರುವರುವರೆಂದೂ, ಇಂಡಿಯಾ ಸರಕಾರದಿಂದ ಬೇರೆ ಐ. ಎಂ. ಎಸ್. ಅಧಿಕಾರಿಗಳನ್ನು ನೇಮಿಸುವ ಸಾಧ್ಯತೆ ತತ್ಕಾಲ ಕಲ್ಲದ ಕಾರಣ ಕೊಡಗಿನವರೊಬ್ಬರನ್ನೇ ಸಿವಿಲ್ ಸರ್ಜನರಾಗಿ ನೇಮಿಸಲಿರುವರೆಂದೂ ತಿಳಿಯಬಂದಿದೆ.

1944 ರ ಕಾಮನ್ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಸಾಸಾದವರ ವೈಕಿ ಶ್ರೀಮತಿ ಪಣವಟ್ಟಿರ ಲಕ್ಷ್ಮಮ್ಮ. ಕೋಡಿರ ಪೂಣಚ್ಚ, ಬಿದ್ದಾಟಂಡ ಪೊನ್ನಮ್ಮ, ಮಂಡೆಯಂಡ ಚಂಗಪ್ಪ, ಮಲ್ಲೇಂಗಡ ದೇವಯ್ಯ, ಕಂಬಿಯಂಡ ಅಪ್ಪಯ್ಯ, ಮನೆಯಂಡ ಪೊನ್ನಮ್ಮ, ಪುಲಿಯಂಡ ಸುಬ್ಬಯ್ಯ. ಕೇಚ್ಚಿರಾಡ ಮೊದಪ್ಪ, ಅಜ್ಜಿಕುಟ್ಟಿರ ವಯ್ಯಪ್ಪ, ಚಿಮ್ಮತ್ತಿ ಕಲಿಯಂಡ ಸುಬ್ಬಪ್ಪ ಇವರುಗಳಿಗೆ ವರ್ಷಕ್ಕೆ ರೂ. 20-ವಾಸ್ತೊಪ್ಪಿದ ಒಂದು ವರ್ಷದ ಅವಧಿಯ ವಿದ್ಯಾರ್ಥಿವೇತನವನ್ನು ಕೊಡಗು ವಿದ್ಯಾನಿಧಿಯಿಂದ ಕೊಡಲಾಗಿದೆ.

ಅಮ್ಮತ್ತಿನಾಡು ಕಾವೇರಿ ಗ್ರಾಮದ ಶ್ರೀ ಸೋಮೆಯಂಡ ಅಪ್ಪಣ್ಣನವರು ತಾ. 7-2-45ರಲ್ಲಿ ತಮ್ಮ 80 ವರ್ಷಪೂರ್ತಿ ಮಾಡಿಕೊಂಡಿರುವ ಶ್ರೀ ಮೂಡೇರ ಮಾಯ್ಯನವರ ಸತ್ಕಾರವನ್ನು ತಾ. 18-2-45ರಲ್ಲಿ ವೈಭವದಿಂದ ಅವರ ಸ್ವಗೃಹದಲ್ಲಿ ನಡೆಯಿತು. 19 ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದರು.

ವೀರಾಜಪೇಟೆ ಕ್ರೈಸ್ತರ ಗುರುಗಳಾದ ಕ. ಫಾದರ್. ಐ ಬಿ ಸಿಂಪೋರವರು ಬೆಂಗಳೂರಿಗೆ ವರ್ಗವಾದ ಕಾರಣ ಅವರನ್ನು ಬೀಳ್ಕೊಡುವ ಸಮಾರಂಭವು ತಾ. 18-2-45 ರಲ್ಲಿ ನಡೆಯಿತು. ಆವರ ಬದಲು ಗುರುಗಳಾಗಿ ಕ ಫಾ. ಜೆ ಎ. ಡಿಸೋಜರವರು ಬಂದಿರುವರು.

ಕಸ್ತೂರಿ ಬಾ ಪುಣ್ಯತಿಥಿಯ ಸಂಬಂಧ ತಾ. 14-2-45 ರಲ್ಲಿ ಪೊನ್ನಂಪೇಟೆಯಲ್ಲಿ ಒಂದು ಸಾರ್ವಜನಿಕ ಸಭೆಯು ಡಾ. ಪಿ ಎಸ್. ನಾಣಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಸ್ಥಳೀಯ ಆದರ್ಶ ಜೀವನ ವೈಶಿಷ್ಟ್ಯವನ್ನು ಕೊಂಡಾಡಲಾಯಿತು.

ಕೊಡಗು ಎಜ್ಯುಟೇಷನ್ ಎಸೋಸಿಯೇಶನಿನ ಆಶ್ರಯದಲ್ಲಿ ನಡೆದ ನೀರವಂಡ ಅಪ್ಪಚ್ಚು ಸ್ಮಾರಕ ಹಾಕಿಕಪ್ಪಿನ ಪಂದ್ಯಾಟದ ಕಡೇ ಆಟವು ಮಡಿಕೇರಿ ಹೈಸ್ಕೂಲ್ 'ಎ' ಟೀಮಿನವರಿಗೂ ಮಡಿಕೇರಿ ವಾಂಡರರ್ಸ್ ಟೀಮಿನವರಿಗೂ ನಡೆದು ಹೈಸ್ಕೂಲ್ ಟೀಮಿನವರು ಜಯಶೀಲರಾಗಿ ಕಪ್ಪನ್ನು ಗೆದ್ದರು.

ಕೈಕೇರಿ, ಅಮ್ಮತ್ತಿ, ಹೊಸೂರು ಗ್ರಾಮಗಳನ್ನೊಳಗೊಂಡು ಒಂದು ನೂರರಿ ಗ್ರಾಮವನ್ನು ರಚಿಸುವ ದೃಷ್ಟಿಯಿಂದ ಅಮ್ಮತ್ತಿಯ ಕಾರ್ಕಳಾದು ಹೊಳೆಯ ಬಲಸಾರ್ವಜನಿಕ ಸಭೆಯೊಂದು ಕಾರ್ಯಕ್ರಮ 10-3-45 ನೇ ಶನಿವಾರ ಬೆಳಿಗ್ಗೆ 10 ಗಂಟೆಗೆ ನಡೆಯುವದು.

ಕೊಡಗಿನ ಸಿವಿಲ್ ಸರ್ಜನರಾಗಿದ್ದ ಮಿ. ಪ್ರೇನರ್‌ರವರು ತಮ್ಮ ಕೆಲಸದ ಚಾರ್ಜನ್ನು ಅ. ಸರ್ಜನರಾದ ಶ್ರೀ ಸಿ. ಬಿ. ಮೇದಪ್ಪನವರಿಗೆ ಕೊಟ್ಟು ಹೋಗಿರುವರುವರೆಂದೂ, ಇಂಡಿಯಾ ಸರಕಾರದಿಂದ ಬೇರೆ ಐ. ಎಂ. ಎಸ್. ಅಧಿಕಾರಿಗಳನ್ನು ನೇಮಿಸುವ ಸಾಧ್ಯತೆ ತತ್ಕಾಲ ಕಲ್ಲದ ಕಾರಣ ಕೊಡಗಿನವರೊಬ್ಬರನ್ನೇ ಸಿವಿಲ್ ಸರ್ಜನರಾಗಿ ನೇಮಿಸಲಿರುವರೆಂದೂ ತಿಳಿಯಬಂದಿದೆ.

1944 ರ ಕಾಮನ್ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಸಾಸಾದವರ ವೈಕಿ ಶ್ರೀಮತಿ ಪಣವಟ್ಟಿರ ಲಕ್ಷ್ಮಮ್ಮ. ಕೋಡಿರ ಪೂಣಚ್ಚ, ಬಿದ್ದಾಟಂಡ ಪೊನ್ನಮ್ಮ, ಮಂಡೆಯಂಡ ಚಂಗಪ್ಪ, ಮಲ್ಲೇಂಗಡ ದೇವಯ್ಯ, ಕಂಬಿಯಂಡ ಅಪ್ಪಯ್ಯ, ಮನೆಯಂಡ ಪೊನ್ನಮ್ಮ, ಪುಲಿಯಂಡ ಸುಬ್ಬಯ್ಯ. ಕೇಚ್ಚಿರಾಡ ಮೊದಪ್ಪ, ಅಜ್ಜಿಕುಟ್ಟಿರ ವಯ್ಯಪ್ಪ, ಚಿಮ್ಮತ್ತಿ ಕಲಿಯಂಡ ಸುಬ್ಬಪ್ಪ ಇವರುಗಳಿಗೆ ವರ್ಷಕ್ಕೆ ರೂ. 20-ವಾಸ್ತೊಪ್ಪಿದ ಒಂದು ವರ್ಷದ ಅವಧಿಯ ವಿದ್ಯಾರ್ಥಿವೇತನವನ್ನು ಕೊಡಗು ವಿದ್ಯಾನಿಧಿಯಿಂದ ಕೊಡಲಾಗಿದೆ.

ಅಮ್ಮತ್ತಿನಾಡು ಕಾವೇರಿ ಗ್ರಾಮದ ಶ್ರೀ ಸೋಮೆಯಂಡ ಅಪ್ಪಣ್ಣನವರು ತಾ. 7-2-45ರಲ್ಲಿ ತಮ್ಮ 80 ವರ್ಷಪೂರ್ತಿ ಮಾಡಿಕೊಂಡಿರುವ ಶ್ರೀ ಮೂಡೇರ ಮಾಯ್ಯನವರ ಸತ್ಕಾರವನ್ನು ತಾ. 18-2-45ರಲ್ಲಿ ವೈಭವದಿಂದ ಅವರ ಸ್ವಗೃಹದಲ್ಲಿ ನಡೆಯಿತು. 19 ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದರು.

## ಸಂಪಾದಕರಿಗೆ ಪತ್ರಗಳು.

ಕಾಮನ್ ಎಂಟ್ರೆನ್ಸ್ ಪರೀಕ್ಷೆಯ ಸಲುವಾಗಿ ಪ್ರತಿ ಪರೀಕ್ಷೆಯಲ್ಲಿಯೂ ಸಾವಿರಾರು ವಿದ್ಯಾರ್ಥಿಗಳೂ, ಅಧ್ಯಾಪಕರೂ ಒಟ್ಟು ಪ್ರಯೋಜನವುಂಟಾಗಿದೆಯೆಂದೂ, ಮುಂದೆ ಪ್ರೈಮರಿ ಪರೀಕ್ಷೆಗೂ ಈ ವ್ಯವಸ್ಥೆಮಾಡಿದರೆ ಉತ್ತಮವೆಂದೂ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಬಾಕ್ಕಿದಾರರೊಬ್ಬರು ಅರಿಕೆ ಇದೆ.

ಮಡಿಕೇರಿ ಹೈಸ್ಕೂಲಿನಲ್ಲಿ ನಾಲ್ಕನೇ ಫಾರಂನಿನಲ್ಲಿ ಸಾರ ಸರಿಯಾಗಿ ನಡೆಯುತ್ತಿಲ್ಲವೆಂದೂ, ಆವರಲ್ಲೂ 'ಬಿ' ಸೆಕ್ಷನಿಗೆ ಬಹು ಕೊಂದರೆಯಾಗುವೆಯೆಂದೂ ಬೇರೊಬ್ಬ ಅಧ್ಯಾಪಕರು ದೊರೆಯುವ ನಾಲೇ ಇದ್ದ ಅಧ್ಯಾಪಕರ ರಾಜೀನಾಮೆಯನ್ನು ಸ್ವೀಕರಿಸಿದ್ದರಿಂದ ಉಪಾಧ್ಯಾಯರಿಲ್ಲದೆ ಬೇರೆ ಸೆಕ್ಷನ್‌ಗಳಲ್ಲಿ ಮೂವತ್ತು, ನಲುವತ್ತು ವಿದ್ಯಾರ್ಥಿಗಳಿದ್ದರೂ 'ಬಿ' ಸೆಕ್ಷನಿನ ಮಕ್ಕಳು ಬಿಂದೆ ಬಿದ್ದು ಹೊಂದರೆಗೆ ಆಸ್ಪದವಾಗಿದೆಯೆಂದೂ ಇನ್ನಾದ್ದರೂ ಈ ತೊಂದರೆಯನ್ನು ಪರಿಹರಿಸಬೇಕೆಂದೂ ವಿದ್ಯಾಭಿವೃದ್ಧಿಯೊಬ್ಬರ ಕೋರಿಕೆ.

## ಕೊಡಗು ಜಿಲ್ಲಾ ಬೋರ್ಡು ಮೊಟೆಂಗು.

ತಾ 9-2-43ರಲ್ಲು ನಡೆದ ಜಿಲ್ಲಾ ಬೋರ್ಡು ಮೀಟಿಂಗಿನಲ್ಲಿ ಆಪ ವ್ಯಾಲಾ ಖ್ಯ ತೀರ್ಮಾನಗಳನ್ನು ಇಲ್ಲಿ ಕೊಡಲಾಗಿದೆ

ಕೊಡಗು ಜಿಲ್ಲಾ ಬೋರ್ಡಿನ ಸರ್ವಿಸಿನಲ್ಲಿದ್ದು ನಿವೃತ್ತರಾಗಿರುವವರಿಗೆ ತುಟ್ಟಿ ಬತ್ಯ ಕೊಡಬೇಕೆಂಬ ಚೀಫ್ ಕಮಿಶನರ ಪತ್ರ ಓದಿ ತುಟ್ಟಿ ಬತ್ಯ ಕೊಡಲು ಆನುವಂಗವಾಗಿ ಸಾರ್ವತ್ರಿಕ ಧನ ಸಹಾಯವನ್ನು ಏರಿಸಲು ಮನವಿ ಮಾಡಿಕೊಳ್ಳಲು ತೀರ್ಮಾನವಾಯಿತು.

ನ ಪೋಲ್ಸು ನಾಡಿನ ಬಂಡಾರ ಮಳ್ಳಂಬೆಳ್ಳಿ ಕಂದಸೆಲ್ಲಿ ಗ್ರಾಮಗಳಲ್ಲಿ ಗ್ರಾಂಟ್ ಇನ್-ಎಯಿಡ್ ಶಾಲೆಗಳನ್ನು ತೆರೆದು ಕ 1-4-45ರಿಂದ ನೂಸಿ ರೂ 10ರಂತೆ ಸಂಬಳಿಗೆ ಕೊಡಲು ತೀರ್ಮಾನವಾಯಿತು

ಹೆಬ್ಬಾಲೆಯಲ್ಲಿ ಒಂದು ಹೊಸ ಶಾಲಾ ಕಟ್ಟಡ ಕಟ್ಟಲು ತೀರ್ಮಾನವಾಯಿತು. ಆದಿಮಂಜೂರು ಶಿಲಾ ಕೆಂಡ ಸಂಬಂಧಿ ಗೆಸುವನ್ನು ಮಂಸಿಕ ರೂ ೨೦೦ಕ್ಕೆ ಕೆಟ್ಟಿಸಲು ತೀರ್ಮಾನವಾಯಿತು.

ಕಾರು ಟಿ, ಹಡಿತ, ಮೊಸಲಾದು ವುಗಳ ವೇಲಿನ ಕಂದ ಯಿಂದ ಬರುವ ಉತ್ಪತ್ತಿಯಲ್ಲಿ ಒಂದು ಲಕ್ಷ ರೂಪಾ ಯಿಗಳನ್ನು ಜಿಲ್ಲಾ ಬೋರ್ಡಿಗೆ ಬಾದಜೀ ಕಂದು ಸ್ಥಳೀಯ ಪಟ್ಟಾರದ ಮೂಲಕ ಕೇಂದ್ರ ಸರಕಾರವನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

ಬೋರ್ಡಿನ ವಿಪರೀತವಾಗಿ ಏರುತ್ತಿರುವ ಖರ್ಚನ್ನು ಸರಿದೂಗಿಸಲು ವಿದ್ಯುತ್ಸೆಸ್ ಹಾಕುವ ಸೂಚನೆಯನ್ನು ಒಪ್ಪಲಿಲ್ಲ.

ಮುಕ್ಕೋಡ್ಲು ಶಾಲೆಗೆ ತಾರೀಕ್ಕು 1-4-45ರಿಂದ ತೀರಗೆ ರೂ 10ರಂತೆ ಗ್ರಾಂಟು ಕೊಡಲು ಪತ್ತು ಏಕ್ಕೊಕ್ಕೆ ಶಾಲೆಗೆ ಕಾಪುತ್ತಿರುವ ಗ್ರಾಂಟನ್ನು ನಿಲ್ಲಿಸಲು ತೀರ್ಮಾನವಾಯಿತು

ವಿದ್ಯುತ್ ಇಲಾಖೆಯ ಅನೇಕ ಉನ್ನತ ಧ್ಯೇಯಗಳು ಇಲ್ಲಿ ಕೈಗೂಡುವ ಪೆರನ್ನು ಹೆಚ್ಚು ಆಕರ್ಷಣೆಯಿಂದ ಮಾಡಲು ಬೇರೆಡೆಗೆ ಹೋಗುವ ಕಾರಣವನ್ನು ಹೆಚ್ಚು ಯೋಗ್ಯತೆ ಇರುವ ಅಧ್ಯಾಪಕರು ಕಳುಹಿಸಲು ಸಂಬಂಧಪಟ್ಟಲ್ಲಿ ಮನವಿ ಮಾಡಿಕೊಳ್ಳುವ ಕಾರಣ ಹೆಚ್ಚಿನ ಆಯಾನಕೆಂದು ಗ್ರೇಡ್ ಅನ್ನು ನಿರ್ಮಿಸಲು ತೀರ್ಮಾನವಾಯಿತು

---

### ಕಸ್ಟೊಡಿಯಾರ ನಿಧಿ ಬೇಗೆ ಏನಿಯೋಗಿಸಬೇಕು?

(1ನೇ ಪುಟದಿಂದ ಸಂಗಿದ್ದಂ)

ಗ ನನ್ನಲ್ಲಿರುವ ಹಣವು ವೆಚ್ಚವಾಗುವದರಿಂದಲೆ ಹೆಂಗಸರು ಬನ್ನಿ ಜವಾಬ್ದಾರಿಯನ್ನು ತಾವೇ ನಿರ್ವಹಿಸಿಕೊಳ್ಳಲು ಶಕ್ತರಾದುದೆಂದು ಅತಿಮಸ್ತೋಷ.

ಪ್ರ:-ಯೋಗ್ಯ ಮಹಿಳಾಕಾರ್ಯಕರ್ತೆಯರು ದೊರೆಯುತ್ತಿದ್ದರೆ ಈ ನಿಧಿಯನ್ನು ಮಹಿಳೆಯರ ಶರಜೀವನಕ್ಕಾಗಿ ಯೂಕೆ ಉಪಯೋಗಿಸಬಾರದು?

ಉ:-ಇದೇ ನನ್ನ ದೈರ್ಯ ಇದಕ್ಕಾಗಿಯೇ ನಾವೆಲ್ಲರೂ ಇಷ್ಟಕ್ಕೆ ಒಂದಿ ರುವ ಯೂರ ಹೆಸರನಿಂದ ಈ ನಿಧಿಯು ಸಂಗ್ರಹವಾಯಿತೆಂ ಆಕಯು ಹೆಸರಿಗೆ ತಕ್ಕಂತೆ ಈ ನಿಧಿಯು ಖರ್ಚುಮಾಡಲ್ಪಡಬೇಕು

ಪ್ರ:-ಹೊರಗೆ ಹೆಂಗಸರು ಹೊರಟರೆ ಅನಾಯಬರುವಂಧಾ ಸಿಂಧ್ ಪ್ರಾಂತ ಮೊದಲಾದ ಕಡೆ ಗ್ರಾಮ ಕೆಲಸ ಹೇಗೆ ಮಾಡುವಿರಿ?

ಉ:- ಹೆಂಗಸರು ಪಟ್ಟಣ ಬಾದಿದ್ದರೆ ಗಂತವರ ಒವಾಟ್ಟಾರಿಪಮಿಸಲೇಕು ನಿಧಿಯನ್ನೆಲ್ಲ ಸಟ್ಟಣ ಹೆಂಗಸರು ಹೆದರಲು ಯಾವ ಕಾರಣವೂ ಇಲ್ಲ ದೃಢನಿಶ್ಚಯ ವಿರಲಿ, ಸಾಧಿಸಲು ಹೆದರದಿರುವ ಯುವ ಹೆಂಗಸನ್ನಾ ಯಾರೂ ಮಾಳಂಗಮಡಿಸಲಾರರು ಹೆಂಗಸರು, ತಮ್ಮ ಹೆಂಡತನವನ್ನು ಬಿಟ್ಟು ಆವಾಯಕ್ಕೆ ಹೊರದೆ ಪುರುಷರಂತೆ ಬರುವಾಗ ಎಲ್ಲರೂ ಈ ನಿಧಿಯ ಯೋಜನದ ಸ್ಥಿಯಲ್ಲಿದೆ

ಪ್ರ:-ನಿಧಿಯನ್ನು ಸರ್ಕಾರಮಾಡಲು ತೊಂದರೆಯಿಲ್ಲವೆಂದರೆ, ಬೆಚ್ಚು ಹಣ ಕೈಬಿಸರ ಸಮುಕರಿಂಸ್ಥಿರಲಿಟ್ಟಿರುತ್ತಿರೆ ಅಂಧ ವರು ಇರಬಹುದೆಂದೆ?

ಉ:-ಹೆಚ್ಚಿನ ಹಣಕಾಟ್ಟಿದ್ದಾ. ಯೂ ನಿಧಿ ಸಂಗ್ರಹಕ್ಕೆ ಪ್ರಯಿಸಿದಮು ಸದಸ್ಯ ನಾಗಲು ಒಬ್ಬನಿಗೆ ಯೋಗ್ಯ ರಿಯನ್ನು ಇರಿಲ ರಕ್ಷ. ಸಮಿತಿಯು ದೊಡ್ಡವರಬಾರದು ಮತ್ತು ಬೇರೆ ಕೆಲಸವಿರುವವರು ಸಮಿತಿಯಲ್ಲಿರಬಾರದು

---

## FOR SALE.

6 60 bahtes of wetland, 60 acres of dryland including a large area of scattered orange plantation (old), Banana area and about 6 acres of newly opened coffee is for sale The property is situated in Sidapur town and enjoys all facilities including water for the paddy fields all the year round The sale also includes cattle, over 50,000 newly burnt bricks a quantity of sawed timber, tenants' quarters, some thatched cattleshed, a cleared Bungalow site etc Owners intend to settle outside Ceiling price Rs 20,000/-. Negotiations open till 15th March only.

*Apply to,-*

*Pilot office* D. M. Arrachco,

C/o Sri D. K Appaya,

Ammatti, S Coorg.

---

## ವಾರ್ತೆಗಳು.

ಅಮೇರಿಕವಲ್ಲಿ ಹೊಸದೊಂದು ತರದ ಸಿಗರೇಟು ತಯಾರಿಸಿರುವರು. ಇದರ ತುಂಡನ್ನು ರೂಪಾಯಕ್ಕಾದರೂ ಒರಸಿ ದೊಡನೆ ಅದು ತನ್ನಷ್ಟಕ್ಕೆ ಉರಿದುಹೊಕ್ಕಿರಲಿಳ್ಳುತ್ತದೆ

ಐದು ಸಾವಿರ ವರ್ಷಗಳ ಹಿಂದೆ ಅಜಿಲ ಚೀನದ ಮೊದಲ ಚಕ್ರವರ್ತಿಯು ರಾಣಿಯೂದ 'ಟ್ಸಾಸೂ' ಎಂಬಾಳು ರೇಶ್ಮೆ ಸಿಲ್ಕುಗಳ ತಯಾರಿಕೆಯನ್ನು ಕಂಡುಹಿಡಿದಳು.

ಬಳ್ಳೆರಿಯೂದ ಸರಕಾರಿ ಹುದ್ದೆದಾರರಿಗೆ ದೊರಕುತ್ತಿರುವ ಮಾಸಿಕ ತಲಬುಗಳು ಈ ರೀತಿ ಇವೆ. ಪ್ರಧಾನ ಮಂತ್ರಿ ರೂ 600, ವಿಶ್ವವಿದ್ಯಾಲಯದೆದೆ ಮಾಜಿ ವಿಕಾರಿಗಳಿಗೆ ರೂ 255, ಪ್ರೊಫೆಸರರಿಗೆ 250, ನ್ಯಾಯಾಧೀಶರಿಗೆ ರೂ. 90 ರಿಂದ 150ರ ವರೆಗೆ, ಸೇನಾನಾಳಿಗೆ ರೂ 325, ಎಲೀಸ್ ರೂ 40; ಧರ್ಮಗುರುಗಳು ಬಿಷೋಪರು ರೂ. 300; ಉಪಾಧ್ಯಾಯರಿಗೆ ರೂ 105. ಅಲ್ಲಿ ಭತ್ತೇ ಜ ಕ್ರಮವಿಲ್ಲ; ಲಂಚದ ಸುಳಿವಿಲ್ಲ ನವ್ಯಜೆ?

1942 ರಲ್ಲಿ ಡಾ. ರಾಜೇಂದ್ರರನ್ನು ಬಂಧಿಸಿದ ಬಳಿಕ ಸ್ವಾತಂತ್ರ ಕಾಂಗ್ರೆಸ್ ಕಚೇರಿಯಲ್ಲಿದ್ದ ಡಾ ರಾಜೇಂದ್ರ ಪ್ರಸಾದರ ಮಹತ್ವದ ಅನೇಕ ಪತ್ರಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾ ಬೇಗಹಾತಿ ಸದಾಕತ ಆಶ್ರಮದಲ್ಲಿಟ್ಟಿದ್ದರು. ಆಗಾಗೆ ದ್ದಲಗಳ ಹೊಟ್ಟೆಯಲ್ಲಿ ಜೀರ್ಣವಾಗಿವೆ ಎಂದು ತಿಳಿಯುತ್ತದೆ. ಇತ್ತೀಚೆಗೆ ಬಿಡುಗಡೆಹೊಂದಿದ ರಾಜೇಂದ್ರಬಾಬುಗಳ ಕಾರ್ಯದರ್ಶಿ ಜೆಕ್ರಧಿರ ಶರಣರಿಗೆ ಆವು ಗಳನ್ನು ಪರಿಯೂಗಿಡಲು ಸರಕಾರವು ಅವ ಕಾಶಕೊಟ್ಟಿತು ಆದರೆ ಮಹತ್ವದ ಆ ಗಿನ ಪತ್ರಗಳೆಲ್ಲ ಹುಳಕಂದು ಹೋಗಿದ್ದು ಅವನ್ನು ಸರಿಪಡಿಸಲು ಶಕ್ಯವಿಲ್ಲೆಂದು ಅವರು ತಿಳಿಸಿರುವರು.

—೦೦—


# SCIENTIFIC ROASTING

ROAST YOUR DAILY COFFEE SEEDS

AT

## SRI SHARADA COFFEE WORKS,

17) MERCARA.

AND

MAKE YOUR COFFEE SUPERIOR.

---

## ದಿ ನಿಮಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.

## ಇವರ ಸಿದ್ಧೌಷಧಗಳು.

1 ನಿಕ್ಷಾ ಟಾನಿಕ್ ಪೌಡರ್. ಬೆಲೆ ಪೊಟ್ಟಣ ಒಂದಕ್ಕೆ 0-1-0
(ಪ್ರತಿ ಕ್ಷಣ ಸ್ಫೂರ್ತಿ ಮತ್ತು ಶಕ್ತಿ ಸಂಪಾದಿಸುತ್ತಾ, ಉತ್ಸಾಹವು ಇಮ್ಮಡಿಗೊಳ್ಳುತ್ತದೆ)

2. ಪಾಮರ ಚೂರ್ಣ ... ಬೆಲೆ ಪೊಟ್ಟಣ ಒಂದಕ್ಕೆ 0-6-0
(ಕೆಮ್ಮು, ಸುರು, ನೆಗಡಿ, ಇತ್ಯಾದಿ ಎಲ್ಲಾ ಜೆರ್ಮ್ ರೋಗಗಳಿಗೆ)

3 ಬಾಲಜಥಿನಿ ಮಿಶ್ರಣ . . ಬೆಲೆ ಬಾಟ್ಲಿ ಒಂದಕ್ಕೆ 1-4-0
(ಮಕ್ಕಳ ಜ್ವರಾಲಿ, ಕೆಮ್ಮು, ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)

4 ದ್ರಾಕ್ಷಾರಿಷ್ಟ . ಬೆಲೆ ಒಂದು ಬಾಟ್ಲಿಗೆ 2-6-0
ರಕ್ತಹೀನತೆ, ಕ್ಷಯ, ಸ್ತ್ರೀಯರ ಮರ್ಮಾಲ್ಯ, ಕಾರ್ಯಗಳಿಗೆ)

ಸೂಚನೆಗಳಿಗೆ ಬರೆಯಿರಿ—

ಸೋಲ್ ಏಜೆಂಟ್ಸ್ (ವೈಯಕ್ತಿಕ ಮತ್ತ ಕೊಡಗು)

ಅಶ್ವಿನಿ ಮೆಡಿಕಲ್ ಹಾಲ್,

2) 215, ಕಬ್ಬನ ಪೇಟೆ, ಬೆಂಗಳೂರು ಸಿಟಿ.

---

## ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಯೂ—ಫಾಸ್ಫೇ—ಮಾಲ್ಟ್"

ಎಂದು ಪ್ರಸಿದ್ಧ ವಾದ ಕ್ಷಯರೋಗಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ಕಾಲಾವಧಿಯಲ್ಲಿ, ಅತಿಶ್ರಮವಿಲ್ಲದಿರುವಾಗ, ಧಾತು ಪುಷ್ಟಿಗೆಯ್ಯುವ

**ರಸಾಯನ**ಗಳನ್ನು ಬಳಸುವುದು ಪ್ರತಿಯೊಬ್ಬ ಸುಧಾರಿಕೆಯುಳ್ಳವರಿಗೆ, ಅತ್ಯವಶ್ಯಕವಾಗಿದೆ.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ತಾತ್ಕಾಲರಿಗೆ, ಕ್ರೀಮ ಟೀಚರಿಗೆ, ಪೋಲೀಸರಿಗೆ, ಗೃಹಸ್ಥಾಶ್ರಮಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು ಇದು ಕಾಲ್ಯಾಮನ್ನು ಸರಿಯಾಗಿಸುವುದು ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು ಇದರಲ್ಲಿ ಸವಿಶೇಷವಾದ ಎಲ್ಲಾ ವಿಷಯಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ದ್ರವ್ಯಗಳವೆ

ಇದರಲ್ಲಿ ಜಜೆಬ್ರ್ ಮಾಲ್ಟ್‌ಎಕ್ಸ್‌ಟ್ರಾಕ್ಟ್, ಹೈಪೋಫಾಸ್ಫೈಟ್ಸ್, ಸೋಡಿಯಂ ಸಿಟ್ರೊ ಫಾಸ್ಫೇಟ್ ಹೈಪೋಸ್, ಸಾಲ್ಟ್, ಮಾಲ್ಟ್ ಎಕ್ಸ್‌ಟ್ರಾಕ್ಟ್ ಮಾದ್ಯಸಹಿತವಾದ ಪ್ರಸಿದ್ಧ ವಿಷಯಗಳಿಂದ ಏದೆ ಇಂದಿನಿಂದಲೇ ನೀವು ಆತುವಂತೆ ಸಹಿಸಿ ಇದು ಎಲ್ಲಾ ಪ್ರಸಿದ್ಧ ಔಷಧಾಲಯಗಳಲ್ಲಿದೆ.

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

20) ಗೋವಾಲ ರೋಡ್, ಪೂನಾ.

## The Canara Banking Corporation Limited.

(Incorporated in British India Liablity of Members is Limited)

15) ESTD—1906.

**Head Office: UDIPI, South Kanara.**

| | | |
|---|---|---|
| Authorised Capital | .... | Rs. 25,00,000 |
| Issued & Subscribed Capital | .... | Rs. 16,00,000 |
| Paid up capital | .... | Rs. 14,76,355 |
| Reserves | .... | Rs. 4,14,302 |

**Total Working Capital Exceeds: ONE CRORE & 35 LAKHS.**

## ದಿ ಜೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಪ್ರತಿನಿಧಿಗಳಿಗೆ —

**ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಕರಾರುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸ್ಸುಗಳನ್ನು ಸೂಚಿಸಿ ಬರೆಯಿರಿ.**

## ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

19) ಪಿ. ಬಿ. ನಂ. 337, ಮದ್ರಾಸು.

## ಎಂಪೈರ್ ಆಫ್ ಇಂಡಿಯಾ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ:—೧೮೯೭.

4)

| | | |
|---|---|---|
| ೪೬ ವರ್ಷಗಳ ಪ್ರತಿಯಲ್ಲಿನ ಕೆಲವು ಸ್ವಪ್ನ ಸಂಗತಿಗಳು. | ಒಟ್ಟು ಆದಾಯ | ₹೭,೩೬,೦೮೦ ಮೀರಿದೆ |
| | ಚಾಲ್ತಿಯಿರುವ ವಿಮೆ | ೧೬,೯೯,೮೮,೦೦೦ ,, |
| | ಆಸ್ತಿ .... .... | ೬,೫೦,೪೬,೭೦೮ ,, |
| | ಕಂಪನಿಯು ಅದಿಯಲ್ಲಿ ಕೊಟ್ಟ ಕ್ಲೈಮುಗಳು | ೮,೫೮,೦೦,೦೦೦ ,, |

| ಅಂಗ ಕಛೇರಿ: | ವಿಜೆನ್ಸ್ | ಪ್ರಧಾನ ಕಛೇರಿ: |
|---|---|---|
| ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಶೇಷಗೌಡ ರಸ್ತೆ, ಬೆಂಗಳೂರು. | ಅರ್ಜಿಗಳನ್ನು ಸ್ವಾಗತಿಸಿದೆ. | ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ |

## "ಟ್ರಾಪಿಕಲ್"

**ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಶ್ರೀ. ಯು. ಎ. ಆಸ್ಫಾರಿ, ಸುಭಾಷ್‌ಚಂದ್ರ ಬೋಸ್**

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

**ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.**

ಜೀವನ ಸಂಧ್ಯಾ ಕಾಲದಲ್ಲಿ ಜೀವನವೆಲ್ಲಾ ನಿಮ್ಮನ್ನು ರಕ್ಷಿಸುವುದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

**ಮುಖ್ಯ ಏಜೆಂಟರು: ಹೊಸ ದಿಲ್ಲಿ] [ಶಿಳ್ಳೆನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:**

**ಯು. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯು. ರಂಗನಾಥಶೆಟ್ಟಿ,**

1) **ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.**

## ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ರಿಜಿ.ಆದೇಶದ ನೊಂದಣೀ ಆಫ್ ಸ್ಥಳಾಂತರ ರಿಜಿಸ್ಟ್ರಾರಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಪಕ್ಷಾತೀತ ಶೇರ್ ಸೊಬಲಗು ರೂ. 95,060, ಪಡೆದ ಬಂಡವೇನಾತೆ 2,24.75ರ ವಸೂಲಾದ ಶೇರ್‌ಮುಖಾಂತರ 2,16,209, ಸೇವಿಂಗ್ಸ್ ಬ್ಯಾಂಕ್ ಖಾತೆಮೊತ್ತು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ವಿವಾಹ ಮೊತ್ತಾದಿಗೆ ಆದರ ಶಿಫಾರಸ್ಸಿನ ಮೇಲೆ ಕೊಡಲಾಗುತ್ತೆ. ನಿರಾಲು ಶೇಷಗಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 3½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಹೆಚ್ಚಾಗಿ ತೆಗೆಯಲ್ಲಿ 4½. ಸೇವಿಂಗ್ಸ್ ಬ್ಯಾಂಕ್ (on daily balance) ಖಾತೆಮೊತ್ತುಗಳಿಗೆ ಶೇಕಡ 3—8—0. ವರ್ಷಕ್ಕೊಮ್ಮೆ ರಿಬೇಟ್ಟಾದರು ಲೆಕ್ಕ ಪರಿಶೋಧನೆ ಮಾಡುತ್ತಾರೆ.


Edited, Printed and Published by P. I. Bellippa at 'Kodagu' Press, Mercara, for 'Kodagu' Ltd.

# ಜರ್ಮನಿಯ ಸಿದ್ಧತೆ-ಜಪಾನರ ಗುಪ್ತಾಸ್ತ್ರ?

## ಜಪಾನಿನ ಮೇಲೆ ರಷ್ಯಾ ಕೈಯೆತ್ತುವದೇ?

— ಲೇ:—'ಗುಪ್ತ' —

ಜಾಗತಿಕ ಯುದ್ಧವು ನಾಲ್ಕುಗಳಿಗೆ ಸ್ಥಿತ್ಯಪ್ರತಿಕಲವಾಗಿ ನಡೆಯುತ್ತಿದೆ. ರಷ್ಯನರು ಮಹಾನ್ ಗಡಿಯ ಭೂಮಭಾಗದಿಂದ ಮುನ್ನುಗ್ಗುತ್ತಿದ್ದಾರೆ. ಈ ಸುಳ್ಳ ಮಿತ್ರರಿವರೆದ ಮುಂದಾಳುಗಳು ಕ್ರಿಮಿಯಾಸ್ಪೇಸದ ಯಲ್ಟಾ ಎಂಬಲ್ಲಿ ಸೇರಿ ಹಠಾಜಿತ ಜರ್ಮನಿಗೆ ಯಾವ ರೀತಿಯ ಉಪಚಾರವನ್ನೂಡಬೇಕೆಂಬು ತೀರ್ಮಾನಿಸಿದರು. ಜರ್ಮನಿಯಿಂದ ನಾಮುಸಕ್ತ ನಳ್ಳು ಕೆತ್ತಿಗೆದು ಜರ್ಮನಿಯನ್ನು ಪಡಿದು ತುಂಡರಿಸಿ ತಮ್ಮ ಸೈನ್ಯಕೋಟಿಯಲ್ಲಿಟ್ಟುಕೊಂಡು ಮುಂದೆ ಜರ್ಮನಿಯು ಯುದ್ಧಕ್ಕೆ ಕಾರಣವಾಗದಂತೆ ಕೆಳಗೊತ್ತುಪಡಿಸಿ ಆನಶ್ಯಕೆಯೆಂಬು ತೀರ್ಮಾನಿಸಿದರು. ಈ ತೀರ್ಮಾನಗಳು ಮುನಃ ಯುದ್ಧಕ್ಕೆ ಬೀಜಾಣುಗಳಾಗಿ ಸರಿಯಾಸಿಲಾವದೇ ಎಂದು ಹಲವರು ಕೇಳುತ್ತಿದ್ದಾರೆ. ಸದ್ಯಕ್ಕೆ ಆ ವಿಚಾರ ಬತ್ತಿಟ್ಟಿಗಿರಲಿ. ಮಿತ್ರರಿಂದ ಒಂದು ವೇಳೆ ಜರ್ಮನಿಯು ಸೋಲಿಸಲ್ಪಟ್ಟರೆ ಜರ್ಮನರು ಏನು ಸೂಡಿಯೂರು? ಇವಕ್ಕೆ ಅವರು ತಯಾರಾಗಿರುವರೇ ಎಂಬುದನ್ನು ವಿಚಾರಿಸಿ ನೋಡಿದರೆ ಆಸಾಧ್ಯವಾದ ಯೋಜನೆಗಳನ್ನು ಅವರು ಕೊಡುತ್ತಿರುವದು ಕಂಡುಬರುವದು ಪ್ರತ್ಯಕ್ಷಸೋಲನ್ನು ಸಹಿದರೆ ಆ ಗಂತರವೂ ಕೂಡಿ ಸಮಯಸಾಧಿಸಿ ಪುನಃ ಜರ್ಮನಿಯಲ್ಲಿ ನಾಮುಸಂಗಡವು ಮೆರೆಯಾದುಂತೆ ನೂಡಲು ಅವಶ್ಯಮಿರುಮಾರ್ಗಗಳನ್ನು ಚಟುವಟಿಕೆಗಳನ್ನು ಅವರು ಅಭಿಸರಿಸುತ್ತಿದ್ದಾರೆ ಈ ಗುಪ್ತ ಚಟುವಟಿಕೆಗಳು ಬಹು ಬಿರುಸಿನಿಂದ ನಡೆಯುತ್ತಿವೆ. ಹಿಟ್ಲರ್ ನುತ್ತಿತರ ನಾಲ್ಕು ಮುಂದಾಳುಗಳು ಸೇರಿ ರಚಿಸಿರುವ ಈ ಗುಪ್ತ ಯೋಜನೆಯಲ್ಲಿ ಎರಡು ಭಾಗ ಗಳಿವೆ. ಸಂಯುಕ್ತರಾಷ್ಟ್ರಗಳು ಜರ್ಮನಿಯನ್ನು ಒಂದು ವೇಳೆ ಒಕ್ಕಸಿಮಿಪಡಿಸಿ ಗುಡ್ಡಕಾಡುಗಳಂದ ಆವರ ಮೇಲೆ ಗತ್ತುಗಾರಿಕೆಯ (ಗೊರಿಲ್ಲಾ) ಯುದ್ಧ ಮಾಡುವದು ಒಂದು ಭಾಗ. ಆಕ್ರಮಿತ ರಾಷ್ಟ್ರಗಳು ಈಗ ನಡೆಸುತ್ತಿರುವ ನುತ್ತು ನಡೆಸುತ್ತಿರುವ ತಮಗೆ ನಿರುವ್ಯವಾದ ಗುಪ್ತ ಕಾರ್ಯಗಳನ್ನು ಅಭ್ಯಾಸ ಮಾಡುವದು ನುತ್ತೊಂದು ಭಾಗ. ಈ ನಿರ್ಣಾಯಗಳನ್ನು ಮಾಡಿ ಎರಡು ವರ್ಷಗಳಾಯಿತ್ತಾ ಬಂತು. 1918ರ ನಂತರ ಜರ್ಮನಿಯು ಕೆಲವು ಬಾಗಗಳನ್ನು ಗಡುಕೆಡಿದಂತೆಗಳಂದ ತನ್ನು ವಶವಿಟ್ಟುಕೊಂಡಂತೆ ಈಗ ಯುದ್ಧದಲ್ಲಿ ಸೋಲುಸಂಭವಿಸಿದ್ದೇ ಆದರೆ 1918ರ ಪುನರಾವರ್ತನೆಯನ್ನು ಮಾಡಿ ಜರ್ಮನಿಯು ಕೆಲವು ಬಾಗವನ್ನಾದರೂ ತನ್ನು ಸ್ವಕ್ಕದ ವಶ ಪ್ರ ಕೊಳ್ಳುವ ನರ್ಣಾಯವೂಡಲು ಜನರಿಗೆ ಶಿಕ್ಷಣಕೊಡ ಲ್ಪಡುತ್ತಿದೆ. ಒಟ್ಟಾಗಿ ಜರ್ಮನಿಯು ಸೋಲಿಸಲ್ಪಟ್ಟ ಕೆ ಜರ್ಮನಿಯ ತುಂಬ ಗಲಾಟೆ ಎಬ್ಬಿಸಿ ಬಂಡಾಯವೆಡಿಸಿ ನಾಮಿಗಳಲ್ಲದೆ ಇತರರಾರೂ ಜರ್ಮನಿಯನ್ನು ಹಿಡಿತವಲ್ಲಿಟ್ಟುಕೊಳ್ಳಲಾರದಂತೆ ಮಾಡುವದು ಇವರ ಧ್ಯೇಯವಾಗಿದೆ ಇಂದು ನಡೆಯುತ್ತಿರುವ ಯುದ್ಧವು ಕೊನೆಗೊಂಡಾಗ ಎಬ್ಬೇ ಜರ್ಮನರು ಜಾತೀವಾದರೂ ಸುಮಾರು 60 ಲಕ್ಷ ನಾಮುಸಂ ಗವರು ಬುಳೇ ಬುಳೆಯುಬಹುದೆಂದು ಅಂದಾಜು ತಲಾಗಿದೆ. ಇವರು ತಮ್ಮ ಸಂಗಡದ ಎಲ್ಲಿ ಜಿ ಗಳನ್ನು ಮುರಿದು ಜಪತೆಯಲ್ಲಿ ಮೀತಕರಾಗಿ ಎಲ್ಲಿ ರೀತಿಯಿಂದಲೂ ಸಂಯುಕ್ತರಾಷ್ಟ್ರಗಳಿಗೆ ತೊಂದರೆ ಮಾಡುವದರಲ್ಲಿ ನಂಶಯವಿಲ್ಲ. ನಾಮುಗಳು ಈ ಭೂಗತ್ತ್ಕಲಂ' ವೃತ್ತಿಯಲ್ಲಿ ಬಹು ನಿಷ್ಣಾತರೆಂದು ಜಗತ್ತೇ ಒಪ್ಪಿಕೊಂಡಿದೆ. ಈ ದೃಷ್ಟಿಯಿಂದಲೇ 1943 ರಿಂದ ವಿಸ್ತೃತಕಾರ್ಯವಿದೆದೆ. ನಾಮುಶಕ್ತಿಯನ್ನು ಅಮೂಲಾಗ್ರವಾಗಿ ಬಸ್ಮಮಾಡಿದವರನ್ನು ಹೊರಡಿಸುತ್ತಿರುವುದಾಗಿದೆ. ಈ ಯೋಜನೆಗೆ ಸಹಾಯಮಾಡುವದಕ್ಕಾಗಿ ಈಗಾಗಲೇ ಸಾವಿರರು ಜರ್ಮನರು ತಮ್ಮ ಪದವಿಗಳನ್ನು ತ್ಯಜಿಸಿ ಸಾರ್ವಸ್ವ ಜರ್ಮನರ ವೇಷಭೂಷಿ ಕೆಲಸಕ್ಕೆ ಸ್ವಾರಂಭಿಸಿರುವರು ಜನರಿಗೆ ತಮ್ಮ ಗುರುತುಹತ್ತುವಹಿಂದು ಶಸ್ತ್ರಕ್ರಿಯೆ ನಡೆಸಿ ಮುಖ ಚರ್ಮಗಳನ್ನು ಪರಿವರ್ತಿಸಿಕೊಂಡವಿದ್ದಾರೆ. ಸಾಯಲೆ ಸಕ್ತಿದೆಂದು ಪ್ರಸಿದ್ಧಿಸುವದು ಸಂಯುಕ್ತರಾಷ್ಟ್ರದ ಸೈನಿಕರ ಉಪಯೋ ಸಂಗ್ರಹಿಸುವದು ಮೊದಲಾದ ಕಾರ್ಯವನ್ನು ಇವರು ಮಾಡುತ್ತಿದ್ದಾರೆ.

ಗತ್ತುಗಾರಿಕೆಯ ಯುದ್ಧ ಶಿಕ್ಷಣ ಕೊಡಲಿಕ್ಕಾಗಿ 1944 ರಲ್ಲಿ 50 ಶಾಲೆಗಳನ್ನು ತೆರೆದಿರುವರು. ತಮ್ಮ ರಾಷ್ಟ್ರಗಳಲ್ಲಿ ಪ್ರಚಾರಮಡಿಸಲು ಬೇಕಾಗುವ ಧನವನ್ನು ಶೇಷಗಾತಿಯಿಟ್ಟಿಟ್ಟು ಕೆಲಸ ಮಾಡುತ್ತಿದ್ದಾರೆ. ಗುಪ್ತಾಸ್ತ್ರಗಳನ್ನು ರಚಿಸುವ ವಿಧಾನಗಳನ್ನು ಬರೆದು ಎಲ್ಲೆಲ್ಲೂ ಹರಿಟ್ಟಿದ್ದಾರೆ. ಒಂದು ವೇಳೆ ಗುಪ್ತಾಸ್ತ್ರ ರಚಿಸದ ವಿಜ್ಞಾನ ರಾಸ್ತ್ರಜ್ಞರು ಯುದ್ಧದಲ್ಲಿ ಮೃತರಾದರೂ ಮುಂದೆ ಈ ಅಸ್ತ್ರಗಳು ತೆ ಯವರಿಸಲು ಅನುಕೂಲವಾಗುವಂತೆ ಈ ವರ್ಗದಾ ನೂತಿದ್ದಾರೆ. ಅಂತರಿಕವಾದ ಈ ಎಲ್ಲಾ ವರ್ಗಾತುಗಳನ್ನು ಮಾಡುತ್ತಾ ಜರ್ಮನಿಯು ರಾಜಂಗದಲ್ಲಿ ಮಿತ್ರರಾಷ್ಟ್ರಗಳನ್ನು ಎದುರಿಸುತ್ತಿದೆ.

ಈಗ ನಡೆಯುತ್ತಿರುವ ಪಶ್ಚಿಮರಂಗದ ಯುದ್ಧ ಪ್ರ ಜರ್ಮನಿ ಕದಪದ ಕತೆ ಅಂತಿಮವೆಂದು ಹೇಳಲಾಗು ತ್ತಿದೆ. ಈ ಕಡೆ ಅಂತ ಪ್ರಾರಂಭವಾಗಿ ಬಹಳ ದಿನ ಗಳಾಯಿತ್ತು. ಅಷ್ಟರ ಅಂತರ ಅಕ್ಕಿಯಷ್ಟಾಗಿ ಉಗು ಹುದೆಂಬುದೇ ಎಲ್ಲರ ಸ್ವಾಸ್ಥ್ಯವಾಗಿದೆ. ನಾಮುಗಳು ಸುಲಭದಲ್ಲಿ ಶರಣುಪಾರರು ಎಂಬುದನ್ನು ಕಳೆದ ವಾರ ಬರೆದಿದ್ದೆನು. ಈ ವಾರದ ಘಟನೆಗಳೂ ಆದಕ್ಕೆ ಸಮರ್ಥನೆಯನ್ನು ಯಿತ್ತಿವೆ. ಮಿತ್ರರನ್ನು ಪಿರಾಲ ರೀತಿಯಿಂದ ನಿಯಿಸಲಾರದೆ ಒಂದು ವೇಳೆ ಜರ್ಮನ್ ಸೇನೆಗಳು ಅಸ್ತ್ರಸ್ಪೆಗೊಳಗಾದರೂ ಯುದ್ಧದ ಅಂತ್ಯವಾದಂತಾಗಿತು. ಜರ್ಮನರು ತಮ್ಮ ಗೊತ್ತಿ ಲ್ಲಾ ಯುದ್ಧಕೈದಿಯಿಂದ ಯುದ್ಧದ ಅಂತ್ಯವನ್ನು ಇನ್ನೂ ಮುಂದಕ್ಕೆ ದೂಡಬಹುದು. ಪೂರ್ವದಲ್ಲಿ ರಷ್ಯನರು ಮುಂದುರಿಯುತ್ತಿದ್ದಾರೆ. ಬಲಿಷ್ಠ ಜೇಗನೆ ಅವರ ವದವಾಗುವದೆಂದು ಹೇಳುತ್ತಿದ್ದಾರೆ. ಆ ದಿ ಯೂವಾಗಲೆಂದು ನಿಶ್ಚಯವಾಗಿ ಹೇಳಲಾಗುವದಿ ಲ್ಲ. ಕೆಬ್ಬಿಸಲಿ ಪಿ ರಲ್ಲಿ ಬರ್ಲಿನ್‌ನ್ನು ವಶಪಡಿಸುವ ವಾಗಿ ರಷ್ಯನರು ಹೇಳಿದ್ದರು. ಆದರೆ ಅವರು ಬರ್ಲಿ ನಿಂದ ಮೂವತ್ತು ಮೈಲುಗಳ ದೂರದಲ್ಲಿಯೇ ಇ ದ್ದಾರೆ. ಬ್ರಿಟಾನಿಸ್ಟ್ ನಗರವೆಂದು ವಶಪಡಿಸಲು ರಷ್ಯಾನಿಗೆ ಜೆ ತಿಂಗಳ ಅವಶ್ಯ ಬೇಕಾಯಿತು. ಹ್ಯಾಗಿರುವಾಗ ಬರ್ಲಿನ್‌ನ್ನು ಸುಲಭದಲ್ಲಿ ವಶಪಡಿಸುವದು ಕನಸಿನಮಾತು. ಈ ವಾರ ಜರ್ಮನರು ಇಟ್ಲೆಗಿತಿ ಯಲ್ಲಿ ಬಹು ಚಟುವಟಿಕೆಪಡಿಸಿದ್ದಾರೆ. ಪಶ್ಚಿಮದಲ್ಲಿ ಜರ್ಮನರ ಸಿಗ್ಫ್ರೈಡ್ ಕೋಟೆಯನ್ನು ಮುರಿ ಯುವದು ಮಿತ್ರರಿಂದಾಗಿಲ್ಲ. ಬದಲು ಈ ವ್ಯೂಹ ವನ್ನು ಜರ್ಮನರು ಹೆಚ್ಚು ಬಲಗೊಳಿಸಿ ವಿಸ್ತರಿಸಿರು ವರು. ಇದನ್ನು ಮುರಿಯುವದು ಬಹು ಪ್ರಯಾಸ ದ ವಿಚಾರವೇ.

ಪೂರ್ವದಲ್ಲಿ ಜಪಾನರ ವಿಚಾರದಲ್ಲಿ ಈಗ ಹೊಸ ವಿಚಾರಗಳು ಹೊರಬರುತ್ತಿವೆ. ಜಪಾನು ತಟಸ್ಥವಾಗಿ ನಿಸ್ಪಿಸುತ್ತಿರುವುದಿಂದು ಯೂರೂ ಭಾವಿಸುವಾರದೇ ಆದರ ಹಡಗುಖರೆಯಲ್ಲಿ ಬಹು ಅಭಿವೃದ್ಧಿಯಾಗಿ ಸ್ವಪ್ರಯತ್ನವಲ್ಲವೆಂದೆ. ಇತ್ತಲಾಗಿ ಜರ್ಮನಿಯಂತೆಯೆ, ಜಪಾನ್ ಅಸ್ತ್ರಗಳನ್ನು ಕಂಡುಹಿಡಿದು ಅದರಲ್ಲಿ ಒಂದು ಸೂತ್ರ ವೈಕರಿ ಬಂದಿದೆ. ಅದೇನೆಂದರೆ ಭಯಂಕರವಾದ ಸ್ಫೋಟಕ ಮತ್ತು ಅಗ್ನಿಜನಕ ಬಾಂಬುಗಳು. ಈ ಬಾಂಬುಗಳು ಅಮೋಘವಾದ ಅನೇಕ ಭಾಗಗಳಲ್ಲಿ ಕಾಡು ಮತ್ತಿತರ ಕಡೆಯು ಬೆಂಕಿಗೆ ಕಾರಣವಾಗಿನೆಯಂತೆ. ಬಹು ದೂರಕ್ಕೆ ಇವನ್ನು ಉಪಯೋಗಿಸಬಹುದಲ್ಲದೆ ಇದರಿಂದ ವಿಪರೀತ ಹಾನಿಯನ್ನು ಮಾಡಬಹುದಂತೆ.

ಇತ್ತಲಾಗಿ ನುತ್ತೊಂದು ವಾರ್ತೆ ಹುಟ್ಟಿದೆ. ಏನೆಂದರೆ ಅಮೇರಿಕಾವು ಜಪಾನರ ಕೈಯಿಂದ ಫಿಲಿಪೈನ್ಸ್‌ನ್ನು ಪುನಃ ವಶಪಡಿಸಿಕೊಂಡಿರುವದರಿಂದ ಅಲ್ಲಿಗೇ ತನ್ನ ಯುದ್ಧ ಮುಗಿಯತೆಂದೂ, ಸುಲಭವೂ, ಏ ರ್ಪಾ, ಇಂಡೋಚೈನಾ ಸೊದಲಾದ ಕಡೆ ತಮ್ಮ ರಕ್ತ ಚೆಲ್ಲಿ ಅಪಾಯಗಳನ್ನು ಬೈಸಿಕೊಳಿಸಲು ಅವಶ್ಯಕತೆ ಯಿಲ್ಲವೆಂದೂ ಆದ್ದರಿಂದ ಅಮೇರಿಕದ ಶಾಂತಸಾ ಗರ ಯುದ್ಧವು ನುಗುಲು ತೆನ್ನ ಬಯಸಿದೆಂದೂ ಅಮೇ ರಿಕದ ದೈಲಿ ನ್ಯೂಸ್' ಎಂಬ ಪತ್ರಿಕೆಯು ಬರೆದಿದೆ. ಇದೇ ರೀತಿಯಲ್ಲಿ ಹಲವು ಅಮೇರಿಕನರ ಅಭಿಪ್ರಾಯ ವಿದೆಯಂತೆ. ಆದರೆ ಇದನ್ನು ನಂಬಲಾಗುವುದಿಲ್ಲ. ಯಕೆಂದರೆ ಹಾಗೆ ನೂಡಿದರೆ ಮಿತ್ರರಾಷ್ಟ್ರಗಳಿಗೆ ದೊಡ್ಡ ಗಂಡಾಂತರ ಸಂಭವಿಸುವದು. ಫಿಲ್ಲೀಯ ಗಿ ನಡೆದ ಯಲ್ಟಾ ಸಮ್ಮೇಳನದಲ್ಲಿ ಒಂದು ತೀರ್ಮಾನ ವಾಗಿ ರಷ್ಯಾವು ಜಪಾನರ ಮೇಲೆ ಯುದ್ಧ ಹೂಡ ಬಹುದೆಂದು ಹೇಳಲಾಗುತ್ತಿದೆ. ಆದರೆ ಇದು ಎಷ್ಟು ಸತ್ಯವೋ ಹೇಳಲಬರುವಿಲ್ಲ. ಇವಕ್ಕೆ ಪ್ರತಿಫಲವಾಗಿ ರಷ್ಯಕ್ಕೆ ಮಂಚೂರಿಯಾ ಮೊದಲಾದ ಭಾಗಗಳನ್ನು ಬಿಟ್ಟುಕೊಡುವ ಮಾತು ಆಡಿಯಾಗಿದೆಯಂತೆ. ಆದರೆ 1942 ರಲ್ಲಿ ರಷ್ಯವು ಗಂಡಾಂತರದಲ್ಲಿದ್ದಾಗ ರಷ್ಯಾ ಜಪಾನುಗಳೊಳಗನ ಒಪ್ಪಂದದಂತೆ ಜಪಾನು ರಷ್ಯಾ ದ ಬೆನ್ನಿಗಾಗಿ ತಿರುಗಿದೆ ಸುದ್ದಿಯಿತ್ತು. ಆದರೆ ಈ ಗ ರಷ್ಯಾವು ಆ ಒಪ್ಪಂದವನ್ನು ಮುರಿದು ಜಪಾನರ ಮೇಲೇ ಬರುವುದೇ ಎಂಬುದು ಸಂಶಯದ ಮಾತು. ಹೀಗೂ ಮುಂದೆ ನೋಡೋಣವಾ.

ರಿಜಿ.ನಂ. ಸಿ. 1550.
KODAGU MERCARA, (Coorg).

# ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೨೩ | ತಾರೀಕು ೨—೩—೧೯೪೪ನೇ ಶುಕ್ರವಾರ. | ಸಂಚಿಕೆ ೩೯

## ಕೊಡಗು ಕುಡುಕರ ರಾಜ್ಯವೇ?

ಲೇ:–'ವಸು'

ಕೊಡಗು ನಾಡಿನಲ್ಲಿ ಪ್ರತಿ ಗ್ರಾಮದಲ್ಲೂ ಸೇಂದಿ ಸಾರಾಯಿ ಯಂಗುತ್ತಿಗೆಗಳಲ್ಲದಿದ್ದರೂ ಪ್ರತಿ ಗ್ರಾಮದಲ್ಲಿ ಸೇಂದಿ ಸಾರಾಯಿ ಹಾವಳಿ ಒಹು ವಿಸ್ತೃತರೀತಿಯಿಂದ ನಡೆಯುತ್ತಿದೆಯೆಂಬುದರಲ್ಲಿ ಸಂಶಯವಿಲ್ಲ ಗುತ್ತಿಗೆಗಳಲ್ಲದಿದ್ದರೂ ಬೆಳಿಗ್ಗೆ ಸಾಯಂಕಾಲ ಬೈನೆಮಂಗಗಳ ಕೆಳಗೆ ಗುಂಪುಕಟ್ಟಿ ಗಲಭೆಮಾಡುವ ದೃಶ್ಯಗಳು ಅಪರೂಪವಲ್ಲ. ಸೇಂದಿ, ಸಾರಾಯಿಗಳ ಮೋಹಕ್ಕೆ ಬಲಿಯಾಗಿ ತಮ್ಮ ಕೆಲಸಗಳನ್ನು ಬಿಟ್ಟು ಹತ್ತಾರು ವೈಲು ಅಂಡೆಲೆಯುವವರಿಗೂ ಕಡಿಮೆಯಿಲ್ಲ. ಈ ಮಾದಕ ಪದಾರ್ಥಗಳು ಮನುಷ್ಯರ ಸ್ವಭಾವವನ್ನು ಕೆಡಿಸಿ ತಮ್ಮ ದಾಸರನ್ನಾಗಿ ಮಾಡಿಕೊಳ್ಳಲು ಅವುಗಳಲ್ಲಿರುವ ಶಕ್ತಿಯೇನು? ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದರೆ ಹೇಳಿಕೊಳ್ಳಲು ಏನೂ ಇಲ್ಲ. ತಮ್ಮ ಜೀವನದ ಕಷ್ಟವನ್ನು ಮರೆಯಲು ಕಳ್ಳುಕುಡಿಯುತ್ತಿರುವೆನ್ನುವವರು ಕೆಲವರು ಕಳ್ಳುಕುಡಿದು ಮತ್ತರಾಗಿ ಮೆರೆಯುವುದೇ ಒಂದು ಸುಖ ಎನ್ನುವವರು ಕೆಲವರು. ಶರೀರದ ಆರೋಗ್ಯಕ್ಕೆ ಒಳ್ಳೆಯದೆನ್ನುವವರು ಕೆಲವರು. ಹೀಗೆ ನಾನಾದೃಷ್ಟಿಯಿಂದ ಕುಡಿಯುವವರಿದ್ದಾರೆ ಇದಾವುದಾದರೂ ಕಳ್ಳುಕುಡಿಯುವದರಿಂದ ಸಿದ್ಧಿಸುವದೇ? ಕಳ್ಳುಕುಡಿದು ಮತ್ತರಾಗಿ ಒಂದು ಕ್ಷಣ ಸರ್ವಸ್ವವನ್ನು ಮರೆತು ವರ್ತಿಸುವದೇನೋ ಸಹಜ. ಆದರೆ ಈ ಉನ್ಮತ್ತತೆಯಲ್ಲಿ ಮಾಡಿದ ಕೃತ್ಯಗಳಿಂದ ಜೀವಾವಧಿ ವರೆಗೆ ಪರಿತಪಿಸುತ್ತಿರುವವರು ಎಷ್ಟು ಜನರಿಲ್ಲ? ಆರೋಗ್ಯಕ್ಕೆಂದು ಕುಡಿಯಲು ಹೋಗಿ ಅದೇ ಒಂದು ಘಟವಾಗಿ ತನ್ನ ಸರ್ವಸ್ವವನ್ನು ಕಳಕೊಂಡವರೆಷ್ಟಿಲ್ಲ? ಮಾದಕಪದಾರ್ಥಗಳ ಅವಗುಣಗಳನ್ನು ವಿವರಿಸುವ ಅಗತ್ಯವೇ ಇಲ್ಲ; ಸರ್ವರಿಗೂ ಇದರ ಕಷ್ಟ ತಿಳಿದೇ ಇದೆ ಇದು ವ್ಯಕ್ತಿಗತವಾಗಿ ಮಾದಕಪಾನೀಯಗಳು ಮಾಡುತ್ತಿರುವ ಅನಾಹಿತವಾದರೆ ಸಾಮಾಜಿಕವಾಗಿ ಇನ್ನಷ್ಟು ಕಷ್ಟನಷ್ಟಗಳನ್ನು ಇದು ಮಾಡುತ್ತಿದೆ. ಇಂದು ಮದುವೆಮುಂಜಿ ಮೊದಲಾದ ಶುಭಾಶುಭ ಕಾರ್ಯಗಳಲ್ಲಿ ಮಾದಕ ಪದಾರ್ಥಗಳನ್ನು ಸೇರಿಸುವದು ಒಂದು ಸಂಪ್ರದಾಯದಂತಾಗಿದೆ. ಸೇಂದಿ ಸಾರಾಯಿ ಸೇರಿಸದವಗನ್ನು ಒಂದು ಕೃತಘ್ನದೃಷ್ಟಿಯಿಂದ ನೋಡುವ ಪರಿಪಾಠವಿದೆ 'ನನ್ಮಲ್ಲಿ ಒಂದು ಸಾರಾಯಿ ಕುಡಿದು ಆನಂದಪಟ್ಟವನು ತನ್ನ ಮದುವೆಯಲ್ಲಿ ಎಲ್ಲರಿಗೂ ಸೊನ್ನೆಸುತ್ತಿದನು' ಎಂಬ ಮಾತುಗಳನ್ನು ಕೇಳಬರಲ್ಲ. ಮದುವೆ ಮೊದಲಾದ ಶುಭ ಉತ್ಸವಗಳಲ್ಲೇ ಅಲ್ಲ; ಇತರ ಸಾಮೂಹಿಕ ಕೂಟಗಳಲ್ಲೂ ಮಾದಕಪದಾರ್ಥಗಳಿಗೆ ಸ್ಥಾನದೊರೆಯುತ್ತಿದೆ. ಕಾರಣವೇನು? ನಮ್ಮಲ್ಲಿ ಹೆಚ್ಚಿನವರಿಗೆ ಯಾವದು ಬಿಟ್ಟರೂ ಈ ಮಾದಕ ಪಾನೀಯಗಳನ್ನು ಬಿಡಲು ಸಾಧ್ಯವಿಲ್ಲವೆನಿಸಿಹೋಗಿದೆ. ಅವನ್ನು ಸೇವಿಸುವದೇ ದರೆ ಒಂದು ಹೆಮ್ಮೆ, ಒಂದು ಆನಂದವಾಗಿದೆ. ಯಾಕೆ? ನಮ್ಮ ಸಮಾಜವು ಈ ರೀತಿಯ ಕಳ್ಳುಕುಡಿಕರಿಗೆ ಪುರಸ್ಕಾರವಿತ್ತಿದೆ. ಈ ಕುಡುಕತನವು ಸಮಾಜದ ಸಂಪ್ರದಾಯವೆಂದು ಬಗೆದಿದೆ. 'ಕೊಡವ ಆನಪಿಂಞ ಕುಡಿಪದ್ ಕಡಿಪದ' ಬುಡುವಕಯ್ಯುವನೆ?' ಎಂಬುದು ಕೊಡವ ಸಮಾಜದವರ ಸಿದ್ಧಾಂತವಾಗಿ ಹೋಗಿದೆ ಪರಿಣಾಮವೇನು? ಕೊಡವ ಸಮಾಜದಲ್ಲಿ ಅರ್ಥೈಯವಾಗಿ ತೊಳಗಿಬೆಳಗುತ್ತಿದ್ದ ಕ್ಷಾತ್ರತೇಜವೊಯವಾಗಿದೆ. ಅವರ ಸಿರಿಸಂಪದಗಳು ಇತರರ ಹಸ್ತಗತವಾಗಿವೆ. ಅವರ ಸ್ವಾತಂತ್ರ್ಯ ಸ್ವಾಭಿಮಾನ ನಾಶವಾಗಿ ಅಧಃಪತಿತರಾಗಿದ್ದಾರೆ 'ಜೋ ಹುಕ್ಮ್' ಭಾವನೆಯಲ್ಲಿ ಶಿರಬಾಗಿ ಕೇವಲ ಧೀರುಗಳಾಗಿದ್ದಾರೆ.

ಹಗಲಿರಿ ದುಡಿಯುವವರಿಗೆ ಇದು ಹಿತವೆಂಬ ಭಾವನೆಯಿಂದ ಇದರ ಸೇವನೆಗೆ ಹೋಗಿ ಅವಲ ತಲೆಗೇರಿ ಬುದ್ಧಿಸ್ವಾಸ್ಥ್ಯವಿಲ್ಲದೆ ಕೊಲೆ, ದಂಗೆಗಳಿಗೆ ಕಾರಣವಾಗಿದೆ. ಮರ್ಯಾದೆಗಾರರ ಮರ್ಯಾದೆಯೂ, ನ್ಯಾಯವಂತರ ನ್ಯಾಯವೂ ಅವಲ ತಲೆಗೇರಿದಾಗ ಮಾಯವಾಗುತ್ತವೆ. ಈ ರೀತಿ ಈ ಅವಲು ಸೇವನೆಯಿಂದ ಕೊಡಗಿನಲ್ಲಿ ಆಗುತ್ತಿರುವ ನಷ್ಟ, ಕಷ್ಟ, ನೀಚಕೆಲಸಗಳು ಅಸಂಖ್ಯಾತವಾಗಿವೆ. ಇವುಗಳೆಲ್ಲವೂ ವರ್ಣಿಸಬೇಕಾದ ಅವಶ್ಯಕತೆಯಿಲ್ಲ.

ಹಳ್ಳಿಯ ರೈತನು ಹಿಂದೆಯೂ ಒಡವನು. ಇಂದೂ ಬಡವನೆ. ಇಂದು ಆತನ ಕೈಯಲ್ಲಿ ಹೆಚ್ಚು ಹಣ ಓಡಾಡುತ್ತಿದೆ. ಹಣ ಓಡಾಡಿದರೂ ಆತನಿಗೆ ಲಾಭವಿಲ್ಲ ಬತ್ತಕ್ಕೆ ಹೆಚ್ಚು ಕ್ರಯದೊರೆತರೂ ಇತರ ಸಾಮಾನುಗಳನ್ನೂ ಹೆಚ್ಚು ಕ್ರಯಕೊಟ್ಟೇ ಆತನು ಪಡೆಯ ಬೇಕು. ಅದರೂ ಎಂದೂ ಇರದ ರೀತಿ ಓಡಾಡುವ ಹಣವನ್ನು ಕಂಡು ತನು ಸಿರಿವಂತನಾಗಿರುವೆನೆಂಬ ಭ್ರಮೆ ಆತನಿಗೆ ಬಂದಿದೆ. ಆದರಿಂದ ಆತನು ಇಂದು ತನ್ನಲ್ಲಿಯ ಹಣವನ್ನು ಅವಲು ಪದಾರ್ಥಕ್ಕೆ ಹೆಚ್ಚೆಚ್ಚು ಖರ್ಚುಮಾಡಲು ತೊಡಗಿದ್ದಾನೆ. ಇದರ ಪರಿಣಾಮ ಹಣದ ಈ ಉಬ್ಬರದ ಕಾಲದಲ್ಲಿ ಗೋಚರವಾಗಲಾರದು. ತನ್ನ ಇಂದಿನ ಐಶ್ವರ್ಯಕ್ಕೆ ಗಿ ಬೆರಳು ಕಚ್ಚುವ ದಿನಗಳು ಮುಂದೆ ಬಾರದಿರವು ಇಂದು ಕೊಡಗಿನ ಬಡ ರೈತರಾದ ನಮ್ಮ ಲಕ್ಷಾಂತರ ರೂಪಾಯಿ ಗಳು ಈ ಸರಳ ನಶಾಕ್ಕಾಗಿ ಸೂರೆಯಾಗುತ್ತಿವೆ. ಕೊಡಗು ಸರಕಾರದ ಆದಾಯದ ೪ ಅಂಶವಷ್ಟು ಹಣ ಅಂದರೆ ೨ ಲಕ್ಷಕ್ಕೆ ಮಿಂಚಿದ ಹಣ ಎಕ್ಸೈಸ್ ಉತ್ಪತ್ತಿಯಿಂದ ಬರುತ್ತದೆ ಎಂದರೆ ಅದರ ಅರ್ಥವೇನು? ಕೊಡಗು ಕುಡುಕರನಾಡಾಗಿದೆ; ದುಃಖಿಟ್ಟಿಗಳ ಆಗರವಾಗಿದೆ ಎಂದಲ್ಲವೇ? ಸರ್ವಜ್ಞಕವಿಯು, 'ಸುರೆಯ ಸೇವಿಸುವಂಗೆ | ಸೀಗರ್ವಪಿಡಿವಂಗೆ | ಪರಸ್ತ್ರೀಯ ಮುಟ್ಟುವೋಪಂಗೆ | ಶಿವಿಹಿಂದು ಸ್ಥಿರವಲ್ಲನೋಡು ಸರ್ವಜ್ಞ || ಎಂದು ಹೇಳಿದ ನುಡಿ ಎಂದೂ ಅಸತ್ಯವಲ್ಲ. ಮದ್ಯಪಾನ ಮಾಡಿದವನಿಗೆ ತಲೆಯೆಂಬಲಾರದು. ಅಂದರೆ ಬುದ್ಧಿಬಲವಿರಲಾರದು. ಬುದ್ಧಿಬಲವಿಲ್ಲದವನು ಶಿರವನ್ನು ಉಳಿಸಿಕೊಳ್ಳಲಾರನು. ಆದ್ದರಿಂದ ಕೊಡಗುನಾಡು ಮದ್ಯಪಾನದ ದುಷ್ಪರಿಣಾಮಕ್ಕೆ ಬಿದ್ದು ವಿನಾಶಹತವನ್ನು ಹಿಡಿದಿದೆ. ಈ ಸಂದರ್ಭದಲ್ಲಿ ನಾವು ಎಚ್ಚೆತ್ತುಕೊಂಡು ವರ್ತಿಸದಿದ್ದರೆ ನಮ್ಮ ಅವನತಿಯೂಗುವದು ಖಂಡಿತ.

ಅದರಲ್ಲೂ ಹಳ್ಳಿಗರಾದ ನಾವು, ಬಡ ರೈತರು ಹೆಚ್ಚು ಎಚ್ಚರಿಕೆಯಿಂದ ವರ್ತಿಸಬೇಕು ನಮ್ಮ ದುಡ್ಡು ಅನಾವಶ್ಯಕವಾಗಿ ಹೋಗಬಾರದು. ಬೆವರು ಸುರಿಸಿ, ರಕ್ತಕುದಿಸಿ ದುಡಿದ ದುಡಿತ ಈ ರೀತಿ ಅಪವ್ಯಯವಾಗಬಾರದು ಕೊಡಗಿನಲ್ಲಿ ಸೇಂದಿ ಸಾರಾಯಿ ಅಂಗಡಿಗಳ ಹರಾಜಾಯಿತು. ಪ್ರತಿಯೊಂದು ಅಂಗಡಿಯೂ ಕಳೆದ ವರ್ಷಕ್ಕಿಂಧಾ ಹೆಚ್ಚಿಗೆ ಹಣಕ್ಕೆ ಹರಾಜಾಗಿದೆ. ಯೂನಿಯರ್ಯಿಂದ ಕಂಟ್ರಾಕ್ಟರರು ಹೀಗೆ ತೆಗೆದುಕೊಂಡಿರುವರು 'ರತ್ನ' ನುಡಿದ ಮಾತಿನಂತೆ, 'ನೀರ್ ಗಿ ರ್ ಬೆರೆಸಿ ಮೋ! ತೊಟ್ಟೊಟ್ಟೂನೆ ಮೋ! ಒಡವನ ಜೇಪಡ ಪುಡಿಕಾಸ್ನೆಲ್ಲಾ ಕರಕೋಂತಾನೆ ಗೋ!' ಎಂಬುದು ಸತ್ಯ. ಆದ್ದರಿಂದ ರೈತಕಾದ ನಾವು ಎಚ್ಚರಿಕೆವಹಿಸಬೇಕು. ಯಾವ ಸುಧಾರಕರೂ ಬಂದು ನಮ್ಮನ್ನು ಉದ್ಧಾರಮಾಡುವಂತಿಲ್ಲ. ನಾವೇ ನಮ್ಮ ಉದ್ಧಾರ ಮಾಡಿಕೊಳ್ಳಬೇಕು. ಪ್ರತಿ ಗ್ರಾಮದ ಬೆನ್ನೆಲುಬಾದ ನಾವುಗಳು ಸಂಘಟನೆ ಮಾಡಿಕೊಂಡು, ಸಮಿತಿಗಳನ್ನು ನೇಮಿಸಿಕೊಂಡು ಯೋಗ್ಯಸಲಹೆ ನೀಡಿಕೊಂಡು ನಮ್ಮನಾಡನ್ನು ಆವರಿಸಿರುವ ಈ ದುಷ್ಪರಿಣಾಮವನ್ನು ನಿವಾರಿಸಲು ಯತ್ನಿಸಬೇಕು. ಮದುವೆ ಹಬ್ಬ, ಹುಣ್ಣಿಮೆಗಳಲ್ಲಿ ಮಾದಕಪದಾರ್ಥಗಳನ್ನು ಉಪಯೋಗಿಸದಂತೆ ಗ್ರಾಮದಲ್ಲಿ ಪ್ರಚಾರಮಾಡಿ ಎಲ್ಲರನ್ನೂ ಒಪ್ಪಿಸಿ ಆ ರೀತಿ ಕಟ್ಟುಮಾಡಬೇಕು. ನಮ್ಮ ಮಕ್ಕಳ ಹಿತಕ್ಕಾಗಿ, ಕುಟುಂಬದ ಸೌಖ್ಯಕ್ಕಾಗಿ ಉಪಯೋಗವಾಗಬೇಕಾದ ದುಡ್ಡು ಸೇಂದಿ ಕಂಟ್ರಾಕ್ಟುದಾರನ ಕಿಸೆಸೇರುವದು ವಿಶಾದದ ಸಂಗತಿ ನಿಷ್ಕಾಮಭಾವದಿಂದ ಬೆವರಿಳಿಸಿ ದುಡಿದ ಪವಿತ್ರ ಸಂಪಾದನೆಯು ಸುರಾಂಗನೆಯು ಮಡಿಲಲ್ಲಿ ಭಸ್ಮವಾಗುವದು ಕೊಡಗಿನವರ ದುರ್ದೈವ ಮಾನವ ಜನ್ಮವು ಪವಿತ್ರವಾದುದು ಮನುಷ್ಯಶರೀರವೇ ಜಗತ್ತಿನ ಅತ್ಯುತ್ಕೃಷ್ಟವು ದೇವಸ್ಥಾನ ಇತ್ಯಾದಿ ದೇವಸ್ಥಾನದಲ್ಲಿ ಪವಿತ್ರಭಾವನೆಯ ಆರಾಧನೆಮಾಡುವದನ್ನು ಬಿಟ್ಟು ನೂದಕ ಪದಾರ್ಥಗಳ ಸೇವನೆಯಿಂದ ಅಪವಿತ್ರಮಾಡಿಕೊಳ್ಳುವದು ಇಹದ ವತ್ತು ಪರದ ಈ ಎರಡು ದೃಷ್ಟಿಯಿಂದಲೂ ಮಹಾಪರಾಧ ಇನ್ನಾದರೂ ನಾವು ಕಣ್ಣಿರಿದು ಈ ದುರಭ್ಯಾಸಗಳನ್ನು ತೊಡೆಸಿ ಕೊಡಗು ನಾಡನ್ನು ಸುಖ ಸೌಭಾಗ್ಯದ ಆಗರವಾಗಿ, ಪವಿತ್ರಭಾವನೆಯ ಜನರ ನಿವಾಸಸ್ಥಾನವಾಗಿ ಮಾಡುವಾ.

---

## ಮುಂದಾಳುಗಳ ಬಿಡುಗಡೆ. ಏಪ್ರಿಲ್ ೨೫ ರಲ್ಲಿ?

ಮುಂದೆ ಜರಗಲಿರುವ ಗೋಲ್ಡನ್ ಗೇಟ್ ಸಮ್ಮೇಳನದಲ್ಲಿ ಭಾಗವಹಿಸುವ ಕಾಲಕ್ಕೆ ಯಾವದೇ ಕಲಂಕವಿಲ್ಲದೆ ಭಾಗವಹಿಸಲಮವಾಗುವಂತೆ ಬರುವ ಏಪ್ರಿಲ್ ೭೫ ರೊಳಗೆ ಹಿಂದೂದೇಶದ ಜೈಲಿನಲ್ಲಿರುವ ಕಾಂಗ್ರೆಸ್ ಮುಂದಾಳುಗಳನ್ನು ಬಿಡುಗಡೆಗೊಳಿಸುವದೆಂದು ವರ್ತಮಾನವಿಲೆಯೊಂದು ತಿಳಿಸುತ್ತದೆ ಬ್ರಿಟಿಷ್ ಮಂತ್ರಿಮಂಡಲದಲ್ಲಿರುವ ಲೇಬರ್ ಪಕ್ಷದ ಮಂತ್ರಿಗಳು ಈ ಸಮಸ್ಯೆಯನ್ನು ಮಂಡಿಟ್ಟು ಮುಂದಾಳುಗಳ ಬಿಡುಗಡೆಮಾಡಬೇಕೆಂದು ಹೌಂಡ್ ಲಾಸ್ಕಿಯವರು ಮಂತ್ರಿಗಳಲ್ಲಿ ಒತ್ತಾಯಪಡಿಸುತ್ತಿರುವರಂತೆ

---

ತಮ್ಮ ಹಕ್ಕುಗಳಿಗೆ ಸನ್ನಾರ್ಗಕ್ಕೆ ಹೆಚ್ಚಬೇಕು. ಆದ್ದರಿಂದ ನೇಮಕವಾದ ಗ್ರಾಮ ಪಂಚಾಯತಿಯ ಅಧಾಕ್ಷರು ಒಂದು ಮೊತ್ತದ ವರೆಗೆ ಸರ್ವರೂ ಸಂಕಣಬದ್ಧರಾಗಬೇಕು. ಸಮಾಜದ ಸಂಪತ್ತು, ನೀತಿ, ನೆಲೆತಪ್ಪಿ ನ್ಯಾಯವಾದ ರಾಜಕೀಯಶಕ್ತಿಯನ್ನೆ ಬಲಿಪಡೆದಿರಬೇಕು. ಸ್ವತಂತ್ರವಾಗಿ ದೃಷ್ಟಿಯಿಂದ ಅಧ್ಯಾಸಿಸಿ ಸ್ವತಂತ್ರವಾದ ರಾಜಕೀಯಶಕ್ತಿಯ ಶೃಂಖಲಾ ವರ್ತನೆಯನ್ನು ನಿರ್ವಹಿಸಬೇಕು.

# ಕೊ ಡ ಗು

ತಾ. 3-3-ರಳಿಯನೇ ಶುಕ್ರವಾರ


## ಕಾಗದದ ತೊಂದರೆ.

ಕೊಡಗಿನಲ್ಲಿ ಕಾಗದದ ತೊಂದರೆ ದಿನೇ ದಿನೇ ಹೆಚ್ಚುತ್ತಿದೆ. 1943 ರಲ್ಲಿ ಮೈಸೂರು ಸರಕಾರದಿಂದ ಬಂದ ಸುಮಾರು ಐದು ಟನ್ ಕಾಗದದ ವಿನಹ ಈವರೆಗೆ ಕಾಗದ ಬಂದಿಲ್ಲ. ಕಳೆದ ನಾಲ್ಕು ತಿಂಗಳುಗಳಿಂದ ಕಾಗದದ ಕೊರತೆಯ ತೀವ್ರತೆಯು ಬಹು ಹೆಚ್ಚಾಗಿದೆ. ಪೇಟೆಯಲ್ಲಿ ಎಷ್ಟು ಪ್ರಯತ್ನಿಸಿದರೂ ಒಂದು ಗಜ ಕಾಗದ ದೊರೆಯಲಾರದು. ಇತರ ಭಾಗಗಳ ಸ್ಥಿತಿಯನ್ನು ಪರಿಶೀಲಿಸಿದರೆ ಈಗಿಗ ಕಾಗದದ ತೊಂದರೆಯು ನಿವಾರಣೆಯಾಗುತ್ತಾ ಬರುತ್ತಿರುವದು ಕಂಡುಬರುವದು. ಆದರೆ ಕೊಡಗಿನ ಸ್ಥಿತಿಯು ದಿನೆ ಕಳೆದಂತೆ ದಾರುಣವಾಗತೊಡಗಿದೆ. ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ಮಾನ್ಯ ಚೀಫ್ ಕಮಿಷನರು ಕೊಡಗಿಗೆ 30 ಟನ್ ಕಾಗದವು ಇಂದಿಯೂ ಸರಕಾರದಿಂದ ದೊರೆಯುವದೆಂದು ತಿಳಿಸಿದರು. ಈಗ ಆಮ ಮೂನತ್ತು ಟನ್ ಅಲ್ಲ; ವರ್ಷಕ್ಕೆ 15 ಟನ್ ಎಂದೂಹಿಗಿ ವರ್ಷಾನುವಿದೆ. ಕೊಡಗಿಗೆ ವರ್ಷಕ್ಕೆ 15 ಟನ್ ಕಾಗದ ದೊರೆತೊತಕ್ಕಾಲ ಸಾಕಾಗಬಹುದು. ಆದರೆ ಚೀಫ್ ಕಮಿಷನರು ಕಾನ್ಸಿಲಿನಲ್ಲಿ ನುಡಿದ ಆರ್ಧವರ್ಷವಾಗುತ್ತಾ ಬಂದರೂ ಕಾಗದದ ಸುಳಿವೇ ಇಲ್ಲ. ಈ ನೆಡೆಲೊನ್ನೆ ಮೈಸೂರು ಸರಕಾರದಿಂದ ಕೊಡಗಿಗೆ 15 ಟನ್ ಕಾಗದ ಮಂಜೂರಾಗಿದ್ದರೂ ಸಕಾಲದಲ್ಲಿ ಅವನ್ನು ಪಡಕೊಳ್ಳದೆ ಅದು ಪೂರ್ತಿ ದೊರೆಯದಾಯಿತೆಂದು ತಿಳಿಸುಬರುತ್ತದೆ. ಅದೇ ರೀತಿ ಈ ವರ್ಷವೂ ನಮಗೆ ಮದ್ರಾಸ್ ಸರಕಾರದಿಂದ 15 ಟನ್ ಕಾಗದ ಮಂಜೂರಾಗಿದ್ದರೂ ಈ ವರೆಗೆ ಏನೂ ಬಂದಿರುವದಿಲ್ಲ. ಈ ವರ್ಷ ಅಂತ್ಯವಾಗಲಿಕ್ಕೆ ಒಂದು ತಿಂಗಳು ಮಾತ್ರವಿದೆ. ಅಷ್ಟರೊಳಗೆ ಈ ಕಾಗದವನ್ನು ತರಿಸಿಕೊಳ್ಳದಿದ್ದರೆ ಅದೂ ದೊರೆಯದಾಗಬಹುದು. ಕೊಡಗಿನಲ್ಲಿ ಇಂದು ಕಾಗದಕ್ಕಾಗಿ ಜನರು ಪಡುತ್ತಿರುವ ಕಷ್ಟವು ಅವರ್ಣನೀಯವಿದೆ. ಸರಕಾರವು ಎಚ್ಚೆತ್ತು ಆದಷ್ಟು ಬೇಗನೆ ಇವನ್ನು ತರಿಸುವ ವ್ಯವಸ್ಥೆ ಮಾಡಬೇಕು.

## ದಿವಂಗತ ಅಜ್ಜಾಮಾಡ ಮಾದಪ್ಪನವರು.

ಶ್ರೀ. ಅಜ್ಜಾಮಾಡ ಮಾದಪ್ಪನವರು ತಾ. 23 ರಲ್ಲಿ ತಮ್ಮ ಕಾರ್ಮಿ ಗ್ರಾಮದ ಮನೆಯಲ್ಲಿ ಸಿಡುಬು ಕಾಯಿಲೆಯಿಂದ ದಿವಂಗತರಾದರು. ಶ್ರೀಯುತರು ಸರಳ ಸ್ವಭಾವದ ಸಜ್ಜನರಾಗಿದ್ದರು. ಅಧ್ಯಾತ್ಮಿಕ ತಳಕು, ವೇಷ, ಮೊದಲಾದವು ಲವಲೇಶವೂ ಅವರಲ್ಲಿರಲಿಲ್ಲ. ಹೆಚ್ಚಿನ ವಿದ್ಯಾಭ್ಯಾಸವಿಲ್ಲದಿದ್ದರೂ ತಮ್ಮ ಶಕ್ತಿಗೆ ತಕ್ಕಂತೆ ನಾಡಿನ, ಜನತೆಯ ಸೇವೆಮಾಡುತ್ತಿದ್ದರು. ಶ್ರೀಮಂಗಲನಾಡಿನ ವತಿಯಿಂದ ಇವರು ಅನೇಕ ವರ್ಷಗಳ ವರೆಗೆ ಕೊಡಗು ನ್ಯಾಯವಿಧಾಯಕ ಸಭೆಯ ಮತ್ತು ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದರು. ಅಖಿಲ ಭಾರತ ರಾಷ್ಟ್ರೀಯ ಆಂದೋಲನದಲ್ಲಿ ತಮ್ಮ ಅಳಿಲು ಸೇವೆಯನ್ನು ಹೃತ್ಪೂರ್ವಕವಾಗಿ ಸಲ್ಲಿಸುತ್ತಿದ್ದರು. ದೇಶಕ್ಕಾಗಿ ಕಾರಾಗೃಹವಾಸವನ್ನೂ ಅನುಭವಿಸಿದರು. ಇವರ ನಿಧನದಿಂದ ನಿಸ್ಪೃಹ ದೇಶಭಕ್ತರೊಬ್ಬರ ಕಣ್ಮರೆಯೂವಂತಾಯಿತು. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬಕ್ಕೆ ದುಃಖಸಹನಾಶಕ್ತಿಯನ್ನೂ ದಯಪಾಲಿಸಲೆಂದು ಪ್ರಾರ್ಥಿಸುವೆನು.

## ಚೈನಾದಲ್ಲಿ ಅಂತಃಕಲಹ?

ಚೈನಾದಲ್ಲಿ ಎರಡು ಪಕ್ಷಗಳಿರುವದು ವಾಚಕರಿಗೆ ತಿಳಿದಿರಬಹುದು. ಒಂದು ಕಮ್ಯೂನಿಷ್ಟರ ಪಕ್ಷ; ಮತ್ತೊಂದು ಚಿಯಾಂಗ್ ಕೈಶೆಕರ ನೇತೃತ್ವದಲ್ಲಿರುವ ಕ್ಯುಮಿಂಟಾಂಗ್ ಪಕ್ಷ. ಈ ಪಕ್ಷಗಳಲ್ಲಿ ವೈಮನಸ್ಸು ಬಹು ಹಿಂದಿನಿಂದಲೇ ಇತ್ತು. ಆದರೆ ಜಪಾನರ ಒತ್ತಡ ಚೈನಾದಲ್ಲಿ ಜೋರಾದಾಗ ಸಮಗ್ರ ಚೀನಾದ ಹಿತದೃಷ್ಟಿಯಿಂದ ಈ ಎರಡು ಪಕ್ಷಗಳು ಒಂದಾಗಬೇಕೆಂದು ಬಗೆದು ಕಮ್ಯೂನಿಸ್ಟ್ ಪಕ್ಷದವರು ಕ್ಯುಮಿಂಟಾಂಗ್ ಪಕ್ಷಕ್ಕೆ ಸೂಚನೆಯಿತ್ತಿದ್ದರು. ಆದರೆ ಚಿಯಾಂಗ್ ಕೈಶೆಕರು ಈ ಸ್ನೇಹಹಸ್ತವನ್ನು ನಿರಾಕರಿಸಿ ಕಮ್ಯೂನಿಸ್ಟ್ ಪಕ್ಷನನ್ನು ಮುರಿಯುವ ಪ್ರಯತ್ನವನ್ನೇ ಮಾಡುತ್ತಿದ್ದರು. ಜಪಾನ್ ರೊಡನೆ ಯುದ್ಧ ನಡೆಲೆಂದು ಬರುವ ಮಿತ್ರಸೇನೆಗಳನ್ನು, ಕಮ್ಯೂನಿಸ್ಟರನ್ನು ಸಡಿಲಡೆಯಲು ಉಪಯೋಗಿಸುತ್ತಿದ್ದಲೆಂಬುವಾಚಕರಿಗೆ ತಿಳಿಯುತ್ತಲ್ಲ. ಕಮ್ಯೂನಿಸ್ಟರನ್ನು ಮುರಿಯಲು ಚಿಯಾಂಗರು ತಮ ಮೂರನೆವಳವನ್ನು ಕಳುಹಿಸಿದ್ದರು. ಕಮ್ಯೂನಿಸ್ಟರ ನಾಲ್ಕನೆ ದಳವು ಅನೇಕ ದಿನಗಳ ವರೆಗೆ ಯುದ್ಧ ನಾಡಿ ಚಿಯಾಂಗರು ಕಳುಹಿಸಿದ ಸೇನೆಯನ್ನು ಹಿಂಪಕ್ಕಟ್ಟಿರುವರು. ಚಿಯಾಂಗರ ದಳವು ಚೀನಾದಲ್ಲಿರುವ ಇತರ ಮಿತ್ರಸೇನೆಗಳೊಡನೆ ಆಲೋಚನೆಗೆ ತೊಡಗಿರುವಂತೆ ಚೀನಾದ ಬೆಳ್ಳಿಟ್ಟನ ಈ ಕಾಲದಲ್ಲಿ ಈ ರೀತಿಯ ಅಂತಃಕಲಹವು ವ್ಯಾರಂಭವಾದುದು ಶೋಚನೀಯವೇ ಸರಿ.

## ವರ್ತಮಾನ.

ಆಮ್ಮತ್ತಿ ಹೈಯರ್ ಎಲಿಮೆಂಟರಿಯ ವಾರ್ಷಿಕೋತ್ಸವವು ತಾ. 3-3-45 ನೇ ಶನಿವಾರ ರಾ. ಬ. ಕೆ ಟಿ. ಉತ್ತಪ್ಪ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ನಡೆಯುವದು.

ಸಂಪುಟ ೨೩ | ಫಾರೀಕು ೨೭—೪—೧೯೪೪ನೇ ಶುಕ್ರವಾರ. | ಸಂಚಿಕೆ ೪೬

## ಸ್ಯಾನ್‌ಫ್ರಾನ್ಸಿಸ್ಕೋ ಮತ್ತು ಗಾಂಧೀಜಿ.

'ಆಡಿಗ ಅಧವಾ ಬರೆದ ಶಬ್ದಗಳಿಗಿಂತಲೂ ಮೌನವು ಹಿತಕಂವಿರುವದೆಂಬುದು ನನಗೆ ಗೊತ್ತಿದ್ದರೂ ಈ ನಾಣ್ಯಾಡಿಯು ಅನ್ಯಯಕ್ಕೂ ಒಂದು ನಿರ್ದಿಷ್ಟವಾದ ಎಲ್ಲೆಯಿದೆ. ಸ್ಯಾನ್‌ಫ್ರಾನ್ಸಿಸ್ಕೋ ಪರಿಷತ್ತು ಶೀಘ್ರದಲ್ಲಿಯೇ ಸಭೆಗೂಡಲಿದೆಯೆಂದು ಪ್ರಕಟವಾಗಿದೆ. ಆ ಸಭೆಯಲ್ಲಿ ಬರಬಹುದಾದ ವಿಷಯಗಳು ನನಗೆ ಗೊತ್ತಿಲ್ಲ. ಬಹುತರ ಜನರಿಗೂ ಗೊತ್ತಿರಲಿಕ್ಕಿಲ್ಲ. ಆದೇನೇ ಇದ್ದರೂ ಈಗಿನ ಯುದ್ಧಾನಂತರದ ಪೂರ್ವಭಾಗದಲ್ಲೇ ಶಾಶ್ವತ ಜಗತ್ತಿನ ವಿಷಯವು ಅಲ್ಲಿ ಮಹತ್ವ ದ್ದಾಗುವದೆ. ಅಲ್ಲಿ ಚರ್ಚಿಸಲಾಗುವ ಆ ಜಾಗೃತಿಕ ಶಾಂತಿ ಸಂಘಟನೆಯು ಹಿನ್ನೆಲೆಯಲ್ಲಿ ಯುದ್ಧದ ಬೀಜಗಳಾದ ಜಿಘನಾಬಿಕೆ ಮತ್ತು ಭಯ ಇವು ಸಂಚಿದ ದುಷ್ಕೃತಿವೆ. ಆದರಿಂದ ಯುದ್ಧದ ವಿರುದ್ಧ ಶಾಶ್ವತಶಾಂತಿಯಲ್ಲಿ ಅಚಲ ಶ್ರದ್ಧೆಯುಳ್ಳ ನಾನು ಈ ವಿಷಯದಲ್ಲಿ ನನ್ನ ಮನೋಗತವನ್ನು ಹೇಳಬಯಸುತ್ತೇನೆ.

**ಸಾರ್ವತ್ರಿಕ ವರ್ಣಸಮಷ್ಟಿ.**

'ಯುದ್ಧ ಮತ್ತು ಅದರ ಬೀಜಗಳಾಗಿರುವ ಮೋಸ, ವಿಶ್ವಾಸ ದ್ರೋಹಗಳಲ್ಲಿಯ ಬಲದ ಮೇಲಿದ್ದ ತಮ್ಮ ಶ್ರದ್ಧೆಯನ್ನು ಕೆತ್ತೊಗೆಸಿ ಎಲ್ಲ ವರ್ಣಗಳ ಮತ್ತು ರಾಷ್ಟ್ರಗಳ ಸಮಾನತೆಯ ತತ್ವದ ಮೇಲೆ ನಿರ್ಮಿಸಲ್ಪಟ್ಟ ನಿಜವಾದ ಶಾಂತಿಯ ಸ್ಥಾಪನೆಗಾಗಿ ಹೆಣಗದ ಹೊರತು ಸಂಯುಕ್ತ ರಾಷ್ಟ್ರಗಳಿಗಾಗಲೀ ವಿಶ್ವಕ್ಕಾಗಲಿ ಶಾಂತಿ ಲಭಿಸಲಾರದೆಂಬ ನನ್ನ ದೃಢನಂಬಿಕೆಯನ್ನು ನಾನು ಮತ್ತೊಮ್ಮೆ ಸಾರಿ ಹೇಳುತ್ತೇನೆ. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರವನ್ನು ಸುಲಿಯಹತ್ತಿದ್ದರೆ ಅಥವಾ ಆಕ್ರಮಣ ತೀಲವಾಗಿದ್ದರೆ ಜಗತ್ತಿನಲ್ಲಿ ಯುದ್ಧಗಳೇ ಆಗಬಾರದೆಂದು ಯತ್ನಿಸಿದರೆ ಶಾಂತಿ ಲಭಿಸಲಾರದು. ಇಂಥ ಜಗತ್ತಿನಲ್ಲಿ ಮಾತ್ರ ಸೈನಿಕ ಬಲದ ದೃಷ್ಟಿಯಿಂದ ದುರ್ಬಲವಿದ್ದ ರಾಷ್ಟ್ರಗಳು ಸುಲಿಗೆ ಅಥವಾ ಧಾಳಿಗಳ ಭೀತಿಯಿಂದ ನುಕ್ತವಾಗಬಲ್ಲವು.

'(೧) ಶಾಂತಿಗಾಗಿ ಅತ್ಯಾವಶ್ಯಕ ಪೂರ್ವಾಪೇಕ್ಷೆಯೆಂದರೆ ಹಿಂದುಸ್ಥಾನದ ಸಂಪೂರ್ಣ ಸ್ವಾತಂತ್ರ್ಯ. ಹೀಗೆಂದರೆ ಭಾರತವು ಸಾಮ್ರಾಜ್ಯತತ್ಪೆಯ ಒಂದು ಪ್ರಮುಖ ಉದಾಹರಣೆಯಾಗಿರುವದಿಲ್ಲೇ ಅಲ್ಲದೆ ಅದು ಮಾನವಿಕತೆಗೆ ಅಂಟಿರುವ ಕೇವಲ ಸತ್ಯ ಸಂಸ್ಥ ಅಹಿಂಸೆಗಳ ಮೇಲೆ ಅಚಲ ಶ್ರದ್ಧೆಯಿಟ್ಟು ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ.

'ಹಿಂದುಸ್ಥಾನಕ್ಕೆ ಸ್ವಾತಂತ್ರ್ಯಕ್ಕಾಗಿ ಹೋರಾಡಿರದಿದ್ದರೂ ಜಿಂಜೀ ನೈನಿಕನು ಹಿಂದೆ ಎಂದೂ ತೋರಿಸದಿದ್ದ ಅತ್ಯುಚ್ಚ ತರಗತಿಯ ನೈಪಿಣ್ಯವನ್ನಿರುವ ಹೋರಾಟದ ಗುಣಗಳಿಗೆ ಸಮಾನವಲ್ಲ ಗುಣಗಳು ತನ್ನಲ್ಲಿದ್ದುದನ್ನು ಈಗಿನ ಯುದ್ಧದಲ್ಲಿ ತೋರಿಸಿದ್ದಾನೆ. ಹಿಂದೀ ಸೈನ್ಯದಲ್ಲಿ ಸೈನಿಕರ ಗುಣಗಳಲ್ಲದಿರುವದರಿಂದ ಅವರೂ ಶಾಂತಿ ಸಂಗ್ರಾಮದಲ್ಲಿ ಸಲಿಸಿರಬೇಕೆಂದು ಹೇಳುತ್ತಿರುವವರಿಗೆ ಉತ್ತರವೆಂದು ನಾನೂ ಈ ವಿಷಯವನ್ನು ಹೇಳುತ್ತಿದ್ದೇನೆ. ಇದರಿಂದ ಸಿದ್ಧವಾಗುವದೇನೆಂದರೆ ಶಕ್ತಿಯಂತರಲ್ಲಿಯ ಅಹಿಂಸೆಯು ಅವರಲ್ಲಿಯು ಹಿಂಸಾಶಕ್ತಿಗಿಂತಲೂ ಸೆಚ್ಚು ಸಾಮರ್ಥ್ಯವುಳ್ಳದ್ದಾಗಿದೆ. ಹಿಂದುಸ್ಥಾನಕ್ಕೆ ಆ ತರಹದ ಅಹಿಂಸಾಶಕ್ತಿಯು ಇನ್ನೂ ಪೂರ್ಣ ಬಂದಿಲ್ಲವೆಂಬ ಹೇತು ಬೇರೆ ಹೀಗಿದ್ದರೂ, ಸ್ವಾತಂತ್ರ್ಯಕ್ಕಾಗಿ ಅದು ಸಾಕಷ್ಟು ಯಶಸ್ವೀಕೃತಿಯಿಂದ ಅಂಹಿಸಾಮಯ ಹೋರಾಟ ನಡೆಸಿರುವದೆಂದು ಕೇಳಬಹುದು.

'(೨) ಹಿಂದುಸ್ಥಾನದ ಮುಕ್ತತೆಯು ಆಕ್ರಮಣಕ್ಕೊಳಗಾದ ಪ್ರದೇಶದ ಎಲ್ಲ ಜನಾಂಗಗಳಿಗೂ, ಅವುಗಳ ಸ್ವಾತಂತ್ರ್ಯವು ಕೂಡ ಕೀರ ಸಮಿಸಿಸಿದಯೆಂದೂ ಮತ್ತು ಯಾವ ಸಂದರ್ಭವಲ್ಲಿಯೂ ತನ್ನ ಮುಂದೆ ಅವುಗಳ ಜುಲಿಗೆಯಾಗಲಾರದೆಂದೂ ನಿಶ್ಚಯಮಾಡಿಕೊಡುತ್ತದೆ.

**ನ್ಯಾಯಸಮ್ಮತ ಶಾಂತಿಗಾಗಿ.**

'(೩) ಶಾಂತಿಯು ನ್ಯಾಯ ಸಮ್ಮತವಾಗಿರಬೇಕು. ಹಾಗಾಗಬೇಕಾದರೆ ತಿಳಿಯೆದಾಗಲಿ, ಸೇಡಿನ ಬುದ್ಧಿಯಿಂದಾಗಲಿ ಅದನ್ನು ಹೇರಬಾರದು. ಜರ್ಮನಿ ಮತ್ತು ಜಪಾನಗಳನ್ನು ಛಲಿಸಬಾರದು. ಬಲಾಢ್ಯನಲ್ಲಿ ಸೇಡಿನ ಹವ್ಯಾಸವಿತುವದಲ್ಲ ಅದುದರಿಂದ ಶಾಂತಿಯ ಫಲವು ಎಲ್ಲರಲ್ಲಿಯೂ ಹಂಚ್ಚಿಪಡಬೇಕು. ಅವರನ್ನು ಗೆಲೆತನದಲ್ಲಿಟ್ಟುಕೊಳ್ಳದೇ ಮುಂದಿನ ಪಯತ್ನವಾಗಬಾರದು. ನುತ್ತಾವೆ ವೀರಿಯಿಂದಲೂ ಸಂಯುಕ್ತರಾಷ್ಟ್ರಗಳು ಪ್ರಜಾಸತ್ತೆಯನ್ನು ತೋರ್ಪಡಿಸಲಾರವು.

'(೪) ಇದರಿಂದ ಒಡೆದುಕಾಣುವದೇನೆಂದರೆ ಒಕ್ಕಾಯ ಪೀಡ ನಿಶ್ಚಯಕ್ಕಾಗಿ ಮೂಡಲ್ಪಟ್ಟವರ ಮೇಲೆ ರಕ್ಷಸಸ್ಥದ್ಧ ಶಾಂತಿಯನ್ನು ಹೇರಲಿಕ್ಕಾಗುವದಿಲ್ಲ. ಶಾಂತಿಯು ಸುಲಭ ಕರಾರುಗಳನ್ನು ತಾರ್ಯ ರೂಪದಲ್ಲಿ ಕರಾರು ಅಂತರ್ರಾಷ್ಟ್ರೀಯ ಪೊಲೀಸಪಡೆಯು ಆಸ್ಥಿತ್ವದಲ್ಲಿ ಬರಬಹುದು. ಹೀಗೆ ಅಂತರ್ರಾಷ್ಟ್ರೀಯ ಪೊಲೀಸಪಡೆ ಇರುವದು ಸಹಿತ, ಶಾಂತಿಯ ದ್ರೋತಕವಾಗಿರದೆ ಮೊನಪ ಪೌರ್ವಾಲ್ಯಕ್ಕೊಂದು ಅವಕಾಶಕಲ್ಪಿಸಿಕೊಟ್ಟಂತಾಗುವದು.

'ಶಾಂತಿಯು ಈ ಮೂಲಭೂತ ತತ್ವಗಳು ಒಪ್ಪಿತವಾದರೆ ಹಿಂದುಸ್ಥಾನದ ವಿತಿನಿಧ್ಯನೆಂದು ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ನಿಯುಮಿಸಲ್ಪಟ್ಟ ಹಿಂದಿಯರನ್ನು ತಿರುಗಿ ಕರೆಸಿಕೊಳ್ಳಬೇಕು.

ಹಿಂದುಸ್ಥಾನದ ಪ್ರತಿನಿಧ್ಯವನ್ನಿಡಬೇಕಾಗಿದ್ದರೆ ಈ ಸ್ಯಾನ್ ಫ್ರಾನ್ಸಿಸ್ಕೋ ಪರಿಷತ್ತಿನಲ್ಲಿ ಜನತೆಯಿಂದ ಆಯಲ್ಪಟ್ಟ ಪ್ರತಿನಿಧಿ ಇದ್ದರೆ ಇರಬೇಕು. ಇಲ್ಲವಾದರೆ ಅಲ್ಲಿ ಸ್ವತಂತ್ರಿಧ್ಯವಿರುವದೇ ಬೇಡ.

**ಅಗಸ್ಟ್ ಗೊತ್ತುವಳಿ.**

'ತಾ. ೮ ಅಗಸ್ಟ್ ೧೯೪೨ನೇ ದಿನ ಅ. ಭಾ. ಕಾ. ಸಭೆಯಲ್ಲಾದ ಗೊತ್ತುವಳಿಯು ತಿಳಿಗಿನ ಆಂಶದಲ್ಲಾದ ಸ್ವತಂತ್ರ ಹಿಂದುಸ್ಥಾನದ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ:-

ಅಗಿನ ಗಡಿಬಿಡಿಯ ಪರಿಸ್ಥಿತಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಪ್ರಪಂಚಶಾಂತಿಗಾಗಿ ಹಿಂದುಸ್ಥಾನದ ಸ್ವಾತಂತ್ರ್ಯ ಪ್ರತಿಷ್ಠೆಯ ಸಂಗಸ್ಥಿತಿಗೆ ಅಷ್ಟೆಯಾಗಿ ಅಕ್ಕಿಯುಳ್ಳದಿದ್ದರೂ ಭವಿಷ್ಯತ್ಕಾಲದ ಶಾಂತಿ, ಸುರಕ್ಷಿತತೆ ಮತ್ತು ಪ್ರಪಂಚದ ನಿಯಮಬದ್ಧ ಉತ್ಕರ್ಷಕ್ಕಾಗಿ, ಬೇರಾವ ಹೋಜನೆಗಳಿಂದಲೂ ತಂದಿಡಿ ಜಾಗೃತಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲದಿರುವದರಿಂದ ಸ್ವತಂತ್ರರಾಷ್ಟ್ರಗಳ ಒಂದು ಜಾಗೃತಿಕ ಸಂಘವು ನಿರ್ಮಿಸಲ್ಪಡಬೇಕೆಂದೂ ಈ ಸಮಿತಿಯು ಅಭಿಪ್ರಾಯಪಡುತ್ತದೆ. ಈ ಸಂಘದ ಸದಸ್ಯರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆ; ಪರಚಕ್ರ ದಾಳಿ ಮತ್ತು ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರವು ಆಕ್ರಮಣ ಮಾಡುವುದಕ್ಕೆ ಪ್ರತಿಬಂಧ; ರಾಷ್ಟ್ರೀಯ ಅಲ್ಪಸಂಖ್ಯಾಕರ ಹಿತಸಂರಕ್ಷಣೆ; ಹಿಂದುಳಿದ ಎಲ್ಲ ಭಾಗಗಳ ಮತ್ತು ಜನರ ಸ್ವಗತಿಯೊಗವಂತೆ ನೋಡೋಣ, ಮತ್ತು ಎಲ್ಲರ ಹಿತಕ್ಕಾಗಿ ಜಾಗತಿಕ ಸಂಪತ್ತಿನ ಸಮೀಕರಣ; ಇವುಗಳನ್ನು ಈ ಜಾಗತಿಕ ಸಂಘವು ರಕ್ಷಿಸತಕ್ಕದ್ದಿ. ಈ ತೆರದ ಜಾಗತಿಕ ಸಂಘದ ನಿರ್ಮಾಣವಾದರೆ ಮುಂದೆ ಎಲ್ಲ ದೇಶಗಳಲ್ಲಿಯೂ ನಿಶ್ಶಸ್ತ್ರೀಕರಣವು ಯಶಸ್ವಿಯಾಗುವದಲ್ಲದೆ, ರಾಷ್ಟ್ರೀಯ ಸೈನಿಕ, ನಾವಿಕ ಮತ್ತು ವೈಮಾನಿಕ ಬಲಗಳ ಆವಶ್ಯಕತೆ ಉಳಿಯಲಾರದು. ಮತ್ತು ಜಾಗತಿಕ ಸಂಘದ ಸಂರಕ್ಷಣಾ ಸೈನ್ಯವೆ ಜಾಗತಿಕ ಶಾಂತಿ ರಕ್ಷಣೆಯಾಗಬಲ್ಲದಲ್ಲದೆ ವಿರೂಪಿತಿಯನ್ನೂ ತಡೆಯುವುದು. ಇಂಥಾ ಜಾಗತಿಕ ಸಂಘದಲ್ಲಿ ಸ್ವತಂತ್ರ ಹಿಂದುಸ್ಥಾನವೆ ಅನಂದಗಿಂ ಶೀಘ್ರವಾದಲ್ಲವೆ ಸರಿಸಮಾನಸ್ಥಂದೆಯಿಂಗ ಅಂತರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತಮ್ಮ ದೇಶಕೊಡನೆ ಸಹಕರಿಸುವದು.'

ಅಮೆರಿಕಾದಲ್ಲೇ ಹಿಂದುಸ್ಥಾನದ ಸ್ವಾತಂತ್ರ್ಯದ ಬೆಂಬಿಕೆಯು ಸ್ವಾರ್ಥದ್ದಾಗಿಲ್ಲ. ಹಿಂದುಸ್ಥಾನದ ರಾಷ್ಟ್ರೀಯತ್ವವೇ ಅಂತರ್ರಾಷ್ಟ್ರೀಯತ್ವವಾಗಿದೆ.'

'ಹ. ಗ.'

ನಂಬಿಕೆಗರ್ಹವಾದ ಸಂಖ್ಯೆಗಳು.

23ನೇ ತ್ರೈವಾರ್ಷಿಕ ಮೌಲ್ಯಗಣನೆ.

ಮೂರು ವರ್ಷಗಳ ಜಿನ್ ಲಾಭ 1,50,88,092.

ವಿಮಾದಾರರ ಕ್ಷೇಮನಿಧಿ ೫೪ ಲಕ್ಷ ದಾಟಿದೆ.

ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%

ಎಂಡೋಮೆಂಟ್ .... .... 1000ಕ್ಕೆ ವರ್ಷಕ್ಕೆ 10½%

'ಓರಿಯಂಟಲ್'

ಗವರ್ನಮೆಂಟ್ ಸೆಕ್ಯುರಿಟಿ ಲೈಫ್ ಅಸ್ಯೂರೆನ್ಸ್ ಕಂಪನಿ ಲಿಮಿಟೆಡ್

ಸ್ಥಾಪನೆ ಭಾರತದಲ್ಲಿ 1874] [ಮುಖ್ಯ ಖಜೇರಿ-ಬೊಂಬಾಯಿ.

ಶಾಖೆ-ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ವೇರೇಡಾ, ಬೆಂಗಳೂರು.

ಇನ್ಸ್‌ಪೆಕ್ಟರ ಆಫೀಸು—ಕೆ. ಸದಾಶಿವರೋಡು, ಮಂಗಳೂರು.

# ಕೊ ಡ ಗು

ತಾ. ೨೭-೪-೧೯೪೫ನೇ ಶುಕ್ರವಾರ


## ಬರ್ಲಿನ್ ಕದನ.

ಜರ್ಮನಿಯ ಯುದ್ಧವು ಭೀಕರ ಮಟ್ಟಕ್ಕೆ ಬಂದು ತಲಪಿದೆ. ಪೂರ್ವಭಾಗ ದಿಂದ ಮುಂದರಿಯುತ್ತಿದ್ದ ರಷ್ಯಾ ಸೇನೆಗಳು ಬರ್ಲಿನ್ ಗಡಿಯನ್ನು ಭೇದಿಸಿ ಒಳ ನುಗ್ಗಿವೆ. ಆಜೇಯವೆಂದು ಬಂದುಬಾಲಕ್ಕೆ ಪರಿಗಣಿಸಲ್ಪಟ್ಟಿದ ಜರ್ಮನಿಯೊಳಗೆ ಇಂದು ಶತ್ರುಗಳು ನುಗ್ಗಿದ್ದಾರೆ. ಜರ್ಮನರು ನಗರವನ್ನು ತೃಜಿಸಿದೆ ತಮ್ಮ ಸರ್ವಶಕ್ತಿಯಿಂದ ಅದನ್ನು ರಕ್ಷಿಸುವ ಪ್ರಯತ್ನ ಮಾಡುತ್ತಿದ್ದಾರೆ. ಹಿಟ್ಲರನೇ ಸ್ವತಃ ಸೈನ್ಯಾಧಿಕಾರವನ್ನು ಕೈಯಲ್ಲಿ ತೆಗೆದು ಕೊಂಡು ಹೋರಾಡುತ್ತಿದ್ದಾನೆ. ಬಹು ಕರ್ಕಶವೀತಿಯ ಕದನವು ಇಲ್ಲಿ ನಡೆಯುತಿದೆ. ಬ್ರಿಟಿಷ್ ಮತ್ತು ಅಮೇರಿಕನ್ ದಂಡುಗಳು ಪಶ್ಚಿಮದಿಂದ ಒತ್ತರಿಸುತ್ತಿವೆ. ಬರ್ಲಿನ್ ನಗರದ ಮೇಲೆ ಧಾಳಿ ಮಾಡಿ ದಾಕ್ಷಣ ಜರ್ಮನ್ ಯುದ್ಧ ಮುಗಿದಂತಾಗಲಿಲ್ಲ. ಜರ್ಮನರು ಆಸ್ಟ್ರೀಯಾ ಮತ್ತಿತರ ಸುತ್ತಲಿನ ಕೆಲವು ಪ್ರದೇಶಗಳನ್ನು ಸೇರಿಸಿ ಹತ್ತು ಚದರ ಮೈಲು ವಿಸ್ತೀರ್ಣ ವಿರುವ ಕೋಟೆಯೊಂದನ್ನು ರಚಿಸಿದ್ದಾರಂತೆ. ಇದು ಬಹುಸೊಂಪಾರಣ್ಯದಿಂದ ಕೂಡಿದ್ದು ಸಂರಕ್ಷಕ ಯುದ್ಧ ಮಾಡಲು ಅನುಕೂಲವಾಗಿರುವದಂತೆ. ಆದ್ದರಿಂದ ಬರ್ಲಿನ್ ನಿಃಶಕ್ತವಾದರೂ ಈ ಕೋಟೆಯೊಳಗೆ ನಿಂತು ಜರ್ಮನರು ಹೋರಾಡಬಹುದು.

ಮಿತ್ರಸೇನೆಗಳ ವಶವಾದ ಒಟ್ಟ ಜರ್ಮನ್ ಸೈನ್ಯಾಧಿಕಾರಿಯು ಜರ್ಮನರ ಮತ್ತೊಂದು ಗುಪ್ತಾಸ್ತ್ರದ ವಿಚಾರವನ್ನು ಹೊರಗೆ ತಂದಿದ್ದಾರೆ. ಇದನ್ನು ವಿ-4 ಎಂದು ಕರೆಯಲಾಗಿದೆ. ಇದು ವಿ-2 ಗಿಂಧಾ ವೇಗವಾಗಿ ಹೋಗುವದಲ್ಲದೆ ಪರಿ ಣಾಮಕಾರಿಯೂ ಹಾಪಂತೆ ಭೂವ ದೇ ಕ್ಷಳಿಂದ ಇದನ್ನು ಪ್ರಯೋಗಿಸಿದ ರೂ ಇದರ ಚಲನವನ್ನು ಟೆಲಿವಿಜನ್ ಮೂಲಕ ನಿಯಂತ್ರಿಸಿರುವದರಿಂದ ಬೇಕಾ ದಲ್ಲಿ ಬೀಳುವಂತೆ ಮಾಡುವದು ಸಾಧ್ಯವಿ ದೆಯಂತೆ. ಜರ್ಮನರು ಇದನ್ನು ಹೆಚ್ಚು ಸಂಖ್ಯೆಯಿಂದ ತಯಾರಿಸುವ ಯೋಜನೆ ಯನ್ನು ಕೈಕೊಂಡಿರುವರೆಂದೂ, ಇವುಗಳ ತಯಾರಿಕೆಯು ಭೂಗರ್ಭದಲ್ಲಿ ಅಳವಡಿಸಿ ಟ್ಟಿರುವ ಕಾರ್ಖಾನೆಗಳಲ್ಲಿ ನಡೆಯುವ ದೆಂದೂ ಅತನು ಹೇಳಿರುವನು. ಜರ್ಮ ನರ ಗುಪ್ತಾಸ್ತ್ರಗಳ ವರ್ತಮಾನಗಳು ಆ ಆಗಾಗ್ಗೆ ಬರುತ್ತಿವೆ. ಇತ್ತೀಚೆಗೆ ವಾ ತಕರಿಗೆ ಇವುಗಳ ವಿಚಾರ ಕೇಳಿ ಕೇಳಿ ಸೀಸತ್ತಿರಬಹುದು. ಆದರೂ ಕಡೆಯ ವರೆಗೆ ಜರ್ಮನರು ತಮ್ಮ ಗುಪ್ತಾಸ್ತ್ರದ ಚಾದು ವಿದ್ಯೆಯಿಂದ ಸಾರಿ ಜಗತ್ತನ್ನು ಮುಗ್ಧಗೊಳಿಸುತ್ತಿದ್ದಾರೆ.

ಇತ್ತಲಾಗಿ ಬಂದ ವಾರ್ತೆಯಂತೆ ಜರ್ಮನಿಯಲ್ಲಿ ಇನ್ನೂ ನೂರು ವಿಭಿನ್ನಗಳಷ್ಟು ಸೇನೆಗಳು ಇರಬಹುದೆಂದು ಅಂಜಾಜಾಗಿದೆ ಆದರೆ ಬರ್ಲಿನ್ ಕದನ ಕ್ಷೇತ್ರದಲ್ಲಿ ಊಹಿಸಿದಷ್ಟು ವಿಶಾಲವಾದ ಸೇನೆಯಿಲ್ಲವೆಂದು ತಿಳಿಬಂದಿದೆ. ಕಾರಣ ಪರಿಶೀಲಿಸಿದವರು ಹೀಗೆ ಹೇಳಿದ್ದಾರೆ. ಜರ್ಮನರ ಮಹಾಸೇನೆಗಳಲ್ಲಿ ಕೆಲವು ನಾರ್ವೆ, ಸ್ವೀಡನ್‌ಗಳಲ್ಲಿ ಕೇಂದ್ರೀಕೃತವಾಗಿವೆಯಂತೆ. ಜರ್ಮನಿಯ ಅತ್ಯಂತ ಪ್ರಬಲಶತ್ರ ಸೇನೆಗಳು ಇಲ್ಲಿವೆಯಂತೆ. ಬರ್ಲಿನು ಏತ್ರರ ವಶವಾದರೂ ಇಲ್ಲಿ ನಿಂತು ಮಿತ್ರರನ್ನು ಎದುರಿಸುವ ಅಭಿಪ್ರಾಯವೂ ಜರ್ಮನರಲ್ಲಿದೆಯೆನ್ನಬಹುದು.

ಜರ್ಮನಿಯು ಮೂದಂಯನ್ನು ಸುಸರಿಸಿ ಯೇ ಜಪಾನರೂ ಕೂಡ ಗುಪ್ತಾಸ್ತ್ರಗಳ ಹೆಗ್ಗಳಿಕೆಯನ್ನು ಹೇಳುತ್ತಿದ್ದಾರೆ. ಅವರು ಒಂದು ರೀತಿಯ ವಿಮಾನವನ್ನು ತಯಾರಿಸಿ ಅದರಲ್ಲಿ ಬಾಂಬುಗಳನ್ನು ಹೇರಿಕೊಂಡು ಆಕಾಶದಿಂದ ಶತ್ರು ಹಡಗಗಳ ಮೇಲೆ ವಿನೂತನಸಮೇತ ಗುರಿತಪ್ಪದೆ ಬೀಳುವ ವಿರ್ವಾದು ನೂಡಿರುವರಂತೆ ಇದರಿಂದ ಒಬ್ಬ ವ್ಯಕ್ತಿಯು ನಾಶನಾಗುವ ದೇನೋ ಸಹಜ. ಆದರೆ ಇದು ಗುರಿತಪ್ಪದೆ ಬೀಳುವದರಿಂದ ಶತ್ರುಗಳಿಗೆ ವಿಪರೀತ ಹಾನಿಕಾರಕವಾಗಿದೆಯಂತೆ. ಜಪಾನರ ಈ ಉನ್ಮತ್ತದಲ್ಲಿ ಕಾರ್ಯದಕ್ಷತೆಯೊಂದಿಗೆ ಅವರ ಉಜ್ವಲ ರಾಷ್ಟ್ರಪ್ರೇಮದ ಉದಾಹರಣೆಯನ್ನು ನೋಡಬಹುದು. ಬೇಕೆಂತಲೇ, ತಿಳಿದು ಬಾಂಬುಗ ಳೊಡನೆ ಕೆಳಗೆ ಬಿದ್ದು ಪ್ರಾಣಬಿಡುವದು ಸಾಮಾನ್ಯ ಕೆಲಸವಲ್ಲ. ಇಂಥ ಈ ಸಾಹಸವು ಮಿತ್ರರ ಭಾಳಿಯ ನುಂದೆ ಎನ್ನುವ ದಿನ ತಡೆಯುವಷ್ಟೊ ಗೊತ್ತಾಗದು.

ಜರ್ಮನಿಯು ಪತನವಾದ ನಂತರ ರಷ್ಯಾವು ಕೈಕೊಳ್ಳುವ ನೀತಿಯ ಮೇಲೆ ಯುದ್ಧದ ಭವಿಷ್ಯ ನಿರ್ಣಾಯವು ಬೇಗ ಆಗುವದು. ಜರ್ಮನಿಯು ಭೂರಾಹುಯಾದ ನಂತರ ರಷ್ಯನರು ಮಿತ್ರರೊಡಗೂಡಿ ಜಪಾನಿನ ಮೇಲೆ ಯುದ್ಧ ಹೂಡಿದ್ದರೆ ಯುದ್ಧವು ಹೆಚ್ಚು ಕಾಲ ನಡೆಯಲಿಕ್ಕಿಲ್ಲ. ಆದರೆ ಜಪಾನರ ನೋಲೆ ಬೀಳುವ ತೀರ್ಮಾನವನ್ನು ರಷ್ಯನರು ಮಾಡುವರೋ ಇಲ್ಲವೋ ಎಂಬುದನ್ನು ಮುಂದೆ ನೋಡಬೇಕು.

ಈ ಮಧ್ಯೆ ಸ್ಯಾನ್‌ಫ್ರಾನ್ಸಿಸ್ಕೋ ಪರಿಷತ್ತು ಕೂಡಿದೆ. ಜಗತ್ತಿನ ವಿವಿಧಭಾಗದಿಂದ ಸಾವಿರಕ್ಕೂ ಮಿಕ್ಕಿ ಪ್ರತಿನಿಧಿಗಳು ಸೇರಿದ್ದಾರೆ. ಇವರಲ್ಲಿ ಹಿಂದೂದೇಶದ ಪರ ಬ್ರಿಟಿಷ್ ಸರಕಾರದಿಂದ ನೇಮಿಸಲ್ಪಟ್ಟ ಮೂರು ಜನರೂ ಇದ್ದಾರೆ. ಈ ಮಹಾಸಭೆಯಲ್ಲಿ ಜಗತ್ತಿನ ಭವಿಷ್ಯದ ಮಾತು ನಡೆಯಲಿದೆ ಪರಾಜಯ ಹೊಂದಿದ ಜರ್ಮನಿಗೆ ಯಾವ ಉಪಚಾರಕೊಡಬೇಕು; ಜಪಾನಿನ ಬಗ್ಗೆ ಧೋರಣೆ ಹೇಗಿರಬೇಕು; ಜರ್ಮನಿಯು ಹಿಡಿತದಿಂದ ಬಿಡಲ್ಪಟ್ಟ ರಾಷ್ಟ್ರಗಳ ಭವಿಷ್ಯ ಇವೆಲ್ಲವುಗಳ ಚರ್ಚೆ ಇಲ್ಲಿ ನಡೆಯುವದು. ಯುದ್ಧದ ಳಿಕೆಯ ಶೃದ್ಧೆವಹಿಸಿ ಹೋರಾಡಿದ ರಷ್ಯಾ, ಬ್ರಿಟನ್, ಅಮೇರಿಕಗಳಿಗೆ ಸಂಧಾನವನ್ನೆಯೇನು ಎಂಬುದೂ ಇಲ್ಲಿ ಚರ್ಚೆಯಾಗಬಹುದು. ಈ ಚರ್ಚೆಯಲ್ಲಿ ಮಿತ್ರರಾಷ್ಟ್ರಗಳು ಒಮ್ಮತದ ತೀರ್ಮಾನಕ್ಕೆ ಬರುವರೇ ನೋಡಬೇಕು.

## ವರ್ತಮಾನ.

ಕೊಡಗು ನ್ಯಾಯವಿಧಾಯಕ ಸಭೆಗೆ ಯೂರೋಪಿಯನ್ ವರ್ತಕಾರರ ಕ್ಷೇತ್ರದಿಂದ ಮಿ. ಏವರ್ ಬುಲ್ ಮತ್ತು ಡಬ್ಲ್ಯೂ ಜಿ. ಪಾರ್ಸನ್‌ರವರು ಸದಸ್ಯರಾಗಿ ಆರಿಸಿ ಬಂದಿದ್ದಾರೆ.

ಕೊಡಗು ಜಿಲ್ಲಾ ಬೋರ್ಡಿಗೆ ಯೂರೋಪಿಯನ್ ವರ್ತಕಾರ ಕ್ಷೇತ್ರದಿಂದ ಮಿಸೆಸ್ ಹೊಫ್ಲೀಸ್ ಮತ್ತು ಡಬ್ಲ್ಯೂ. ಜಿ. ಪಾರ್ಸನ್‌ರವರು ಸದಸ್ಯರಾಗಿ ಆರಿಸಿ ಬಂದಿದ್ದಾರೆ.

ವಾರ್ಷಿಕ ಪದ್ಧತಿಯಂತೆ ವೀರಾಜಪೇಟೆ ಗುರುಸ್ವಾಮಿ ಆಶ್ರಮದಲ್ಲಿ ಮೇ ತಾ. 7 ನೇ ಸೋಮವಾರ ಉತ್ಸವವು ನಡೆಯುವದು. ಈ ಸಂದರ್ಭದಲ್ಲಿ ಭಜನೆ, ಹರಿಕಥೆ, ಸಂಗೀತ ಮೊದಲಾದುವುಗಳು ಏರ್ಪಾಡಿದೆ.

ಹೊಸದಾಗಿ ಏರ್ಪಡಿಸಿದ ಎರಡು ಸಹಕಾರ ಸಂಘಗಳ ಇನ್ಸ್‌ಪೆಕ್ಟರರ ಹುದ್ದೆಗೆ ಶ್ರೀ. ಮೂವೆಕ ಚಿಣ್ಣಪ್ಪನವರನ್ನೂ ಶ್ರೀ. ಜೋಡುಮಾಡ ಪೊನ್ನಪ್ಪನವರನ್ನೂ ನೇವಿಸಿದ್ದು ಪೊನ್ನಪ್ಪನವರು ಹುದ್ದೆರಿಯಲ್ಲೂ ಚಿಣ್ಣಪ್ಪನವರು ಫ್ರೇಜರ್‌ಪೇಟೆಯಲ್ಲೂ ಮೇಲ್ಕಂಡ ಹುದ್ದೆಯ ಚಾರ್ಜುವಹಿಸಿಕೊಳ್ಳಲಿದ್ದಾರೆ.

ತಾ. 14-5-45 ರಲ್ಲಿ ಕೌನ್ಸಿಲು ಚುನಾವಣೆ ನಡೆಯುವದರಿಂದ ಆ ದಿನವನ್ನು ಸಾರ್ವಜನಿಕ ಕಜಾ ದಿನವೆಂದು ಸಾರಲಾಗಿದೆ.

ನಾಪೋಕ್ಲು ಬೆಂಚುಕೋರ್ಟಿನ ಸದಸ್ಯರಾಗಿ ಶ್ರೀಗಳಾದ ಕೋಟೆರ ಐಯ್ಯಪ್ಪ (ಅಧ್ಯಕ್ಷ) ಕುಲ್ಲೆಟಿರ ಅಚ್ಚಪ್ಪ, ಗುತ್ತಿರ ಗಣಪತಿ ಮತ್ತು ತೋಡಿಮಣಿಯಂಡ ಮುತ್ತಪ್ಪ ಇವರನ್ನು ನೇಮಿಸಲಾಗಿದೆ.

ಪೊನ್ನಂಪೇಟೆ ಬೆಂಚುಕೋರ್ಟಿನ ಸದಸ್ಯರಾಗಿ ಶ್ರೀಗಳಾದ ಕಿರಿಯಬಡ ನಂಜಪ್ಪ (ಅಧ್ಯಕ್ಷ) ಪುಚ್ಚಿಮಾಡ ಮಾದಯ್ಯ, ಪಾರ್ವಂಗಡ ನಂಜಪ್ಪ, ಚಂಗಪ್ಪರ ಸೋಮಯ್ಯ ಮತ್ತು ಮನೆಯಪಂಡ ಬೆಳ್ಯಪ್ಪ ಇವರನ್ನು ಸದಸ್ಯರನ್ನಾಗಿ ಆರಿಸಲಾಗಿದೆ.


## ವಿಜ್ಞಾಪನೆ.

**ಕೊಡಗು ಕನಿವಾರಸಂತೆ ಹೋಬಳಿ ಓಟರುಗಳಲ್ಲಿ ವಿನಂತಿ.**

ಮಹಾಶಯರೇ,

ಇದೇ ಮೇ ತಿಂಗಳು 21 ರಲ್ಲಿ ನಡೆಯುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಈ ಹೋಬಳಿ ಪರವಾಗಿ ಎಸ್. ಎಂ. ಚನ್ನಬಸಪ್ಪನಾದ ನಾನು ನಿಂತಿರುವುದರಿಂದ ತಾವುಗಳು ತಮ್ಮ ಭವನವಾದ ಒಂದು ಓಟನ್ನು ತನ್ನ ಪರವಾಗಿ ಕೊಟ್ಟು ತಮಗಳ ಸೇವೆಯನ್ನು ಮಾಡಲಿಕ್ಕೆ ಅವಕಾಶವನ್ನು ವದಗಿಸಿಕೊಡಬೇಕಾಗಿ ಬೇಡುವ.

ಕನಿವಾರಸಂತೆ, ತಮಗಳ ಸೇವಕ.
ಎಸ್. ಎಂ. ಚನ್ನಬಸಪ್ಪ.
23-4-45. 4-1



## ಪೊನ್ನಂಪೇಟೆ ತ್ರೀಮಂಗಲ ನಾಡು ಜನ್ಮ ಓಟರುಗಳಲ್ಲಿ ವಿನಂತಿ.

ನಾನು ನನ್ನ ಪೊನ್ನಂಪೇಟೆ ತ್ರೀಮಂಗಲ ನಾಡಿಗೆ ಜನ್ಮ ಓಟರುಗಳ ಪ್ರತಿನಿಧಿಯಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿಗೆ ಒಬ್ಬ ಉಮೇದಾರನಾಗಿ ನಿಂತಿರುತ್ತೇನೆ. ತಮ್ಮೆಲ್ಲರ ಅಮೂಲ್ಯವಾದ ಓಟನ್ನು ನನಗೆ ತಾ. 14-5-1945 ರಲ್ಲಿ ಕೊಟ್ಟು ತಮ್ಮ ಸೇವೆಯನ್ನು ಕೌನ್ಸಿಲ್ ಮುಖಾಂತರ ಮಾಡುವುದಕ್ಕೆ ನನಗೆ ಅವಕಾಶ ಕೊಡಬೇಕಾಗಿ ಅತಿವಿನಯದಿಂದ ಪ್ರಾರ್ಥಿಸುತ್ತೇನೆ.

3-2 ಕೋಳೆರ ಕರುಂಬಯ್ಯ.

## ವಿಜ್ಞಾಪನೆ.

**ನಾಪೋಕ್ಲುನಾಡು ಓಟರುಗಳಲ್ಲಿ ಬೆಟ್ಟೋಳಂಡ ಮಾಚಯ್ಯನ ವಿನಂತಿ.**

ನಾಪೋಕ್ಲು ನಾಡಿನ ಪರ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಶ್ರೀ ನಡಿಕೇರಿಯಂಡ ಕೆ. ದೇವಯ್ಯನವರನ್ನು ಕಾಂಗ್ರೆಸು ಉಮೇದುವಾರನಾಗಿ ನಿಲ್ಲಿಸಿರುವುದರಿಂದ ಅವರಿಗೆ ವಿರೋಧ ಮಾಡುವ ಕಾಂಗ್ರೆಸ್ ಕೆಲಸಗಾರರಲ್ಲಿ ಒಬ್ಬನಾದ ನಾನು ಇಚ್ಚಿಸುವುದಿಲ್ಲವಾದ ಕಾರಣ ನಾನು ನನ್ನ ನೇ ಮಕವನ್ನು ವಾಪಾಸು ಪೆಗೆದುಕೊಂಡಿರುತ್ತೇನೆ. ಆಯವಿಟ್ಟು ಓಟರುಗಳು ನನಗೆ ಓಟು ಕೊಡುವದು ಬೇಡವೆಂದು ನನ್ನ ವಿನಂತಿ.

ಬಲ್ಲನೂವಟ ಬಿ ಪಿ ಮಾಚಯ್ಯ.
24-4-45.



## ಮಹಾಜನರಲ್ಲಿ ವಿನಂತಿ.

ಪೊನ್ನಂಪೇಟೆನಾಡು ಹೆಬ್ಬಾಲೆಗ್ರಾಮದಲ್ಲು ನನಗೆ ಭೂಮಿ ಇದೆ. ನನ್ನ ಭೂಮಿಯ ಮತ್ತು ತೋಡಿನ ಮಧ್ಯದಲ್ಲಿ ಮೂಯಮುಡಿಗೆ ಸೇರಿದ ಭೂಮಿ ಇದೆಯೆಂದು ಪೊಕ್ಕಳಿಗರ ಕಾಳಯ್ಯ ಗೌಡರೆಂಬುವವರು ವಿಕ್ರಯಿಸಲು ಪ್ರಯತ್ನಿಸುತ್ತಿರುತ್ತಾರೆ. ಈ ಭೂಮಿಯನ್ನು ನಾನು ಪಡಕೊಂಡು ಸಾಧಾರಣ 12 ವರ್ಷ ಲಾಗಾಯತು ಅನುಭವದಲ್ಲಿರುತ್ತೇನೆ. ಮತ್ತು ರೂಪಿಸಿರುತ್ತೇನೆ.

ಇದನ್ನು ಯಾರಾದರೂ ಕ್ರಯಕ್ಕೆ ಪಡಕೊಂಡಲ್ಲಾ ಮುಂದಕ್ಕೆ ತೊಂದರೆಗೆ ಕಾರಣವಾಗುತ್ತೆಂದು ಈ ಮೂಲಕ ತಿಳಿಸಿರುತ್ತೇನೆ.

ಚಿ. ಎ. ಸುಬ್ಬಯ್ಯ,
ಹೆಬ್ಬಾಲೆ ಗ್ರಾಮ,
ಗೋಣಿಕೊಪ್ಪ.



**ಸುಶಿಕ್ಷಿತರೇ,**

**ದಯವಿಟ್ಟು ನಿಮ್ಮ ಓಟನ್ನು ನಿಮ್ಮದೇ ಸಂಸ್ಥೆಯೂ ಆದ ಕಾಂಗ್ರೆಸಿಗೆ ಕೊಡಲು ಪ್ರಾರ್ಥಿಸುತ್ತೇವೆ.**

## The Canara Banking Corporation Ltd.
## ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್.

### ನೋಟೀಸು.

ಈ ಕೆಳಗೆ ಹೆಸರು ಬರೆಸಿರುವವರು ಈ ಬ್ಯಾಂಕಿನಿಂದ ಷೇರ್ಮುಖಗಳ ತುಂಡಿನ ಮೇಲೆ ಪಡೆಕೊಂಡ ಸಾಲದ ಮೊಬಲಗನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ ಈ ತನಕ ಕೊಡದೆ ಇರುವುದರಿಂದ ಇವರಿಬ್ಬರಿಗೆ ರಿಜಿಸ್ಟ್ರ್ಡ್ ನೋಟೀಸು ಕೊಟ್ಟಲ್ಲಿ ಕೆಲವು ನಿವಾಸಮಾರು ಸಿಕ್ಕಿ ಇಲ್ಲದೆಯೂ, ಕೆಲವು ವಿಳಾಸಮಾರು ಮೃತಪಟ್ಟರುವುದಾಗಿಯೂ ತಾವಾರು ಬಂದಿರ ವುದರಿಂದ ಸದರಿ ಸಾಲಗಳಲ್ಲಿ ಜಾಮೀನ್ದಾರರಾಗಿರುವ ನಿಮಗೆಲ್ಲ ಇದೇ ಮೇ ತಾರೀಖು 26ನೇ ತಿವಾನ ಮುಖ್ಯಸ್ಥ 1 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬರಬೇಕಾಗಿ ತಿಳಿಸಲು ಮಾಡಲಾಗಿದೆ.

| ಸಾಲದ ನಂ | ಸಾಲಗಾರರ ಹೆಸರು ಮತ್ತು ನಿವಾಸ | ಸಾಲದ ಮೊಬಲಗು |
|---|---|---|
| 899/41 | ಕಡೇಮನೆ ಪೂವಯ್ಯ, ಬೆಳ್ಳಿಪ್ಪನವರ ಮಗ, ಕುಪಟಗ್ರಾಮ ಗೋಣಿಕೊಪ್ಪ, | ರೂ 80—0—0 |
| 1/42 | ಕಾಳಿಮಾಡ ಸೋಮಯ್ಯ, ಪೂಣಚ್ಚನವರ ಮಗ ಬೆಟ್ಟಗೇರಿ, ಶ್ರೀಮಂಗಲ, | ರೂ 30—0—0 |
| 266/43 | ಕಡೇಮಾಡ ಪೂವಯ್ಯ, ಬೆಳ್ಳಿಪ್ಪನವರ ಮಗ, ಕುಂದ ಗ್ರಾಮ, ಗೋಣಿಕೊಪ್ಪ, | ರೂ 37—0—0 |
| 412/44 | ಎ ಕೆ ಗೋಪಾಲಕೃಷ್ಣನ್, ರಾಮನ್‌ನಾಯರ ಮಗ ತಾವುತ್ತಾಕಾಲಿ, ಅಮ್ಮತ್ತಿ | 15—0—0 |

ಆಫೀಸು, ವೀರಾಜಪೇಟೆ
ತಾ 24—4—45

ಕ ವಂಧವಪ್ಪ,
ಮೆನೆಜರ್




ಕಾಫಿ ಬೇಳೆಯನ್ನು ಕೊಂಡುಕೊಳ್ಳುವುದಕ್ಕಿಂಥಾ
ಹುಡಿಯನ್ನು ಪಡೆದುಕೊಂಡರೆ ಪೌಂಡಿಗೆ
ಒಂದಾಣೆ ಲಾಭ ದೊರೆಯುವುದು.

15) ಕಾಫಿ ಹುಡಿ ರಾತಲು 1ಕ್ಕೆ ರೂ 1—7—0



## ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.

### ಇವರ ಸಿದ್ಧೌಷಧಗಳು.

1 **ನಿಕಾಫ್ ಟೂತ್ ಪೌಡರ್.** ಬೆಲೆ ಪೌಂಡ್ ಒಂದಕ್ಕೆ 0-1-0
(ಹಲ್ಲುಕೀವು ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)

2. **ನಾಮರಿ ಜೊರ್ಣ** ... ಬೆಲೆ ಪೌಂಡ್ ಒಂದಕ್ಕೆ 0-6-0
(ಕಜ್ಜಿ, ತುರಿ, ವಿಷ, ಇತ್ಯಾದಿ ಎಲ್ಲಾ ತರ್ಮ ರೋಗಗಳಿಗೆ)

3. **ಬಾಲವರ್ಧಿನಿ ಮಿಶ್ರಣ** ಬೆಲೆ ಬಾಟ್ಲಿ ಒಂದಕ್ಕೆ 1-4-0
(ಮಕ್ಕಳ ದುಬಾಲತೆ, ಹೊಟ್ಟೆಯುಬ್ಬರ ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)

4. **ದ್ರಾಕ್ಷಾರಿಷ್ಟ** .. ಬೆಲೆ ಒಂದು ಬಾಟ್ಲಿಗೆ 2-6-0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾಕ್ಷಯಗಳಿಗೆ)

ಉಚಿತ ಕ್ಯಾಟಲಾಗಿಗೆ ಬರೆಯಿರಿ—
ಸೋಲ್ ಏಜೆಂಟ್ಸ್ (ಮೈಸೂರು ಮತ್ತು ಕೊಡಗು)
**ದಿ ಅಶ್ವಿನಿ ಮೆಡಿಕಲ್ ಹಾಲ್,**
215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ
10)

## ಧಾತು ವೃದ್ಧಿ ರಸಾಯನ (ZANDU)

**"ರ್ಯಾಕ್ಯೂ—ಫಾಸ್ಫೋ—ಮೊಲ್ಫೈ"**

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನವು ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ಕೀಳಾಗಿ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್. ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರುಗಳಿಗೆ, ಡಾಕ್ಟರರಿಗೆ, ಕೃಷಿ ಜೀವಿಗಳಿಗೆ, ಕೀಲಿಗಳಿಗೆ, ಪಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜೀರ್ಣಾಗ್ನಿಯನ್ನು ಸಂವರ್ಧಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗುವುದು. ಇದರಲ್ಲಿ ನವಜೀವಕಳೆಯಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಗಳು

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋಸೊಲ್ಫ್, ಹೆಮೋಗ್ಲೊಬಿನ್, ಸಕ್ಕರಿಪ್ಪಸರಿ ಫಾಸ್ಫೇಟ್ ಕೆಮಿನ್, ಸಾಲ್, ಮೊಲ್ಫ್ ಎಕ್ಸ್‌ಟ್ರಾಕ್ಟ್ಸ್‌ದಾತ್ಮಾಸವ ಮೊದಲಾದ ಪ್ರಸಿದ್ಧ ಔಷಧಗಳಂತ ವಿದೆ. ಇಂದಿನಿಂದಲೇ ಸೇವಿಸಿ ಅತಿಶಯ ಪಡೆಯಿರಿ ಇದು ಎಲ್ಲಾ ಪ್ರಸಿದ್ಧ ಔಷಧಾಲಯಗಳಲ್ಲಿವೆ.

**ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,**
**ಸೊಮಲೆ ರೋಡ್, ಬೋಂಬೆ.**
2½)


# ಜಿಲ್ಲಾ ಬೋರ್ಡು ಚುನಾವಣೆ

## ಉಮೇದ್ವಾರರುಗಳು.

ಪೊನ್ನಂಪೇಟೆ— ಶ್ರೀ ಕಾಳೇಂಗಡ ಚಿಣ್ಣಪ್ಪನವರು (ಕಾಂ)
,, ಪುಚ್ಚಿಮಾಡ ಮಾದಯ್ಯನವರು (ಸ್ವ)

ಶ್ರೀಮಂಗಲ— ,, ಅಜ್ಜಿಕುಟ್ಟಿರ ಮಾದಪ್ಪನವರು (ಕಾಂ.)
ಅವಿರೋಧವಾಗಿ ಆರಿಸಿ ಬಂದರು.

ನಾಪೋಕ್ಲು— ,, ನಡಿಕೇರಿಯಂಡ ದೇವಯ್ಯನವರು (ಕಾಂ)
,, ಬೆಟ್ಟೀಚೀಯಂಡ ಮಾಚಯ್ಯನವರು
ಮಾಚಯ್ಯನವರು ಇತ್ತೀಚೆಗೆ ವಾಪಸು ತೆಗೆದುಕೊಂಡರು

ವೀರಾಜಪೇಟೆ— ,, ಮಂಡೇಪಂಡ ಸೋಮಯ್ಯನವರು (ಕಾಂ)
ಅವಿರೋಧವಾಗಿ ಆರಿಸಿ ಬಂದರು.

ಅಮ್ಮತ್ತಿ— ,, ಏನಂಡ ಕಾರ್ಯಪ್ಪನವರು (ಕಾಂ.)
ಅವಿರೋಧವಾಗಿ ಆರಿಸಿ ಬಂದರು.

ಮಡಿಕೇರಿ— ,, ಚೋರಿರ ಮಂದಣ್ಣನವರು (ಕಾಂ)
,, ಕೆಂಬಟ್ಟಿರ ಮೊಣ್ಣಪ್ಪನವರು (ಸ್ವ)

ಭಾಗಮಂಡ್ಲ— ,, ನಿಡ್ಯಮಲೆ ಸೋಮಣ್ಣನವರು (ಕಾಂ)
ಅವಿರೋಧವಾಗಿ ಆರಿಸಿ ಬಂದರು.

ಸಂಪಿಕೊಪ್ಪ— ,, ಕೋರನ ದೇವಯ್ಯನವರು (ಕಾಂ)
ಅವಿರೋಧವಾಗಿ ಆರಿಸಿ ಬಂದರು.

ಸೋಮವಾರಪೇಟೆ— ,, ಸಿಂಗೂರು ಮಾದಪ್ಪನವರು (ಕಾಂ)
ಅವಿರೋಧವಾಗಿ ಆರಿಸಿ ಬಂದರು.

ಶನಿವಾರಸಂತೆ— ,, ಆಲೂರು ಮಲ್ಲಪ್ಪನವರು (ಕಾಂ)
,, ಸಿ ಚೆನ್ನಬಸಪ್ಪ ಕೆಬ್ಬೆಯವರು (ಸ್ವ)
,, ಜಂಗಮ ಕರಿಬಸಪ್ಪನವರು ,,
,, ಬೆಂಬಳೂರು ಸುಬ್ಬೇಗೌಡರು ,,
,, ಕೆತ್ತೂರು ವೀರಪ್ಪನವರು ,,

ಫೈಜರ್‌ಪೇಟೆ— ,, ವಿ ಕಂಠೇಗೌಡರು (ಕಾಂ)
,, ವಿ ನಾಗರಾಜಾರರು (ಸ್ವ)

ತಾ. 21-5-45 ರಲ್ಲಿ ಚುನಾವಣೆಯಾಗುವದು

## NOTICE.
### INCOME-TAX.

RETURN OF TOTAL INCOME AND OF TOTAL WORLD INCOME OF THE PREVIOUS YEAR FOR ASSESSMENT IN THE YEAR COMMENCING ON 1st OF APRIL 1945.

In pursuance of Sub Section (1) of Section 22 of the Indian income tax Act 1922 (XI of 1922), notice is hereby given to EVERY PERSON whose total income during the previous year exceeded the maximum amount not chargeable to Income tax to furnish within sixty five days from the date of this Notice a return in the prescribed form and verified in the prescribed manner setting forth (along with such other particulars as are required by the said form) his total income and total world income during that year.

A copy of the prescribed form will be supplied free of charge to any person who, for the purpose of complying with this Notice applies at my Office

PENALTY:—Any person who fails without reasonable cause to furnish the return required by this Notice, or fails without reasonable cause to furnish it within the time allowed or in the manner required is liable under Section 28 of the Said Act to a penalty not exceeding one and half times any tax payable by him.

**T V. Rao,**
27-4-1945. INCOME TAX OFFICER, COORG.

*NOTE—The maximum amount which is not chargeable to income tax in the case of individual, Hindu undivided family firm, or association of persons is Rs. 2000/-. In the case of any Company or Local Authority or Non resident is. ..... nil.*

## The Canara Banking Corporation Limited.

(Incorporated in British India Lmbilty of Member is Limited)
22) ESTD—1906.

**Head Office: UDIPI, South Kanara.**

| | | |
|---|---|---|
| Authorised Capital | .... | Rs. 25,00,000 |
| Issued & Subscribed Capital | .... | Rs. 16,00,000 |
| Paid up capital | .... | Rs. 14,92,000 |
| Reserves | .... | Rs. 4,43,000 |

**Total Working Capital Exceeds:**
**ONE CRORE & 35 LAKHS.**

## ದಿ ಬೋಂಬೆ ಲೈಫ್ ಅಷ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.

## ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.
26) ಪಿ. ಬಿ. ನಂ. 337, ಮದ್ರಾಸು.

## ಎಂಪ್ಲೈರ್ ಆಫ್ ಇಂಡಿಯಾ
## ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

11) ಸ್ಥಾಪನೆ:—೧೮೭೬.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಷ್ಟ ಸಂಗತಿಗಳು.

| | |
|---|---|
| ಒಟ್ಟು ಆದಾಯ | ೯೭,೩೭,೦೦೦ ರೂಪಾಯಿ |
| ಚಾಲ್ತಿಯಲ್ಲಿರುವ ವಿಮೆ | ೧೩,೪೯,೪೮,೦೦೦ ,, |
| ಆಸ್ತಿ .... ... | ೬,೫೦,೪೬,೧೦೦ ,, |
| ಕಂಪನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು | ೮,೫೬,೨೦,೦೦೦ ,, |

ಆಂಗ್ಲ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.

ವಿಜಸ್ತಿ | ಉರ್ಜಿತಗೊಸ್ತು | ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

## "ಟ್ರಾಪಿಕಲ್"

**ಪಂ. ಮೋತಿಲಾಲ್ ನೆಹರೂ, ಡಿಕ್ಟೇಟರ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಭಾಶ ಚಂದ್ರ ಬೋಸ್**

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜನಮನೆಯೇ ನಿಮ್ಮನ್ನು ರಕ್ಷಿಸಬಹುದು ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ. ಮಲಬಾರ್ ಏಜೆಂಟರು: **ಹೊಸ ದಿಲ್ಲಿ**] [ಹೆಚ್ಚಿನ ಮಾಹಿತಿಗೆ ಈ ಪತ್ರಿಕೆಗೆ ಬರೆಯಿರಿ:

**ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,**
8) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

## ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ 95,000, ಜಮಾ ಬಂದ ಠೇವಣಾತಿ 2,24,750 ಮತ್ತು ಆದ ಸ್ವೀಸುಫಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಅವಧಿಯ ಮೇಲೆ 90% ಕೊಡಲಾಗುತ್ತೆ. ನಿರಮು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2, ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½ ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.


# ಮದುವೆ ಮತ್ತು ಮೂಡಕ ಪಾನೀಯ.

(ಬರೆದು ಬಂದದ್ದು)

ಕುಡುಕತನವನ್ನ ಕೊಡಗಿನಲ್ಲಿ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ದೃಷ್ಟಿಯಿಂದ ಸೂರೆಮಾಡುತ್ತಿರುವ ಈ ಸಮಯದಲ್ಲಿ ಈ ದುರಭ್ಯಾಸವನ್ನು ನಿಲ್ಲಿಸಲು ಹಲವಲು ಪ್ರಯತ್ನಿಸುತ್ತಿರುವದೇ ಶುಭ ಚಿಹ್ನೆ. ಅನೇಕ ಗ್ರಾಮಗಳು ಕುಡುಕತನವನ್ನು ನಿಲ್ಲಿಸುವ ತೀರ್ಮಾನ ಮಾಡಿಕೊಂಡಿವೆ. ಅನೇಕ ಕುಟುಂಬಗಳು ತಮ್ಮ ಕುಟುಂಬಗಳಲ್ಲಿನ ಲಗ್ನ, ಹಬ್ಬ, ಉತ್ಸವಗಳಿಗೆ ಮೂಡಕ ಪಾನೀಯ ಸೇರಿಸುವದನ್ನು ಮನ್ನಾಮಾಡಿವೆ ಆದರೆ 'ಲೋಕೋ ಭಿನ್ನ ರುಚಿ' ಎಂಬಂತೆ ಕೆಲವರು ಈ ರೀತಿ ಸಮಾಜಸೇವೆಗೆ ಕೊಡಗಿದ್ದರೆ ಇನ್ನು ಕೆಲವರು ಇವರಿಗೆ ವಿರೋಧಿಸಿ ನಿಶಾಸೇವನೆಗೆ ಬಹಿರಂಗವಾಗಿ ಉತ್ತೇಜನ ಕೊಡುತ್ತಿದ್ದಾರೆ ಉದಾಹರಣೆಯನ್ನು ಕೊಡುವದಾದರೆ ತಾ. 22-4-45 ರಲ್ಲಿ ದಿವಂಗತ ಜೆಪ್ಪುಡೀರ ಪೂವಯ್ಯನವರ ಪುಣ್ಯ ಚಣ್ಣಪ್ಪನವರ ಮದುವೆಯನ್ನು ಮಡಿಕೇರಿಯಲ್ಲಿ ನಡೆಯಿತು. ಈ ಮದುವೆಗೆ ಮೂಡಕ ಪದಾರ್ಥ ಸೇರಿಸುವ ವರ್ತಮಾನವಿದ್ದುದರಿಂದ ಮಡಿಕೇರಿಯ ಕೆಲವು ಸಮಾಜಸೇವಕರು ಆವಾಲ್ಲಿಗೆ ಹೋಗಿ ಅವರ ಹಿರಿಯರಲ್ಲಿ ಮೂಡಕದ ಪದಾರ್ಥ ಸೇರಿಸಿ ಸಮಾಜಕ್ಕೆ ಹಾನಿಕರವಾದ ಉದಾಹರಣೆಯನ್ನು ಹಾಕಬಾರದೆಂದು ಬೇಡಿಕೊಂಡರು ಹೀಗೆ ಮದುವೆಗೆ ಕೆಲವು ದಿನಗಳಿಗೆ ಮೊದಲು ಒಂದೆರಡು ಬಾರಿ ಕೇಳಿಕೊಂಡರೂ ಅವರು ಈ ಹೊತ ಗಳನ್ನಾಗಲಿ ನಿಶಿದ ತಮ್ಮ ಕಾರ್ಯದಲ್ಲಿ ಸ್ವತಂತ್ರರಾದರು. ಮದುವೆಯ ದಿವಸವೂ ಸಮಾಜಸೇವಕರು ಮೂರ್ತಾರ್ಥದ ನಂತರ ಮತ್ತೊಂದು ಆಫೀಲನ್ನು ಮಾಡಿಕೊಂಡರು. ಕಡೆಗೆ ಪಟ್ಟು ಬಿಡದ ಸಭೆಯಲ್ಲಿ ಮೂಡಕ ಪದಾರ್ಥವನ್ನು ಮನ್ನಾಮಾಡಬೇಕೆಂದು ಆಡ್ಡಬಿದ್ದು ಬೇಡಿಕೊಂಡರು. ಆದರೂ ಅವರು ಗಮನಿಸದೆ ಕಾರಣಾಲ್ಲಿ ನೆರೆದಿದ್ದವರ ಹೃದಯಪರಿವರ್ತನೆ ಮಾಡುವ ಉದ್ದಿಶ್ಯ ಅ ಹಿರಿಯರ ಕಾಲುಹಿಡಿದು ನಿಶಾಸೇವನೆಗೆ ವಿರುದ್ಧವಿದ್ದ 21 ಜನರು ನಂಟರಿಸ್ಟರು ಊಟಮಾಡದೆ ಮಂಟಪದಿಂದ ಹೊರಟು ಬರಬೇಕಾಯಿತು. ಮಾನವ ಸಮಾಜದಲ್ಲಿ ಗೌರವ ಯಾವುದಕ್ಕೆ? ಮಾನವ ವ್ಯಕ್ತಿಗೋ ಯಾ ಮೂಡಕ ಪದಾರ್ಥಕ್ಕೋ? ಮಾನವ ವ್ಯಕ್ತಿಯನ್ನು ನೆಂಟರಿಷ್ಟರನ್ನು, ಸ್ನೇಹಿತರನ್ನು ಬಿಟ್ಟು ಕೇವಲ ನಿಶಾಸೇವನೆಗೆ ಅವಕಾಶ ಕೊಟ್ಟದ್ದು ಅದೆಷ್ಟು ಹೃದಯದ್ರಾವಕವಾದುದು.

ಈ ಘಟನೆಯಿಂದಿಗಿ ನಾನಾರೀತಿಯ ಚರ್ಚೆಗಳು ಎದ್ದಿವೆ. ಕೆಲವರು ಈ ಕಾರ್ಯಕ್ರಮದಿಂದ ಏನು ಸಾಧಿಸಿದಂತಾಯಿತು? ಎಂದು ಕೇಳುತ್ತಿದ್ದಾರೆ. ಸಾಧಿಸಿದ ವಿಚಾರವೇನೂ ಈಗ ಕಣಿಗೆ ಕಾಣದಿದ್ದರೂ ಮುಂದೆ ಇದರಿಂದ ಹೆಚ್ಚಿನ ಪರಿಣಾಮ ಆಗಲಿದೆ.

ಯಾವನೇ ವ್ಯಕ್ತಿಯಾಗಲಿ ಒಂದು ಮದುವೆ, ಹಬ್ಬ, ಉತ್ಸವಗಳನ್ನು ಮಾಡುವದು ತನ್ನ ಸ್ನೇಹಿತರಾದ ನಾಲ್ಕಾರು ಜನರನ್ನು ಕರೆಸಿ ಆದರ ಸತ್ಕಾರಮಾಡಿ ಆದರಿಂದ ತಾನೂ ಸಂತೋಷಗೊಳ್ಳಲಿಕ್ಕಾಗಿ. ಆದರೆಸಮಾಜ ಘಾತಕ ಕಾರಣವಾದ ನಿಶಾಸೇವನೆಗಾಗಿ ಈ ಸಂತೋಷವನ್ನು ಬಲಿಕೊಡುವ ಜನರು ಇದ್ದಾರೆಂಬುದು ವ್ಯಸನದ ಮಾತು. ಮೇಲಿನ ಉದಾಹರಣೆಯನ್ನೇ ತೆಗೆದುಕೊಂಡರೆ ಮದುವೆಯಿಂದ ಮೊರಟು ಹೋದ ಜನರನ್ನು ಬಿಟ್ಟು ಭೋಜನಮಾಡಿದ ಆ ಸಭೆಯಲ್ಲಿ ಒಂದು ರೀತಿಯ ಚಿಂತೆ ಇಟ್ಟೇ ಇದ್ದಿರಬೇಕು. ಅಲ್ಲಿ ಉಳಿದಿದ್ದವರೂ ಮನುಷ್ಯರೇ ಅದ ಕಾರಣ ಅವರ ಕೃದಯವು ಆಳವಟನೆಯಿಂದ ವಿಡಿದಿರಲೇಬೇಕು. ತಮ್ಮ ಸಹೋದರರಲ್ಲಿ ಕೆಲಸವನ್ನು ಬಿಟ್ಟು ಅದರ ಬದಲು ನಿಶಾ ಜೀವನವನ್ನು ಸ್ವಾಗತಿಸಿದ ಸಭೆಯ ದೃಶ್ಯವನ್ನು ಒಂದೆಡೆ ಚಿತ್ರಿಸಿರಿ. ಪುನಃ ಅದೇ ನಿಶಾ ಪದಾರ್ಥವನ್ನು ಮನ್ನಾಮಾಡಿ ಸಭಾತ್ಯಾಗಕ್ಕೆ ಅವಕಾಶಕೊಡದ ಎಲ್ಲರೂ ಸಮ್ಮಿಳಿತರಾಗಿ ಊಟಮಾಡುವ ದೃಶ್ಯವನ್ನು ಮತ್ತೊಂದೆಡೆ ಚಿತ್ರಿಸಿರಿ ಯಾವುದು ಹೆಚ್ಚು ಆಕರ್ಷಣೀಯ? ಯಾವುದು ಮಾನವ ಕುಲದ ಅಭಿವೃದ್ಧಿಗೆ ಯೋಗ್ಯವಾದದ್ದು?

ಮೂಡಕ ಪದಾರ್ಥ ಸೇರಿಸುವವರ ವಿರುದ್ಧ ಇಷ್ಟು ಪ್ರೀತಿಯ ಬೇಡಿಕೆ ಮಾಡಿದ್ದು ಈ ಸಮಾಜಸೇವಕರ ಸ್ವಾರ್ಥಕ್ಕಾಗಿ ಅಲ್ಲ; ಇಲ್ಲವೇ ಬೇರೆ ಲಾಭದ ದೃಷ್ಟಿಯಿಂದಲ್ಲ. ಕುಡುಕತನದಿಂದ ಕಂಗೆಟ್ಟಿರುವ ಸಮಾಜದ ಉದ್ಧಾರಕ್ಕಾಗಿ. ಕೊಡಗಿನಾಡಿನಲ್ಲಿ ನಿಜವಾದ ಸಂಸ್ಕೃತಿ ಇರುವದಾದರೆ, ಕೊಡಗು ಕುಡುಕತನದಂತ ಅಲಗಾಲದಿಂದಲು ಅಳಿಯಬೇಕೆನ್ನುವ ಕಾಂಕ್ಷೆ ಕೊಡಗಿನವರಿಗೆ ಇರುವಾಗಾದರೆ ಉದಾತ್ತ ಮಾದರಿಯನ್ನು ಪ್ರಾಕೆಕೊಟ್ಟು ಮಡಿಕೇರಿಯ ಸಮಾಜಸೇವಕರಿಗೆ ಇಡೀ ಕೊಡಗು ನಾಡಿನ ಬೆಂಬಲ ದೊರೆಯಬೇಕು ಈ ಉತ್ತಮ ಮಾನವರಿಯನ್ನು ಎಲ್ಲೆಲ್ಲೂ ಸಮಾಜ ಹಿತಚಿಂತಕರು ಅನುಸರಿಸಬೇಕು. ಸಮಾಜದ ಮುಂದಾಳುಗಳು, ಧನಿಕರು ಮತ್ತು ಬುದ್ಧಿವಂತರು ತಮ್ಮ ಉತ್ತಮ ಉದಾಹರಣೆಗಳಿಂದ ಸಮಾಜದ ಅಭಿವೃದ್ಧಿಗೆ ಯತ್ನಿಸಬೇಕು.

Edited Printed and Published by P. I. Bellippa at 'Kodagu' Press, Mercara, for 'Kodagu' Ltd.

Reg No. M. 1550.
KODAGU MERCARA, (Coorg).

# ಕೊಡಗು

ಸಂಪಾದಕರು: ಶ್ರೀ ಪಿ. ಬಿ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೪-೮-೦.

ಸಂಪುಟ ೨೩ | ತಾರೀಕು ೪—೫—೧೯೪೦ನೇ ಶುಕ್ರವಾರ. | ಸಂಚಿಕೆ ೪೭

## ಭಾರತ ರಾಜಕೀಯ ಅವಲೋಕನ.

ಭಾರತ ವೈಸರಾಯರಾದ ಲಾರ್ಡ್ ವೇವೆಲ್ಲರು ಇಂಗ್ಲೆಂಡಿಗೆ ಹೋದುದು ಬ್ರಿಟಿಷರ ದೃಷ್ಟಿಯಿಂದ ಕ್ಷಾಮಬಿ, ವಿಚಾರವಾಗಿರಬಹುದಾದರೂ ಭಾರತೀಯರಿಗೆ ಇದರಿಂದ ಯಾವ ಲಾಭವೂ ಇಲ್ಲವೆಂಬುದು ಎಲ್ಲರಿಗೂ ತಿಳಿದಿದ್ದ ವಿಚಾರವೇ ವೇವೆಲ್ಲರು ಲಂಡನಿಗೆ ಹೋಗಿ ಅವೇರಿ, ಚರ್ಚಿಲ್ಲರೊಡನೆ ಹಿಂದೂಸ್ತಾನದ ವಿಚಾರ ಮಾತುಕತೆ ನಡೆಸಲೆಂದೂ ಆಗಾಗ ಅವರು ಯಾವ ವಿಚಾರಕ್ಕೂ ಒಪ್ಪಲಿಲ್ಲವೆಂದೂ ಆಗ್ರಹದಿಂದ ವೇವೆಲ್ಲರಿಗೆ ಚೀತಿ ಹುಟ್ಟಿ ರಾಜೀನಾಮೆ ಕೊಡಲಿರುವರೆಂದೂ ವಾರ್ತೆಗಳು ಕೇಳಿಬರುತಿವೆ. ಇವರಲ್ಲಿ ಎಷ್ಟರ ಮಟ್ಟಿನ ನಿಜಾಂಶವಿರಬಹುದೋ ತಿಳಿಯದು. ರಾಜೀನಾಮೆ ಊಹಿಸಿ ತಿಳಿದುಕೊಳ್ಳಬೇಕು ಇದೊಂದು ಕಣ್ಣಾಮುಚ್ಚಾಲೆಯ ನಾಟಕವಿದ್ದರೂ ಇರಬಹುದು. ವೇವೆಲ್ಲರು ಲಂಡನಿಗೆ ಹೋದ ವ್ಯಾವಹಾರಿಕ ವಿಚಾರ ಇದಲ್ಲವೆಂದು ಹೊಳೆಯುತಿದೆ. ಜರ್ಮನಿಯು ಯುದ್ಧ ಮುಕ್ತಾಯವಾಗುವ ಚಿಹ್ನೆಗಳು ಕಂಡುಬರುತ್ತಿರುವ ಈ ಸಮಯದಲ್ಲಿ ಅವರು ಮುಂದೆ ಜಪಾನರ ಮೇಲೆ ಆಕ್ರಮಣ ನಡೆಸುವ ಸನ್ನಾಹಗಳ ಬಗ್ಗೆ ಚರ್ಚೆ ನಡೆಸುವ ಸನ್ನಾಹಗಳಲ್ಲಿರಬಹುದು. ಈ ದೃಷ್ಟಿಯಿಂದ ವೇವೆಲ್ಲರು ಲಂಡನಿಗೆ ಹೋಗಿರಬಹುದು ಇನ್ನಾಲಾಗಿ ಕಮಾಂಡರ್-ಇನ್-ಚೀಫರಾದ ಅಚಿನ್‌ಲೆಕ್ಕರೂ ಕೂಡ ಲಂಡನಿಗೆ ಹೊರಟಿರುವದನ್ನು ನೋಡಿದರೆ ಈ ಊಹನೆಗೆ ಬೆಂಬಲಕೊಡುವಂತಿದೆ.

ಮುಂದೆ ಜಪಾನರ ಮೇಲೆ ಧಾಳಿ ಮಾಡುವಾಗ ಹಿಂದೂದೇಶವು ಪ್ರಧಾನ ಪಾತ್ರ ವಹಿಸಬೇಕಿದೆ. ಹಿಂದೂದೇಶವು ನಿಲ್ದಾಣವಾಗಿ ಪರಿಣಮಿಸುವದು. ಈ ಪರಿಸ್ಥಿತಿಯಲ್ಲಿ ಹಿಂದೂದೇಶದ ವ್ಯವಸ್ಥೆಯು ಮೆಚ್ಚತ್ತಕ್ಕದ್ದೆಂಬುದರಲ್ಲಿ ಸಂಶಯವಿಲ್ಲ. ಆ ದಕ್ಕಾಗಿ ವೇವೆಲ್ಲರನ್ನು ಕರೆಸಿ ವಿಚಾರವಿನಿಮಯ ನಡೆಯುತ್ತಿರಬಹುದು. ವೇವೆಲ್ಲರ ಪಯಣವು ರಾಜಕೀಯ ದೃಷ್ಟಿಯಿಂದ ಫಲಕಾರಿಯಾಗಲಾರದು. ಭಾರತದ ಪರಿಸ್ಥಿತಿಯು ಸುಧಾರಿಸುವ ಚಿಹ್ನೆಯೂ ಕಂಡುಬರಲಾರದು.

ಲೇ:—'ಜನಸ'

ಇದೇ ಸಮಯದಲ್ಲಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಜಗತ್ತಿನ ಭವಿಷ್ಯದ ರೂಪರೇಷೆಯು ಚರ್ಚೆಯಾಗುತ್ತಿದೆ. ಹಿಂದೂದೇಶದ ಪ್ರತಿನಿಧಿಗಳೆಂದು ಬ್ರಿಟಿಷ್ ಸರಕಾರವು ಸರ್ ರಾಮಸ್ವಾಮಿ ಮೊದಲಿಯಾರ್, ಸರ್ ಫಿರೋಜ್‌ಖಾನ್ ನೂನ್ ಮತ್ತು ವಿ. ಟಿ. ಕೃಷ್ಣಮಾಚಾರಿ ಇವರನ್ನು ಕಳುಹಿಸಿದೆ ಇವರು ನಿಜವಾಗಿಯೂ ಹಿಂದೂದೇಶದ ಜನರ ಪ್ರತಿನಿಧಿಗಳಲ್ಲವೆಂದೂ ಬ್ರಿಟಿಷ್ ಸರಕಾರದ ಕೈಗೊಂಬೆಗಳೆಂದೂ ಸಾರ್ವಜನಿಕ ಅಭಿಪ್ರಾಯವ್ಯಕ್ತವಾದಲ್ಲಿ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿರುವ ಪ್ರತಿನಿಧಿಗಳಿಗೆ ಹಿಂದೂದೇಶದ ಸ್ವಾತಂತ್ರ್ಯದ ಘೋಷಣೆ ಮಾಡಲಿಕ್ಕೆಬ್ಬು ಬ್ರಿಟಿಷರು ನಿಷ್ಠೆಯಿಂದ ಭಾಷಣವನ್ನು ಬಿಡಿಸಲು ಯತ್ನಿಸುವದಿಲ್ಲ. ಆದರೆ ಈ ಶಾಂತಿಸಮ್ಮೇಳನದಲ್ಲಿ ಏನಾಗಬಹುದು ಎಂಬುದರ ಕುರಿತು ಇಂದಿನ ಪರಿಸ್ಥಿತಿಯಲ್ಲಿ ಏನನ್ನೂ ಹೇಳಲಿಕ್ಕಾಗದು. ಸಾಮಾನ್ಯವಾಗಿ ಜಗತ್ತಿನ ಈ ರಾಷ್ಟ್ರಗಳು ಇಂದು ಸಭೆಗೂಡಿ ಪ್ರಯತ್ನಿಸುತ್ತಿರುವವೋ ಅದು ನಿಶ್ಚಲ, ಮಾಯಿಕವೆಂದು ಈಗಲೇ ಹೇಳಬಹುದು ಹಿಂದಿನಂತೆ ಶಾಂತಿಸಮ್ಮೇಳನದಲ್ಲಿ ಸ್ವಾರ್ಥಕ್ಕೆ ಸ್ಥಾನ ಯಾವಾಗ ಈ ಶಾಂತಿಸಮ್ಮೇಳನದಲ್ಲಿ ಎತ್ತಲ್ಪಡುವಿಲ್ಲ ಎಂದು ಹೇಗೆ ಈ ರಾಷ್ಟ್ರಗಳು ಹಿಂದೂದೇಶದ ಸ್ವಾತಂತ್ರ್ಯದ ಘೋಷಣೆಗೆ ಮೌಖಲಿಕವಾಗಿ ಬ್ರಿಟಿಷರ ನೆರವಿಗೆ ಬಾರದಿರಲಿ

# ಕೊ ಡ ಗು

ತಾ. ೪-೫-೧೯೪೫ನೇ ಶುಕ್ರವಾರ


## ಕಾಂಗ್ರೆಸ್ಸಿಗೆ ಮತವೀಯಿರಿ.

'ರೈತರ ಉದ್ಧಾರವಾಗಬೇಕಾದರೆ ಆಮ ರೈತರಿಂದಲೇ ಆಗಬೇಕು. ಹೊರವ ಕ ಹೇಳಿಕೆಗೆ ಒಳಗಾಗಿ ಆ ಮೂಲಕ ತನ್ನ ಅಭಿವೃದ್ಧಿಯನ್ನು ಸಾಧಿಸಿಯೇನೆಂಬುದು ಶುದ್ಧ ಮೌಢ್ಯತೆ. ದೇಶದ ಮುಖಂಡ ರೇನೂ ಮಂತ್ರವಾದಿಗಳಲ್ಲ; ಹಾಗಿದ್ದಿದ್ದ ಪಕ್ಷ ಭಾರತೀಯರ ಧ್ಯೇಯವು ಎಂದೋ ಕರಗತವಾಗುಗಿತ್ತು. ಆದರೆ ಆ ದು ಹಾಗಿಲ್ಲ ಪ್ರತಿಯೊಬ್ಬನೂ ತನ್ನ ಜವಾಬ್ದಾರಿಯನ್ನರಿತು ಮುಂದಿನ ಏಳಿಗೆ ಗೆ ಪ್ರಯತ್ನಿಸಿದರೇನೇ ಎಲ್ಲರ ಕಲ್ಯಾಣವು ಸಾಧಿಸೀತು ಭಾರತದ ಧ್ಯೇಯ ಸಾಫಲ್ಯವೂ ಆದೀತು.' ಇಂದು ಸೆರೆಮನೆಯಲ್ಲಿರುವ ಭಾರತದ ಆಶಾಜ್ಯೋತಿ ಜವಾಹರ ಲಾಲರು ನುಡಿದ ನೂತಿದು. ಈ ಮೂತ ನ್ನು ಸಾರ್ಥಕಗೊಳಿಸುವ ಸಂದರ್ಭವೊಂ ದು ಕೊಡಗಿನವರಾದ ನಮಗೆ ಇಂದು ದೊರೆತ್ತಿದೆ. ರೈತರಾದ ನಾವು ನಮ್ಮ ಮೇ ಲ್ಮೈಗಾಗಿ, ನಮ್ಮ ದೇಶದ ಕಲ್ಯಾಣಕ್ಕಾಗಿ ನಮ್ಮ ಸೇವೆಯನ್ನು ಸಲ್ಲಿಸಬಹುದಾದ ಸಂ ದರ್ಭ ನ್ನು ಹಿತವಾಗಿದೆ. ಲೆಕ್ಕಕ್ಕಿಲ್ಲದೆ ಮೂಲೆಗುಂಪಾಗಿ ಸಲ್ಪಟ್ಟಿರುವ ರೈತರಾದ ನಮಗಿರುವ ಒಂದೇ ನಾಗರೀಕ ಹಕ್ಕಿಂದರೆ ಓಟು. ಈ ಮಹತ್ವಪೂರ್ಣವಾದ ಓ ಟನ್ನು ಸಮರ್ಪಯೋಗಪಡಿಸುವದರಲ್ಲಿ ನಮ್ಮ ಭವಿತವ್ಯವೂ, ರಾಷ್ಟ್ರದ ಅಭಿವೃದ್ಧಿ ಯೂ ಸಮಾನೇರವಾಗಿವೆ

ಇಂದು ನಮ್ಮ ಈ ಓಟಿಗಾಗಿ ನಮ್ಮ ಕಾಲುಬುಡಕ್ಕೆ ಎ. ಎ ಬಿ. ಎ ಪಧವಿ ಧರರು, ಬರುತ್ತಿರುವದನ್ನು ಗಮನಿಸಿರಿ. ಇಂದು ಅವರು ಪೊಡುತ್ತಿರುವ ನಮಸ್ಕಾ ರಗಳು, ಅವರು ನುಡಿಯುತ್ತಿರುವ ಸವಿ ನುಡಿಗಳನ್ನು ಪರಿಶೀಲಿಸಿರಿ. ಇದೆಲ್ಲಾ ಯಾವ ದೃಷ್ಟಿ ಯಿಂದ. ನಮ್ಮ ಓಟನ್ನು ಅಪಹರಿಸುವ ಕೃಷ್ಣಿಯಿಂದ. ಇಂಥಾ ಸಂಧರ್ಭದಲ್ಲಿ ಮತದಾರರಾದ ನಾವು ನಮ್ಮ ಓಟನ್ನು ಸದುಪಯೋಗಪ ಡಿಸಬೇಕು. ಹಾಗಾದರೆ ಓಟು ಯಾರಿ ಗೆ ಕೊಡಬೇಕು?

ಕೌನ್ಸಿಲಿನಲ್ಲೇ ಆಗಲಿ, ಜಿಲ್ಲಾ ಬೋ ರ್ಡಿನಲ್ಲೇ ಆಗಲಿ ನಾವು ಕಳುಹಿಸುವ ಪ್ರ ತಿನಿಧಿಗಳಿಂದ ನಮಗೆ ಲಾಭವಾಗಬೇಕಾ ದರೆ ಅಲ್ಲಿ ಇವರಿಗೆ ಇತರರ ಬೆಂಬಲವೊರೆ ಯಬೇಕು. ಇಲ್ಲದಿದ್ದಕೆ ಒಬ್ಬ ವ್ಯಕ್ತಿ ಯು ಎಷ್ಟೇ ಬುದ್ಧಿವಂತನಿದ್ದರೂ ಹೆಚ್ಚಿತ ದೇನನ್ನೂ ಅಲ್ಲಿ ಸಾಧಿಸಲಾರನು. ಇಂ ದು ಕಾಂಗ್ರೆಸು ಕೌನ್ಸಿಲಿನಲ್ಲಿ ಹನ್ನೊಂದು ಸ್ಥಳಗಳನ್ನು ಹಿಗಲೇ ಪಡೆದಿದೆಯೆನ್ನುವ ಹುದು. ಎರಡು ಸ್ಥಳಗಳಿಗೆ ಮಾತ್ರ ಸ್ಪ ರ್ಧೆಯಿದೆ. ಹದಿನೆಂಟರಲ್ಲಿ ಹನ್ನೊಂದು ಕಾಂಗ್ರೆಸ್ ಪಕ್ಷದ ಕರಗತವಾಗಿವೆ. ಒಂ ದು ವೇಳೆ ನಾವು ನಮ್ಮದೇ ಸಂಸ್ಥೆಯಾದ ಕಾಂಗ್ರೆಸಿಗೆ ಓಟುಕೊಡದೆ ಕಾಂಗ್ರೆಸಿಗೆ ವಿ ರೋಧನಿಂತಿರುವವಿಗೆ ಓಟು ಕೊಟ್ಟರೂ ಈ ಎರಡು ವ್ಯಕ್ತಿಗಳು ಕೌನ್ಸಿಲಿನಲ್ಲಿ ಏನ ನ್ನು ಸಾಧಿಸಲಾರರು. ಬಹುಮತದ ಬೆಂಬ ಲವಿಲ್ಲದೆ ಯಾವ ಕಾರ್ಯವೂ ಸಾಧಿಸಲ್ಪ ಡದು. ಆದ್ದರಿಂದ ನಮ್ಮ ಓಟನ್ನು ವ್ಯ ರ್ಥಗೊಳಿಸದೆ ಕಾಂಗ್ರೆಸ್ಸಿಗೆ ಕೊಡಬೇಕಾ ದುದು ಧರ್ಮ.

ಇದರಿಂದ ಕಾಂಗ್ರೆಸ್ಸೇತರ ಉಮೇ ದುವಾರರನ್ನು ರೀಕಿಸುವದಲ್ಲ. ಅವರೂ ದೇಶಸೇವೆ ಮಾಡುವವರಾದರೆ, ಕಾಂಗ್ರೆಸಿ ನ ತತ್ವಪಾಲಕರಾದರೆ ಕಾಂಗ್ರೆಸಿಗೆ ವಿರು ದ್ಧ ಯಾಕೆ ನಿಲ್ಲಬೇಕು? ದೇಶೀಯರ ಸಂ ಸ್ಥೆಯೂದ ಕಾಂಗ್ರೆಸಿಗೆ ಶರತ್ತುಹಾಕಿ ಕೂಡ ಬಯಸುವ ಅಧಿಕಾರ ಸ್ಥಳ ದೊರೆಯದಿ ದ್ದರೆ ಕಾಂಗ್ರೆಸ್ಸಿಗೇ ವಿರೋಧನಿಲ್ಲಬಯಸು ವ ಇನರ ಗೂಢಪೇನಿರಬಹುದು. ಕೇವ ಲ ಕೌನ್ಸಿಲಿನ ಯೂ ಜಿಲ್ಲಾ ಬೋರ್ಡಿನ ಶುಚ್ಛಿಗಾಗಿ ಕಾಂಗ್ರೆಸಿನ ವಿಮಲತತ್ವಗಳ ನ್ನು ಬಲಿಕೊಡುವವರಿಗೆ ಮತಕೊಡುವ ದು ಸರಿಯಲ್ಲ. ಕಾಂಗ್ರೆಸು ಜಗತ್ತಿನ ಇಂದಿನ ಅತ್ಯದ್ಭುತ ಸಂಸ್ಥೆ. ಬಡ ಜನರ ಹಿತಕ್ಕಾಗಿ, ನಾಡಿನ ಏಳಿಗೆಗಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೆಣಗುತ್ತಿರುವ ಸಂ ಸ್ಥೆ. ಇಂಥಾ ಸಂಸ್ಥೆಗೆ ವಿರುದ್ಧನಿಂತಿರು ವ ವ್ಯಕ್ತಿಗಳ ತತ್ವವೇನು? ಹೊರಗೆ ಬಾಡಿ ದರಿಸಿ ಯೂ ಧರಿಸದೆ, ತ್ಯಾಗವೊದಬೇಕಾದ ಕಾಲದಲ್ಲಿ ತ್ಯಾಗವೊಡದೆ ಪದವಿಗೆ ಮಾತ್ರ ಮುಂ ದೆ ಬಂದು ಕಾಂಗ್ರೆಸ್ಸಿಗೆ ವಿರುದ್ಧನಿಂತು 'ತಾನೂ ಕಾಂಗ್ರೆಸು' ಎಂದು ಹೇಳಲು ಅಂಜದವರನ್ನು ಜಗತ್ತಿ ಗು ಕಿ ಸಿ ತಿಳಿಯಬೇಕು ಕಾಂಗ್ರೆಸು ಅಡವರ ಸಂ ಸ್ಥೆ. ಅಧಿಕಾರಕ್ಕಾಗಿ ಅಂಡಲೆಯುವವ ರ ಸಂಸ್ಥೆಯಲ್ಲ ತ್ಯಾಗಮೂರ್ತಿಗಳ ಸಂಸ್ಥೆ. ಮಹಾತ್ಮರಿಂದಾ ಯೋಗಿವರ್ಯರ ಸಾ ತ್ರ ಚಾಲನೆಯಿಂತೆ ನಡೆಯುತ್ತಿರುವ ಸಂ ಸ್ಥೆ. ಬಡ ಜನಸೇವೆಯನ್ನು ತನ್ನ ಹೃದ ಯದ ಉಸಿರಾಗಿ, ಜೀವದ ಜೀವಾಳವಾ ಗಿ ಇಟ್ಟುಕೊಂಡಿರುವ ಸಂಸ್ಥೆ. ಇಂಥಾ ಸಂ ಸ್ಥೆಯ ಉಮೇದುವಾರರಿಗೆ ನಮ್ಮ ಓಟು ಹೋಗಬೇಕು.

'ಕೊಡಗಿನಲ್ಲಿ ಜನ ಜಾಗೃತಿಯೂಗಿರು ವದಿಲ್ಲ; ಆದ್ದರಿಂದ ಹೇಗಾದರೂ ಜನತೆ ಯನ್ನು, ಕಳ್ಳಿನ ಮೋಹದಲ್ಲಿ, ಹಾಣಿನ ಮ ಲ್ಲಣದಲ್ಲಿ ಪುಕಲಾಯಿಸಿ ಓಟು ಪಡೆದು ಬಹುದೆಂದು ಇವರು ಊಹಿಸಿರಬಹುದು. ಇಲ್ಲದಿದ್ದರೆ ಜನತೆಯ ಸಂಸ್ಥೆಯೂದಕಾಂ ಗ್ರೆಸನ್ನು ವಿರೋಧಿಸುವ ಎದೆಗಾರಿಕೆ ಹೇಗೆ ಬರಬೇಕು.? ಓಟರೇ, ಎಚ್ಚರಿಕೆ! ಚು ನಾವಣೆ ಕಾಲದಲ್ಲಿ ತಮ್ಮ ಹೇಳಿಕೆಗಳನ್ನು ಅಂದವಾಗಿ ಮುಂದಿಡಬಲ್ಲ ಇವರ ಮಾತಿ ಗೆ ಬೆಲೆ ಕಟ್ಟುವದರಿಂದ ನಮ್ಮ ಅಸ್ತಿತ್ವಕ್ಕೆ ಧಕ್ಕೆ ತಂದು ಕೊಂಡಂತೆ. ನಾವು ಎಂದಿನವ ರೆಗೆ ನಮ್ಮ ಮತವನ್ನು ದೇಶದ ಕಲ್ಯಾಣ ದ, ಜನತೆಯ ಹಿತದ ದೃಷ್ಟಿಯಿಂದ ಉಪ ಯೋಗಿಸುವದಿಲ್ಲವೋ ಅಂದಿನ ವರೆಗೆ ನಾ ವು ಪರ ಶಾಸನೆಯನ್ನು ಮರೆಯದಿರಿ. ಕಾಂಗ್ರೆಸಿಗೆ ವಿರುದ್ಧ ನಿಲ್ಲುವದು ಶುದ್ಧ ಮೌಢ್ಯತೆಯೆಂಬ ಸಾರವನ್ನು ಈ ಕಾಂಗ್ರೆ ಸ್ಸೇತರ ಉಮೇದುವಾರರಿಗೆ ಕಲಿಸಲು ಮ ರೆಯದಿರಿ. ಓಟನ್ನ ಬೇಟಿಗಾರರ ಸವಿಮಾತ್ರ ಗಳಿಂದ ದಿಗ್ಮೂಢರಾಗಿ ತಮ್ಮ ಸ್ಥಿರತೆಯನ್ನು ಕಳಕೊಂಡು ಅವರು ಹೇಳಿದಂತೆ ಕುಣಿಯಲು ತೊಡಗಿದರೆ ತಮಗೆ ಆಹಿತವು ದೇಶಕ್ಕೆ ಹಾನಿಯೂ ಆಗುವದೆಂಬುದನ್ನು ಮರೆಯದಿರಿ.

## ವರ್ತಮಾನ.

ಶ್ರೀ. ತೀತಿರ ಮೇದಪ್ಪನವರನ್ನು ಕೊಡಗಿನ ಸಿವಿಲ್ ಸರ್ಜನರಾಗಿ ನೇಮಿಸಲಾಗಿದೆಯೆಂದು ತಿಳಿಯಬರುತ್ತದೆ.

ಮಿಸ್ ಕೊಂಗಾಂಡ ವೀಲಾ ಅಚ್ಚಯ್ಯನವರು ಕಳೆದ 'ಮೂಷ್ಟರ್ ಲಫ್ ಸರ್ಜರಿ' ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರು ಎಂ. ಬಿ. ಬಿ. ಎಸ್ ಪರೀಕ್ಷೆಯಲ್ಲಿ ಕಳೆದ 40 ವರ್ಷಗಳ ರೆಕಾರ್ಡನ್ನು ಮುರಿದು ಒಂದನೇ ತರಗತಿಯಲ್ಲಿ ತೇರ್ಗಡೆಯಾಗಿದ್ದರು.

ಶ್ರೀ ಬಿದ್ದಂಡ ಉತ್ತಯ್ಯನವರ ಪುತ್ರ ಅಪ್ಪಚ್ಚನವರು ಮದುವೆಗೆ ಸಾರಾಯಿ ನೇರಿಸಿದ್ದರೂ ಕೆಲವು ಸಮಾಜ ಸೇವಕರು ಕೇಳಿ ಕೊಂಡತೆ ಅವರು ಮದುವೆಯಲ್ಲಿ ಸರಬರಾಯಿ ಮಾಡದೆ ಬಾಕಿ ಮಾಡಿದರು. ಶ್ರೀ ಬಲ್ಯಂಡ ಪೂವಯ್ಯನವರು ಮತ್ತು ಮನೆಯವರಾದ ಚಿಣಪ್ಪನವರು ಮಡಿಕೇರಿ ಸಮಾಜ ಸೇವಕರು ಕೇಳಿಕೊಂಡಂತೆ ತಮ್ಮ ಮಕ್ಕಳ ಮದುವೆಗಳಿಗೆ ಸೂಚಕ ಪದಾರ್ಥ ಸೇರಿಸುವದನ್ನು ಮನ್ನಾ ಮಾಡುವ ಮೂಲಕ ಕೊಟ್ಟರು ಸಾರಿರುವರು. ಹೀಶಕಲ್ಯಾಣದ ಉದಾಹರಣೆಗಳು ಇವು.

ಮಡಿಕೇರಿ ವಹಿಳಾ ಸಹಕಾರಿ ಸಮಾಜದ ಆಶ್ರಯದಲ್ಲಿ ನಡೆಯುತ್ತಿರುವ ಹಿಂದೀಪ್ರಚಾರ ಶಾಲೆಯಿಂದ ಕಳೆದ ಪ್ರಾಥಮಿಕ ಪರೀಕ್ಷೆಗೆ ಕೂತ 20 ವಿದ್ಯಾರ್ಥಿನಿಗಳಲ್ಲಿ ಕೆಳಗಿನ 19 ಜನರು ತೇರ್ಗಡೆಯಾಗಿರುವರು. ಶ್ರೀಮತಿಯರಾದ ಎಂ. ಎಂ. ಮುತ್ತಮ್ಮ, ಎಸ್. ಎಸ್. ಗೌರಮ್ಮ, ಸಿ. ಎಸ್. ಪೂವಮ್ಮ, ಎ ಪಿ. ಲಕ್ಷ್ಮೀದೇವಿ, ಟಿ. ಎಸ್. ಸೀತಾಲಕ್ಷ್ಮಿ (ಇವರು ಪ್ರಥಮ ಶ್ರೇಣಿಯಲ್ಲಿ) ಪಿ. ಬಿ ಪರೋಜಿನಿ, ಎ. ಲಕ್ಷ್ಮೀದೇವಿ, ಟಿ. ಲಲಿತಮ್ಮ, ಕೆ. ಎಂ. ಸೀತಮ್ಮ, ಕೆ. ಕೆ. ತಂಗಮ್ಮ, ಕೆ. ಕೆ ನಂಜಮ್ಮ, ಎಸ್. ಯೋಗಾಂಬಾಳ್, ಎಸ್. ಎಸ್. ಕಾಮವ್ವ, ಎಸ್. ಎಸ್. ಸುಬ್ಬಮ್ಮ, ಕೆ. ಕೆ. ಮೇಜುಳ, ಬಿ. ಎ. ಪಂಕಜ, ಬಿ. ಕೆ. ಶಾರದ್ಯ ಸಿ ಎ. ಕಾಮವ್ವ, ಮತ್ತು ಕೆ. ಎ. ಪಾರ್ವತಿ ಇವರುಗಳು.

ಕಳೆದ ಫೆಬ್ರವರಿ ತೀಗಳಲ್ಲಿ ವೀರಾಜಪೇಟೆ ಕೇಂದ್ರದಲ್ಲಿ ನಡೆದ ಹಿಂದೀ ಪ್ರಾಥಮಿಕ ಪರೀಕ್ಷೆಯಲ್ಲಿ ತ್ರಿಗಳಾದ ಕೆ. ಎಂ. ಶಿನಿರಾಮು (ಪ್ರಥಮಶ್ರೇಣಿ) ಎ. ಎಸ್. ರತಿ, ಬಿ.ಜಿ ರುಕ್ಮಿಣಿ, ಕೆ. ಜಿ. ಕಮಲ, ಸಿ. ಎ. ಶಾರದಾಮಣಿ, ಪಿ. ಎನ್. ದೇವಮ್ಮ, ಎನ್. ಎನ್. ಹೊನ್ನಮ್ಮ, ಎಂ. ಪಿ. ವಿಮಲ, ಕೆ. ರಮೇಶ್, ಎ. ಎನ್ ವಿಷ್ಣುಮೂರ್ತಿ, ಮತ್ತು ಬಿ. ಎ. ಬಸವರಾಜ ಇವರುಗಳೂ ಮಾಧ್ಯಮಿಕ ಪರೀಕ್ಷೆಯಲ್ಲಿ ಶ್ರೀಮತಿ ಎನ್. ಸೀತಮ್ಮನವರೂ ಉತ್ತೀರ್ಣರಾಗಿರುವರು. ಇಲ್ಲಿಯ ಹಿಂದಿ ಪ್ರಚಾರ ಮಂಡಳಿಯಿಂದ ಪ್ರಾಥಮಿಕ ಪರೀಕ್ಷೆಗೆ ಕೂತ ಹತ್ತು ವಿದ್ಯಾರ್ಥಿಗಳಲ್ಲಿ ಒಂಭತ್ತು ಜನರು ತೇರ್ಗಡೆಯಾಗಿರುವರು.

ತಾ. 29-5-45ರಲ್ಲಿ ಮಡಿಕೇರಿಯಲ್ಲಿ ನಡೆದ ದಿ. ಕೂರಂಡ ಅಪ್ಪಚ್ಚನವರ ಪುತ್ರ ನಂಜಪ್ಪನವರ ಮದುವೆಗೆ ಸಾರಾಯಿ ಸದರ್ಥಗಳನ್ನು ಸೇರಿಸದ ಒಂಭತ್ತು ಮದುವೆಗೆ ಬಂದಿದ್ದ ಕಲವರು ತಮ್ಮ ನಿಷೇಧವನ್ನು ವ್ಯಕ್ತ ಮಾಡಿ ಹಣ ಕಟ್ಟಿ ಊಟ ಮಾಡದೆ ಹೊರಟು ಹೋದರು.

ಕೊಡಗಿನ ಪ್ರತಿಯೊಬ್ಬ ರೈತನು ಮೇ ತಿಂಗಳ 1ನೇ ತಾರೀಖು ಕಳೆದ ಕ್ಷಣ ತನ್ನ ಬಳಿಯಲ್ಲಿ ವಾರಾಟ್ಸ್‌ರುವ ಹಚ್ಚೆ ನೆ ಆಹಾರಧಾನ್ಯಗಳ ಪರಿಮಾಣವನ್ನು ಪರಿ ಹಾರ ಪೂಲಿಕ ಕೊಡಗು ಅ. ಕಮಿಷನರ ಪರ್ಸನಲ್ ಅಸಿಸ್ಟಂಟರಿಗೆ ಬರೆದು ತಿಳಿಸ ಬೇಕೆಂದು ಪ್ರಕಟಿಸಲಾಗಿದೆ. ಸ್ವಂತ ಉಪಯೋಗದ ಅಂದರೆ ತನಗೆ ತನ್ನ ಸಂಸಾರಕ್ಕೆ ವರ್ಷ ಕ್ಕೆ ಅಳವಿಗೆ ಮುಂದಿನ ಬೆಳೆ ಕೊಯ್ಯುವವರೆಗೆ ಎಷ್ಟು ಬೀಜಕ್ಕೆ ಬೇಕಾಗುವಷ್ಟು ಬತ್ತವನ್ನು ಬಿಟ್ಟು ಉಳಿದುದರ ಲೆಕ್ಕ ಕೊಡಬೇಕು. ರೈತರು ಕೊಟ್ಟ ಹೇಳಿಕೆಗಳ ಮೇಲೆ ಸಂಶಯ ಬಂದರೆ ಆ ವುಗಳನ್ನು ಪರಿಶೀಲಿಸುವ ಅಧಿಕಾರ ಸರ ಕಾರ್ಕಾರಕ್ಕಿದೆ. ಮೇ 15 ರೊಳಗೆ ಲೆಕ್ಕ ಕೊಡದವರ ಮೇಲೆ ಕ್ರಮ ಜರಗಿಸುವ ಸಾಧ್ಯತೆಯೂ ಇದೆ.

## ಮೂರಾಟಕ್ಕಿದೆ.

ಮಡಿಕೇರಿ ಮಹದೇವ ಪೇಟೆ ಚೌಕಿಯಲ್ಲಿರುವ ಬ್ಲಾಕ್ ನಂ. ೪೧ ಸರ್ವೆ ನಂ. 85 ರ, ವಾಸಕ್ಕೂ ಅಂಗಡಿ ಮಳಿಗೆಗೂ ಅ ಕೂಲವಾಗಿರುವ ನಲ್ಲಿ, ಹಿಕ್ಕಲು, ಕೊಟ್ಟಿಗೆ ಇವುಗಳಿಂದ ಕೂಡಿವ ವಿದ್ಯುತ್ ದೀಪಗಳಿರುವ ಒಂದು ದೊಡ್ಡ ಮಹಡಿ (ಈಗಿನ Warunny Dispensary) ಮನೆಯುಮಾರಾಟಕ್ಕಿದೆ. ಬೇಕಾದವರು ಈ ಕೆಳಗಿನ ವಿಳಾಸದವರನ್ನು ವಿಚಾರಿಸಿ.

C/o. "ಕೊಡಗು"
ಮಡಿಕೇರಿ.


## ನಮಗಿವರು ಬೇಡ.

1. ನಮ್ಮ ಕೂಗಿಗೆ ಕಿವಿಗೊಡದವರು ಬೇಡ.
2. ಸರಕಾರದ ಆಕಾಮಚಿತನಗಳಿಗೆ ಶಿರಬಾಗುವವರು ಬೇಡ.
3. ನಾವಿರಾರು ಓಟುರುಗಳ ಹಿತವನ್ನು ಸರಕಾರದ ಶಹಬಾಸ್‌ಗಿರಿಗೆ ಬಲಿಕೊಡುವವರು ಬೇಡ.
4. ಟೀ, ಕಾಫಿ, ಸೇಂದಿ, ದುಡ್ಡುಗಳಿಂದ ಓಟುಪಡೆಯಲೆತ್ನಿಸುವವರು ಬೇಡ.
5. ಅಧಿಕಾರಕ್ಕಾಗಿ ಕಾಂಗ್ರೆಸ್ಸನ್ನವರು ಬೇಡ.
6. ಜನಹಿತದಾಯಿನಿಯೂದ ಬಡವರ ಕಾಮಧೇನುವಾದ ಸಂಸ್ಥೆಗೆ ವಿರೋಧ ನಿಂತವರು ಬೇಡ.

## ಪೊನ್ನಂಪೇಟೆ ಶ್ರೀಮಂಗಲ ನಾಡು ಜನ್ಮ ಓಟರುಗಳಲ್ಲಿ ವಿನಂತಿ.

ನಾನು ನಮ್ಮ ಪೊನ್ನಂಪೇಟೆ ಶ್ರೀಮಂಗಲ ನಾಡಿಗೆ ಜನ್ಮ ಓಟರುಗಳ ಪ್ರತಿನಿಧಿಯಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿಗೆ ಒಬ್ಬ ಉಮೇದಾರನಾಗಿ ನಿಂತಿರುತ್ತೇನೆ. ತಮ್ಮೆಲ್ಲರ ಅನಾಮ್ಲೂಕ್ಯವಾದ ಓಟನ್ನು ನನಗೆ ತಾ. 14-5-1945 ರಲ್ಲಿ ಕೊಟ್ಟು ತಮ್ಮ ಸೇವೆಯನ್ನು ಕೌನ್ಸಿಲ್ ನುಪಾಂತರ ಮಾಡುವುದಕ್ಕೆ ನನಗೆ ಅನುಕೂಲ ಕೊಡಬೇಕಾಗಿ ಅತಿವಿನಯದಿಂದ ಪಾರ್ಥಿಸುತ್ತೇನೆ.

3-3 ಕೋಳೆರ ಕರುಂಬಯ್ಯ

## ಪ್ರಕಟಣೆ.

ವೀರರಾಜೇಂದ್ರಪೇಟೆ ನಾಡು ಬೆಳ್ಳರಿಮಾಡು ಗ್ರಾಮದ ತಾತೀರ ಮೇದಪ್ಪನವರ ಈ ಮೂಲಕ ಸರ್ವ ಸ್ವ ಜನರಿಗೂ ತಿಳಿಯಪಡಿಸುವುದೇನೆಂದರೆ-ನನ್ನ ತಮ್ಮ ಬಿದ್ದಪ್ಪನು ಸ್ವತಪಟ್ಟು ಸುಮಾರು ಹತ್ತೊಂಬತ್ತು ವರ್ಷಗಳಾಯಿತ. ತಮ್ಮ ಬಿದ್ದಪ್ಪನಿಗೆ ಪುತ್ರ ಪುತ್ರಿ ಸಂತತಿಗಳಿಗಾವುದಿಲ್ಲ. ತಮ್ಮ ಬಿದ್ದಪ್ಪನ ಹೆಂಡತ್ತಿ ಪೂವವ್ವನು ಅ ಲಾಗಾಯಿತು ನಮ್ಮ ಮನೆಯಲ್ಲೇ ಇರುವದಾಗಿದೆ. ಸದರಿ ಪೂವವ್ವನಿಗೆ ಕುಟುಂಬದಿಂದ ಜೀವನಕ್ಕೆ ಹಕ್ಕೇ ಹೊರತು ಕುಟುಂಬದ ಆಸ್ತಿಯ ಮೇಲೆ ಯಾವ ಹಕ್ಕುಭಾದ್ಯತೆಯಿರುವುದಿಲ್ಲ. ಸದರಿ ಪೂವವ್ವನಿಗೆ ಜೀವನಾಂಶಕ್ಕೆ ಯಾವ ತೊಂದರೆ ಇರುವುದಿಲ್ಲ ಇವಳು ಕುಟುಂಬದ ಆಸ್ತಿಯನ್ನು, ಗಿರ್ತಿ ಯಾ ಭೋಗ್ಯ ಬರ ಕೊಟ್ಟು ಅನಾವಶ್ಯ ಸಾಲಪಡೆದು ಆಸ್ತಿಗ ಳನ್ನು ಮರುಪಡೆಯೋಗಮಾಡಿ ಕುಟುಂಬ ಕ್ಕೆ ನಷ್ಟ, ಕಷ್ಟತರಲು ಪ್ರಯತ್ನಿಸುತ್ತಾಳೆ. ಆದರಿಂದ ದಕ್ಷಿಣ ಕೊಡಗು ತಾ ಲೋಕು ವೀರರಾಜಪೇಟೆನಾಡು ಬೆಳ್ಳರಿ ನಾಡು ಗ್ರಾಮದಲ್ಲು ಮತ್ತು ವೈತಾಡಿ ಗ್ರಾಮದಲ್ಲಿ ನನ್ನ ಹೆಸರಿನಲ್ಲು ಜಮೂಬಂದಿ ನಡೆದುಬರುವ ಯಾವ ಆಸ್ತಿಗಳನ್ನೂ ಪೂವನ್ನನಿಂದ ಗಿರ್ತಿ ಯಾ ಭೋಗ್ಯ ಆಧಾರ ಬರೆಸಿಕೊಂಡು ಲೇವಾದೇವಿ ನಡಿಸಕೂಡದು. ಆಲ್ಲಿ ಪೂವವ್ವನಿಗೆ ಯಾರೂ ವೈಸಾಲ ಸಹ ಕೊಡಕೂಡದು ಹಾಗೆ ಕೊಟ್ಟಲ್ಲಾ ಕುಟುಂಬದ ಜರಸ್ತಿರ ಆಸ್ತಿಗಳಿಂದ ಸಾಲ ಪಸೂಲಾತಿಗೆ ಆಸ್ಪದಪಸಿಗಲಾರದು. ಸದರಿ ಪ್ರಕಟಣೆ ವಿಷಯಗಳನ್ನು ಉಲ್ಲಂಗಿಸಿ ಪೂವವ್ವನಲ್ಲು ಲೇವಾದೇವಿ ನಡಿಸಿದಲ್ಲು ಆನಳಿಂದ ಬರೆಸಿಕೊಂಡ ಸರ್ವಬಾಬಿನ ಆಧಾರ ರದ್ದಾಗಿರತಕ್ಕದ್ದು. ಮತ್ತು ಈ ಸಮ್ಮಂದ ಮುಂದಕ್ಕೆ ಆಗುವ ಸರ್ವ ನಷ್ಟ ಕಷ್ಟಗಳಿಗೆ ಲೇವಾದೇವಿ ಕೊಟ್ಟವರೇ ಬದ್ದರಾಗಿರತಕ್ಕದ್ದು.

ತಾ 29-3-45 ಟಿ. ಎ. ಮೇದಪ್ಪ.

3-3


**ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.**

**ಇವರ ಸಿದ್ಧೌಷಧಗಳು.**

1. ನಿಕಾಫ್ ಟೂತ್ ಪೌಡರ್. .... ಬೆಲೆ ಪೊಟ್ಟಣ ಒಂದಕ್ಕೆ 0-1-0
(ತಲೆನೋವು, ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)
2. ಪಾಮರಿ ಚೂರ್ಣ .... .... ಬೆಲೆ ಪೊಟ್ಟಣ ಒಂದಕ್ಕೆ 0-6-0
(ಕಜ್ಜಿ, ತುರಿ, ವಿಷಬು, ಇತ್ಯಾದಿ ಎಲ್ಲಾ ತರ್ಮ ರೋಗಗಳಿಗೆ)
3. ಬಾಲವರ್ಧಿನಿ ಮಿಶ್ರಣ .... ಬೆಲೆ ಬಾಟ್ಲಿ ಒಂದಕ್ಕೆ 1-4-0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)
4. ದ್ರಾಕ್ಷಾರಿಷ್ಟ .... .... ಬೆಲೆ ಒಂದು ಬಾಟ್ಲಿಗೆ 2-6-0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾಕ್ಕಗಳಿಗೆ)
ಉಚಿತ ಕ್ಯಾಟಲಾಗಿಗೆ ಬರೆಯಿರಿ—
ಸೋಲ್ ಏಜೆಂಟ್ಸ್ (ಮೈಸೂರು ಮತ್ತ ಕೊಡಗು)
**ದಿ ಆಶ್ವಿನಿ ನೆಡಿಕಲ್ ಹಾಲ್,**
11) 215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.

**ಧಾತು ವೃದ್ಧಿ ರಸಾಯನ (ZANDU)**

**"ರ್ಯಾಕ್ಸೋ—ಫಾಸ್ಫೋ—ಮೊಲ್ಟ್"**

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ ಶಾಯಲಿಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ಕೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಆಕಲ್ಪನೆಗೆ ಜಾನಿಕ್. ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಕೃಷಿ ಜೀವಿಗಳಿಗೆ, ರೋಗಿಗಳಿಗೆ, ಶಿಕ್ಷೋಗಿಗಳಿಗೆ, ಗೃಹಕೃತ್ಯಾಸಕ್ತರಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಇರಾಗ್ನಿಯನ್ನು ಸಂರಕ್ಷಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯನ್ನಿರುವುದು. ಇದರಲ್ಲಿ ನಪಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ದ್ರವಿಧಗಳವೆ.

ಇದರಲ್ಲಿ ಇಲಿಕ್ಸರ್ ಆಫ್ ಫಾಸ್ಫೋಮೊಲ್ಟ್, ಹೆಮೊಗ್ಲೋಬಿನ್, ಸೋಡಿಯಂ ಸಿಟ್ರೇ ಫಾಸ್ಫೇಟ್ ಡೈಸ್ಪಿನ್, ಸಾಲ್, ಮೊಳ್ಟ್ ಎಕ್ಸ್‌ಟ್ರಾಕ್ಟ್,ಮತ್ತಾ ಸವೆಮೊದಲಾದ ಶ್ರೇಷ್ಠ ದ್ರವಿಧಗಳಂತ ವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ದ್ರವಿಷವಾಪಾರಿಗಳಲ್ಲಿಯೂ ಕಿ.

**ಥುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,**
27) ಗೊಖಲೆ ರೋಡ್, ಬೋಂಬೆ.


# ಹಿಂಟ್ಲರ್ ಮೃತನಾದ?

ಮುಸಲೋನಿಯು ಸೆರೆಹಿಡಿಯಲ್ಪಟ್ಟು ಕೊಲ್ಲಲ್ಪಟ್ಟಕ್ಕು ಹಿಟ್ಲರನು ಸತ್ತನು. ಗೋರಿಂಗನು ಹೇಂಡತಿ ಮಕ್ಕಳೊಡನೆ ಏನು ಮಿಲಿಯ ಸಂಪತ್ತೊಡಗೂಡಿ ಪಲಾಯನಮಾಡಿದನು. ಗೋಬೆಲ್ಲನು ಸುತ್ತು ಹೊತ್ತಿಕೊಂಡುರಿಯುತ್ತಿರುವ ಬರ್ಲಿನಿನಲ್ಲಿ ಸಿಕ್ಕಿ ಬಿದ್ದಿದ್ದಾನೆ. ಹಿಮ್ಲರನು ಸಂಧಾನದ ಶರತ್ತುಗಳನ್ನು ಮುಂದೆ ಮಾಡಿ ನರಗೊಗ್ಗಿ ಬೇಡುತ್ತಿದ್ದಾನೆ. ಇವು ಜರ್ಮನಿಯಿಂದ ಈ ವಾರ ಬಂದ ವಾರ್ತೆಗಳ ಸೂಕ್ಷ್ಮರೂಪ. ಬರ್ಲಿನ್ ನಗರದ ಯುದ್ಧ ಪರಿಸ್ಥಿತಿಯು ಹೀಗಾಗಿದೆ ಎಂದೂ, ಅದು ಮಿತ್ರರ ವಶವಾದಂತೆಯೂ ತೆಂದೂ ವಾರ್ತೆಗಳು ತಿಳಿಸುತ್ತವೆ. ಮುಸಲೋನಿಯು ಕೊಲ್ಲಲ್ಪಟ್ಟನಂಬ ವರದಿಯನ್ನು ಕಣ್ಣಾರೆ ಕಂಡುಬರೋಚ್ಚರ ಪ್ರಕಟಿಸಿದ್ದಾರೆ. ಜನರು ಮುಸಲೋನಿಯನ್ನು ದೇಶದ್ರೋಹಿಯೆಂದು ಛೀಗಳಿದು ತನ ಜೀವಕ್ಕೆ ಉಗ್ಗಳದರೆಂದು ಅತನು ವರದಿಮಾಡಿದ್ದಾನೆ!

ಹಿಮ್ಲರನು ಜರ್ಮನಿಯ ಸರ್ವಾಧಿಕಾರವನ್ನು ತಾನು ಬಹಿಸಿ ಬ್ರಿಟನ್ ಅಮೇರಿಕಾಗಳೊಡನೆ ಒಪ್ಪಂದಕ್ಕೆ ಬರುವ ಶರತ್ತುಗಳನ್ನು ಮುಂಚಿತ ಹಾಕಿದ್ದಾನಂತೆ. ತಾನು ನಿಜವಾಗಿಯೂ ಒಪ್ಪಂದಮಾಡಿಕೊಳ್ಳಲಿರ ನೆನೆಂಬುದನ್ನು ರುಜುವಾತು ಪಡಿಸಲು ಹಿಟ್ಲರನ ಕೊಲೆಮಾಡಿ ಆತನ ಪ್ರೇತದೇಹವನ್ನು ಮಿತ್ರರಿಗೆ ಒಪ್ಪಿಸುವೆನೆಂದೂ ಆತನು ನುಡಿದಿದ್ದಾನಂತೆ. ಆದರೆ ಆತನು ತನ್ನ ಕಾಂತಿ ಸೂಚನೆಗಳಲ್ಲಿ ರಷ್ಯಾಕ್ಕೆ ತಾನು ವಿರಬಾಗಲಾರೆನು; ಬ್ರಿಟನ್, ಅಮೇರಿಕಾಗಳಿಗೆ ಮಣಿಯುವೆನೆಂದಿದ್ದನು. ಆದರೆ ರಷ್ಯಾನನ್ನು ಸೇರಿದ ಶರತ್ತುಗಳಿಗೆ ತಾವು ಒಪ್ಪುಸದಿಲ್ಲವೆಂದು ಮಿತ್ರರು ಹೇಳಿದ ಕಾರಣ ಪುನರ್ ರಷ್ಯಾವನ್ನೂ ಸೇರಿಸಿ ಇವರಿಗೆ ಶರಣಾಗುವ ತನ್ನ ಸೂಚನೆಯನ್ನು ಆತನು ಮುಂದಿಟ್ಟಿರುವನಂತೆ.

ಬರ್ಲಿನಿನಲ್ಲಿ ಅತ್ಯಶ್ಚರ್ಯಕಾಗಿರುತ್ತಿದ್ದರೂ ಬರ್ಲಿನಿನಶಕ್ತಿಯಿರುವಿತೆಂದು ವಾರ್ತೆಗಳು ತಿಳಿಸುತ್ತಿವೆ ಜರ್ಮನರು ಬರ್ಲಿನಿನಲ್ಲಿ ಬಹು ಸಾಹಸದಿಂದ ಯುದ್ಧ ಮಾಡುತ್ತಿರುವರಂತೆ. ಬರ್ಲಿನಿನ ಪ್ರತಿಯೊಂದು ಮನೆಯೂ ಒಂದೊಂದು ಕೋಟೆಯಾಂತಿದೆಯಂತೆ. ಪ್ರತಿ ಸ್ಥಳಗಳಲ್ಲೂ ಭೂಗರ್ಭಾಂಡಾರಗಳು ಅಳವಡಿಸಲ್ಪಟ್ಟಿವೆಯಂತೆ ಪ ನೆಪನೆಗಳೇ ಮಿತ್ರಸೈನಿಕರುನ್ನಕ್ಕಿಗೆಯಾಗಿ ವಿ ಪ್ರರನ್ನು ಪ್ರತಿಭಟಿಸಿ ಸಾಯುತ್ತಿರುವರು. ಹೆಂಗಸರೂ ಕೂಡ ಆಯುಧಹಿಡಿದು ಹೋರಾಡತೊಡಗಿದ್ದಾರೆ ಇದಲ್ಲದೆ ವಿದ್ಯಾರ್ಥಿಗಳು, ಆಫೀಸರುಗಳು, ಪೊಲೀಸರು, ಕೂಲಿಗಾರರು ಮೊದಲಾದವರು ಸಿಕ್ಕಿದ ಆಯುಧ ತೆಗೆದುಕೊಂಡು ವಿ ಪ್ರರನ್ನು ಪ್ರತಿಭಟಿಸುತ್ತಿದ್ದಾರೆ. ಬರ್ಲಿನ್‌ನಗರದ ಮಂತ್ರಾಲು ಭಾಗವು ಮಿತ್ರರ ವಶವಾಗಿದ್ದರೂ ಜರ್ಮನರು ಧೃತಿಗೆಡದೆ ಹೋರಾಡುತ್ತಿರುವದು ಮಿತ್ರರನ್ನು ಮುಗ್ಗಲೊಸಿದೆ ಬರ್ಲಿನ್‌ನಗರವು ಮಿತ್ರರ ವಶವಾದರೆ ಯುದ್ಧ ಮುಗಿದಂತೆಯೇ! ಜರ್ಮನಿ ಪ್ರತಿಭಟನೆಯ ಆಟ ನಿಂತಂತೆಯೇ ಎಂದು ಕೆಲವರು ಅಭಿಪ್ರಾಯಪಡುತ್ತಾರೆ ಆದರೆ ಈ ಮೊದಲೇ ನಾನು ಸೂಚಿಸಿದಂತೆ ಬರ್ಲಿನ್ ನಗರವು ಮಿತ್ರವಶವಾದರೂ ಯುದ್ಧ ಮುಗಿಯಲಾರದು ತಮ್ಮ ರಾಜಧಾನಿಯೇ ಕ್ಷಯಿಸಿದರೂ ಮಿತ್ರರ ವಶವಾಗುತ್ತಿದ್ದರೂ ಜರ್ಮನರು ನಿರಾಕರಿಸಿದೆ ಯುದ್ಧಮಾಡುತ್ತಿರುವದನ್ನು ನೋಡಿದರೆ ಅವರಿಗೆ ಬೇರೆ ಕಡೆಯಿಂದ ಶಕ್ತಿ ಕೂಡುವ ಶಿಬಿರಗಳಿವೆಯೆನ್ನಬೇಕು. ನಾರ್ವೆಯಲ್ಲಿ ಮತ್ತು ಅ ಸ್ಟ್ರಿಯಗಳಲ್ಲಿ ದುರ್ಗಗಳನ್ನು ನಿರ್ಮಿಸಿ ಸೈನ್ಯಸಂಗ್ರಹಮಾಡಿದ ವಿಚಾರ ಈ ಮೊದಲೇ ನಾನು ಬರೆದಿರುವೆನು. ಇವುಗಳ ಒಲವಿಂದ ಜರ್ಮನರು ಹತಾಶರಾಗದೆ ಹೋರಾಡುತ್ತಿರುವರು.

ಆಸ್ಟ್ರೀಯದಲ್ಲಿ ಹಿಟ್ಲರನು ರಚಿಸಿದ ದುರ್ಗದ ವಿಚಾರ ಕಚ್ಚಿನ ಮಾಹಿತಿ ಈ ವಾರ ತಿಳಿದುಬಂದಿದೆ. ಈ ದುರ್ಗದಲ್ಲಿಯ ಪ್ರದೇಶದ ವಿಸ್ತಾರವು 20,000 ಚದರ ವೈಲ ಗಳೆಂದು ತಿಳಿದುಬಂದಿದೆ. ಇಲ್ಲಿ ಹಿಟ್ಲರನು 140 ವಿಭಾಗಗಳಷ್ಟು ಸೇನೆಗಳನ್ನು ಸಂಗ್ರಹಿಸಿಟ್ಟಿರುವನು ಹಲವಾರು ತಿಂಗಳುಗಳಿಗೆ ಸಾಕಾಗುವಷ್ಟು ಆಹಾರವನ್ನು ಶೇಖರಿಸಿಟ್ಟಿರುವನು. ಭೂಗರ್ಭದಲ್ಲಿ ಕಾರ್ಖಾನೆಗಳನ್ನೂ, ವೈಜ್ಞಾನಿಕ ಪರಿಶೋಧನಾ ಕೇಂದ್ರಗಳನ್ನೂ ಇರಿಸಿದ್ದಾನೆ. ಜರ್ಮನಿಯನ್ನು ನಿರ್ಜವಾಗಿಯೂ ಸೋಂಪೆಂದು ಹೇಳುವಂತೆ ಮಾಡಬೇಕಾದರೆ ಈ ದುರ್ಗವನ್ನು ಮಿತ್ರರು ಬೇಧಿಸಬೇಕು.

ಈಗ ಬಂದ ವಾರ್ತೆಗಳಲ್ಲಿ ಹಿಟ್ಲರನು ಸತ್ತನೆಂಬ ವಾರ್ತೆಯಿಂದ ಜರ್ಮನ್ ಯುದ್ಧ ಮುಗಿಯಿತೆಂದು ಕೆಲವರೆನ್ನುತ್ತಾರೆ ಹಿಟ್ಲರನು ಸತ್ತನೆಂಬ ವಾರ್ತೆ ಸಂರಯಪ್ಪದವಾರ್ಯವಾದಾಗ್ಯೂ ಆತನ ಬದಲಿಗೆ ಸರ್ವಾಧಿಕಾರಿಯಾಗಿ ನೇಮಿಸಲ್ಪಟ್ಟಿರುವನೆನ್ನುವ ಜನರಲ್ ಜೋಸೆಫ್‌ನನ್ನು ಯುದ್ಧ ನಿಲ್ಲಿಸುವ ಜೋಕೆ ಕೊಟ್ಟಿರುವ...

ಇಷ್ಟರವರೆಗೆ ತಟಸ್ಥವಾಗಿದ್ದ ಇಟಲಿ ರಣರಂಗದಲ್ಲಿ ಈ ವಾರ ಚಟುವಟಿಕೆ ಕಂಡುಬಂದಿದೆ ಇಟಲಿಯುದ್ಧವು ಪ್ರಧಮವಾಗಿ ಪ್ರಾರಂಭವಾದರೂ ಅದು ಮಿತ್ರರಿಗೆ ಅನುಕೂಲವಾಗಿಯೇ ಪರಿಣಮಿಸಿದೆ. ಇಂದೂ ಕೆಂಡುಬರುವ ಇಟಲಿಯುದ್ಧದಲ್ಲಿರುವ ಮಿತ್ರಪಡೆಗಳು ಆಸ್ಟ್ರಿಯಾ ಗಡಿಯಿಂದ ೨೫೦ ಮೈಲುಗಳಷ್ಟು ದೂರದಲ್ಲಿವೆ. ಬರ್ಲಿನಿನ ಮೇಲೆ ಹೊಡಿದ ಧಾಳಿಯಿಂದ ಜೀತನಯುದ್ಧರಾಗಿ ಮಿತ್ರರು ಇಲ್ಲಿ ಚಟುವಟಿಕೆ ಆರಂಭಿಸಿದ್ದಾರೆ. ಮುಂದೆ ಈ ರಂಗದಲ್ಲಿ ಕಕ್ಕರ್ಶಕರನೆವಾಗಬಹುದೂ.

ಶತ್ರುವನ್ನು ಇರುಕಿನಲ್ಲಿ ಸಿಲುಕಿಸಬೇಕು ಜರ್ಮನರನ್ನು ಪಾರಾಕ್ರಾಂತ ಮಾಡಲೇಕೆಂದು ಅಮೆರಿಕನ್ ಸೈನಿಗಳು ಜರ್ಮನದತ್ತ ಸಾಗುತ್ತಿವೆ. ಜರ್ಮನರೂ ಇದಕ್ಕೆ ಸಿದ್ಧರಿರಬಹುದು. ಜರ್ಮನರೂ ಕೂಡ ಕರೆಯೋರೆ ಸಾಹಸದ ಕಟ್ಟಾಳುಗಳು. ಕಯಿಬ್ಬ ಸೇನಾಬಲದ ಹಿರಿಮೆಯನ್ನು ಶ್ಲಾಘಿಸಿ ರಶ್ಯನಿನ ಪಕ್ಷ ಸಾಹಸಗಳನ್ನು ಕಡೆಗಣಿಸಲು ಬರುವದಿಲ್ಲ. ತಮ್ಮಲ್ಲಿರುವ ಕೆಚ್ಚು, ಪಕ್ಕ, ಸಾಹಸಗಳನ್ನು ಜರ್ಮನರು ತೋರದಿರರು

ಸಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಭಿನ್ನ ಭವಿಷ್ಯವು ವಿಮಿತ್ರಶಿಬಿರದಲ್ಲಿ ಕೋಗುವ ಚಿಹ್ನೆಗಳು ಕಂಡು ಬರುತ್ತಿವೆ ಕರ್ಮ ಧರ್ಮ ಸಂಯೋಗದಿಂದ ಈ ಸಮ್ಮೇಳನವು ಮುಂದಿದರೆ ದುರ್ಗಸ್ಥ ಉದ್ದ ಬೆಳೆಯವನವರಲ್ಲಿ ಕಂಡಯಿಲ್ಲ. ಈ ಸಮ್ಮೇಳನವು ಜಯಪ್ರದವಾಗದಿದ್ದರೆ ರಷ್ಯಾ ಜರ್ಮನಿಗಳೊಂದಿಗೆ ಒಪ್ಪಂದವಾಗುವದು ಅಸಂಭವವಲ್ಲ ಈ ರೀತಿ ಒಪ್ಪಂದವಾದರೆ ಹಿಂದೆ ಗೊಬೆಲ್ಸ್‌ನು ಹೇಳಿದಂತೆ ಜಾಗತಿಕ ಇತಿಹಾಸದ ರೂಪವೇ ಬದಲಾಗುವದರಲ್ಲಿ ಸಂಶಯವಿಲ್ಲ.

## The Canara Banking Corporation Limited.

(Incorporated in British India Liablity of Members is Limited)
23) ESTD—1906.

**Head Office: U D I P I, South Kanara.**

| | | |
|---|---|---|
| Authorised Capital | .... | Rs. 25,00,000 |
| Issued & Subscribed Capital | .... | Rs. 16,00,000 |
| Paid up capital | .... | Rs. 14,92,000 |
| Reserves | .... | Rs. 4,43,000 |

**Total Working Capital Exceeds:**
**ONE CRORE & 35 LAKHS.**

## ದಿ ಬೋಂಬಿ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಕರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.

## ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.
27) ಪಿ. ಬಿ. ನಂ. 337, ಮದ್ರಾಸು.

## ಎಂಪೈರ್ ಆಫ್ ಇಂಡಿಯಾ
## ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

12) ಸ್ಥಾಪನೆ:—೧೮೯೭.

| | | |
|---|---|---|
| ೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸೈಷ್ಟ ಸಂಗತಿಗಳು. | ಒಟ್ಟು ಆದಾಯ | ೯೭,೩೭,೦೦೦ ರೂಪಾಯಿ |
| | ಚಾಲ್ತಿಯಿರುವ ವಿಮೆ | ೧೬,೪೪,೫೮,೦೦೦ ,, |
| | ಆಸ್ತಿ .... .... | ೬,೫೦,೫೬,೦೦೦ ,, |
| | ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು | ೫,೫೯,೦೦,೦೦೦ ,, |

| ಅಂಗ ಕಛೇರಿ: | ಏಜೆನ್ಸಿ | ಪ್ರಧಾನ ಕಛೇರಿ: |
|---|---|---|
| ಡಿಸ್ಪೆನ್ಸ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು. | ಅರ್ಜಿಗಳನ್ನು ಸ್ವಾಗತಿಸಿದೆ. | ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ |

## "ಪ್ರೊಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್,
ಶಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ಜೀವದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ ಪ್ರೊಪಿಕಲಿನಲ್ಲಿ ವಿಮೆ ಮಾಡಿರಿ.

ಮುಖ್ಯ ಏಜೆಂಟರು: **ಹೊಸ ದಿಲ್ಲಿ]** [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:
ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,
9) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

## ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ॥ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1931ರಲ್ಲಿ ಸ್ಥಾಪಿತವಾಗಿದೆ.
ವಸೂಲಾದ ಶೇರ್ ಮೊಬಲಗು ರೂ. ೫೦,೦೬೦, ಜಮಾ ಬಂದ ರೇಜರ್ವಾತಿ 2,24.75೨ ವಸೂಲಾದ ಠೇವಣಿಗಳು 3,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ಫಿಕ್ಸು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.


# ಹಳ್ಳಿಗರ ಬಗೆಹರಿಯದ ಪಾಡು.

ಮಾತೃಭೂಮಿಯ ಸೇವೆಯನ್ನು ಮಾಡಲು ಯಾವನು ತಾನೆ ಹಿಂಜರಿಯುವನು? ತನಗೆ ಜನ್ಮವಿತ್ತು, ಅನ್ನವಸ್ತ್ರಾದಿಯಗಳನ್ನೀಯುವ ತಾಯ್ನಾಡಿನ ಏಳ್ಗೆಗೆ ಆಸಾಗರಿಕನು ತಾನೆ ದುಡಿಯದಿರುವನು? ಅದರಲ್ಲೂ ಭಾರತವು ವೀರರ ತವರೂರು; ಧೀರರ ನೆಲೆಯೂರು; ದೇಶಸೇವಕರ ಹುಟ್ಟೂರು. ಭಾರತ ವರ್ಷದ ಭಾಗ್ಯಬಾವುಟ ಗಗನದಲ್ಲಿ ಪಟಪಟನೆ ಹಾರುತ್ತಿತ್ತು ಹಿಂದೊಮ್ಮೆ. ಆದರೆ ಇಂದೇಕೆ ಹಿಂದೂದೇಶ ಇಂತಾಗಿದೆ?

ನಮ್ಮ ದೇಶವು ಕೃಷಿಪ್ರಧಾನವಾದ ಹಳ್ಳಿಗಳಿಂದ ಕೂಡಿದೆಯೆಂದು ಆದುದರಿಂದ ದೇಶದ ಏಳಿಗೆಯು ರೈತನ ಕೈಯಲ್ಲೂ ಇದೆಯೆಂದರೂ ತಪ್ಪಾಗಲಾರದು. ನಮ್ಮ ನಾಡಿಂದು ನೈಸರ್ಗಿಕವಾಗಿಯೇ ಕೃಷಿಗೆ ಅನುಕೂಲವಾಗಿದೆಯೆಂದ ಬಳಿಕ, ನಾವು ಆಹಾರಕ್ಕಾಗಿ ಆನ್ಯ ಕಾಲದಲ್ಲೂ ಹಾಹಾಕಾರವನ್ನು ತರಬೇಕಾಗಿಲ್ಲ! ಆದರೆ ನಮ್ಮ ಊರಲ್ಲಿ ಬಂಜರು ನೆಲಗಳಿಗಿಂತ ಎಂದರೆ ಕೃಷಿಯನ್ನು ಮಾಡಲು ಸಾಧ್ಯವೇ ಇಲ್ಲವೆಂದು ಬಿಡುವಂತಹ ಪ್ರದೇಶಗಳಲ್ಲಿ ಪಶರಾಷ್ಟ್ರೀಯರು, ನಮ್ಮ ಫಲವತ್ತಾದ ಪ್ರದೇಶದಲ್ಲಿ ಬೆಳೆಯತ್ತಾ ಎಷ್ಟೋ ಹೆಚ್ಚಿಗೆ ಪಾಲು ಬೆಳೆಯನ್ನು ಉತ್ಪಾದನೆ ಮಾಡುವರೆಂದರೆ ಆಶ್ಚರ್ಯವಲ್ಲವೆ! ನಾವು ಹಿಂದುಳಿಯಲು ಕಾರಣವೇನು? ಕೃಷಿಯಲ್ಲಿ ಸುಧಾರಣೆಯಿಲ್ಲ. ನಮ್ಮಲ್ಲಿ ಕಂಡುಬರುವ ಕೃಷಿಯ ಪದ್ಧತಿಯದು ಬಹಳ ಪುರಾತನವಾದುದು, 'ಅಜ್ಜ ನೆಟ್ಟ ಆಲದ ಸಸಿ'ದಂತೆ ಇಂದು ನಮ್ಮ ಕೃಷಿಯು ಕಂಡು ಬರುತ್ತಿದೆ.

ಕೃಷಿ ಸುಧಾರಣೆ ಹೊಂದಬೇಕಾದರೆ ಕೃಷಿಕನು ವಿದ್ಯಾವಂತನಾಗಬೇಕು. ಆದರೆ ಇಂದಿನ ಈ ಮಾತೃಭಾಷೆಗೆ ಪ್ರಾಮುಖ್ಯತೆಯನ್ನು ಕೊಡದ ಈ ಕಾಲದಲ್ಲಿ ಕೃಷಿಕನು ವಿದ್ಯಾವಂತನಾಗುವುದೆಂದರೆ ಕನಸಿನ ಸೆನಸೇ ಸರಿ. ಕೃಷಿ ಇಲಾಖೆಯೇನೋ ವ್ಯವಸಾಯಾಭಿವೃದ್ಧಿಗೆ ಯತ್ನಿಸುತ್ತಿದೆ; ಆದರೆ ಹಳ್ಳಿಯ ಮೂಲೆಗಳಲ್ಲಿ ತಿರುಗಿ ನೋಡಿದರೆ ಕಾಣಸಿಗುವ ಗಾವಿಲನಿಗೆ, ಕೃಷಿಯನ್ನು ಉನ್ನತಿಗೆ ತರುವ ಯತನೆಗೆ ಸಹಾಯಮಾಡುವ ಕೃಷಿ ಇಲಾಖೆಯೊಂದಿದೆ ಎಂಬುದೇ ಅರಿಯದು!

ಹಳ್ಳಿಗನು ಏಕೆ ವಿದ್ಯಾವಂತನಾಗಲಾರದು? ಎಂಬುದೊಂದು ಪ್ರಶ್ನೆ; ಇಂದು ವಿದ್ಯಾಭ್ಯಾಸವು ಇಂಗ್ಲಿಷ್ ಭಾಷೆಯಲ್ಲಿ ಎಂಬುದನ್ನು ನಾವೆಲ್ಲರೂ ಅರಿತಿರುವೆವು. ವಿದ್ಯಾಭ್ಯಾಸಕ್ಕೆ ಪಟ್ಟಣಕ್ಕೆ ಬರಬೇಕು! ಕೈತುಂಬ ಹಣ ಬೇಕು! 'ಸಾವಿರಗಟ್ಟಲೆ ವೆಚ್ಚಮಾಡಿ ವಿದ್ಯೆ ಕಲಿಯಲು ಹಣವಿರುತ್ತಿದ್ದರೆ ಈ ವೇಸಾಯವೇ ಬೇಡವಾಗಿತ್ತಲ್ಲ!' ಎಂದು ಕೆಲ ಕೃಷಿಕರ ಅಂಬೋಣ. ಅಹುದು! ನೀಗಿಲ ಮನೆಯೊಂದನ್ನು ತರಲೂ ಹಣವಿಲ್ಲವೆಂದು ಗೋಳಿಡುವ ಬಡಪಾಯಿಯು ವಿದ್ಯೆಯನ್ನೆಂತು ಕಲಿಯುವನು? ಏನೋ ಒಂದು ನಾಲ್ಕೈದನೇ ತರಗತಿಯು ಪರೀಗಾದರೂ ಕಲಿತುಬಿಡುವನೆಂದರೆ ಅದರಿಂದೇನೂ ಪ್ರಯೋಜನವಿಲ್ಲ; ವಿದ್ಯಾಭ್ಯಾಸವು ಪೂರ್ತಿಯಾಗಲಿಲ್ಲ. ಒಂದು ನೇಳೆ ವ್ಯಾಧಿಯಿಂದ ವಿದ್ಯೆಯನ್ನು ಕಲಿತು ಓದುಬರಹವನ್ನು ಆತನಿಯುತ್ತಿದ್ದರೂ ಅದರಿಂದ ಅಲ್ಪ ಸ್ವಲ್ಪ ಜ್ಞಾನವನ್ನು ಪಡೆಯುತ್ತಿದ್ದರೂ, 'ಜೊತ್ತಾರ ಎದ್ದು ಹೊತು ಸೋತು ಹೋಗುವವನಿಗೆ ಈ ಅಲ್ಪ ವಿದ್ಯೆಯೇಕೆ?' ಎಂದನ್ನುವ ರೈತರೇ ಬಹಳ!

ಹೀಗೆ ಬೊಕ್ಕಿಸ ಹಣದಲ್ಲಿಯ ಪ್ರಯೋಜನಕ್ಕೆ ಬಾರದ ಎಷ್ಟೋ ದುಷ್ಟಟಗಳಿಗೆ ಒಲಿಬಿದ್ದು, 'ಬಾವಿಗೆ ಬಿದ್ದಲ್ಲೂ ಕಷ್ಟ' ಎಂಬಂತೆ ಬಲು ಕಷ್ಟಕ್ಕೆ ಈಡಾಗುವನು. ಸಂಜೆಯಾದರೂ ಕಳ್ಳಂಗಡಿಗೆ ಹೋಗದೆ ನಿವಾ ಹವೇ ಇಲ್ಲ! 'ಊಟ ಇಲ್ಲದಿದ್ದರೂ ಚಿಂತೆಲ್ಲ; ಆಟವನ್ನ ಬಿಡಲು ಸಾಧ್ಯವಿಲ್ಲ!' ಎನ್ನುವವರೇ ಹಲವರು. ಕಳ್ಳಂಗಡಿಯಿಲ್ಲದಿದ್ದರೆ ಪರ ಬಟಂಗಡಿಯ ಪ್ರಸಾದವನ್ನಾದರೂ ಪಡೆಯಬೇಕು! ಇದೇ ಜೀವನಸನ್ನಿವೇಶವನ್ನೇ ಅರ್ಥಾಭಾವಶಕ್ತರ ನೂರಿ, ತಮ್ಮ ಜೀವಿತವನ್ನೇ ವ್ಯಯಗೊಳಿಸುವರು.

ಇನ್ನೊಂದು ನೋಷಕ್ಕು. ಹೊಂಗಸರೆಂದಿಲ್ಲ, ಗಂಡಸರೆಂದಿಲ್ಲ ಎಲ್ಲರೂ ಇದರ ಸೇವಕರು ಭಜನೆ ಮಂದಿಲೆ ಸ್ಥಾಪಿಸಿ, ಗಜಾನನನಿಗೆ ಕೈಯ್ಯಮ್ಮಗು ಬ್ರಹ್ಮಣರೂ ನೋಷಕ್ಕೆಗೆ ಶರಣು ಎಂದ ಬಳಿಕ ಉಳಿದವರು ಷಂಡೇನು?

ನಾಗರಿಕತೆ ಹೊಂದಿ, ನವಸುಧಾರಣೆಯ ಅನುಭವ ಪಡೆದ ಶಿಕ್ಷಿತ ಬಂಧುಗಳು ಮುಂದಾಗಬೇಕು. ತಮ್ಮ ಅಶಿಕ್ಷಿತ ಸಹೋದರರಿಗೆ ವಿದ್ಯಾದಾನವನ್ನು, ಅವರಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಬೇಕು. ಈಗ ಇರುವ ನಿದ್ದೆಯ ಅವಲಿನಿಂದ ಅವರನ್ನು ಹೊಡೆದಬ್ಬಿಸಬೇಕು. ಅವರಿಗೆ ಅಂಟಿಕೊಂಡಿದ್ದ ದುರ್ಜ್ಯಸನಗಳನ್ನು ಹೋಗಲಾಡಿಸುವ-ಹೃದಯಕ್ಕೆ ನಾಟುವ ಬೋಧನೆ ಅತ್ಯವಶ್ಯ. ಹಳ್ಳಿಗಳಲ್ಲಿ ಅಲ್ಲಲ್ಲಿ ರಾತ್ರಿ ಶಾಲೆಗಳನ್ನಸ್ಥೀತಿಗೆ ವಿದ್ಯೆ ಕಲಿಸುವ ಶಾಲೆಗಳನ್ನೋ ತೆರೆದು, ಸಾಧ್ಯವಾದಷ್ಟು ಮಟ್ಟಿಗೆ ಅಕ್ಷರ ಜ್ಞಾನ, ವಸ್ತು ಜ್ಞಾನ ಅವರಿಗೆ ಮಾಡಿಸಿಕೊಡಬೇಕು. ಒಮ್ಮೆ ಅವರು ವಿದ್ಯಾವಂತರಾದರೆಂದರೆ ಅವರ ಜೀವನ ಬೆಳಗುವುದಾರಿ ಅವರಿಗೆ ತಾನಾಗಿ ತೋಚದಿರದು.

'ನ. ಭಾ.'

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

Regd No. M. 1550.
KODAGU MERCARA. (Coorg)

# ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಳಿಪ್ಪ, ವಾರ್ಷಿಕ ಚಂದಾ ರೂ: ೪-೮-೦.

ಸಂಪುಟ ೨೩ | ತಾರೀಕು ೧೧—೫—೧೯೪೫ನೇ ಶುಕ್ರವಾರ. | ಸಂಖ್ಯೆ ೪೮

## ಜರ್ಮನಿಯ ವೀರ ನಾಯಕನು ಕಣ್ಮರೆಯಾದ.

ಹಿಟ್ಲರನು ಸತ್ತನು ಕೊನೆಗೂಮ್ಮ ಪ್ರಜಾಪ್ರಭುತ್ವ, ಸಾಮ್ರಾಜ್ಯವಾದ, ಏಗತ್ತಿನ ಶಾಂತಿ ಭಗ್ನ ಮಾಡುತ್ತಿರುವುದು ಮುಂತಾದ ಸಂಖ್ಯ ರಾಷ್ಟ್ರಗಳೆಲ್ಲ ಬೊಟ್ಟು ಮಾಡಿ ತೋರಿಸಿ ದಾಳಿಮಾಡಿದ ಜರ್ಮನಿಯು ನಿರೀಕ್ಷಿಸಿದಂತೆ ಇಷ್ಟು ದೀರ್ಘಕಾಲ ಹಿಡಿದು ನಿಲ್ಲಲಾಗಲಿಲ್ಲ. ಅಮೆರಿಕದ ಸಹಾಯ ಪಡೆದ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ರಾಷ್ಟ್ರಗಳು ಜರ್ಮನಿಯ ಮೇಲೆ ಬಿದ್ದು ಅದನ್ನು ಸೋಲಿಸಿ ಅಲ್ಲಿಯ ಸರ್ವಾಧಿಕಾರಿ ಹಿಟ್ಲರನ ಪ್ರಾಣವನ್ನು ತೆಗೆಯಲು ಸಾಧ್ಯವಾಗಿದ್ದರೂ ಅವರಿಗೆ ಅಷ್ಟು ಸುಲಭವಾಗಿ ಜರ್ಮನಿಯನ್ನು ಸೋಲಿಸಲು ಸಾಧ್ಯವಾಗಿರಲಿಲ್ಲ. ಜರ್ಮನಿಯ ಸೈನ್ಯ ಬಲ ಮತ್ತು ಯುದ್ಧ ಸಾಮಗ್ರಿಗಳ ಬಲ ಅಷ್ಟು ಅಧಿಕವಾಗಿತ್ತು. ಜರ್ಮನಿಯ ಸೈನ್ಯ ಬಲ ಮತ್ತು ಯುದ್ಧ ಸಾಮಗ್ರಿಗಳ ಬಲ ಅಷ್ಟು ಅಧಿಕವಾಗಿತ್ತು. ಜರ್ಮನಿಯ ಸೈನ್ಯ ಬಲ ಮತ್ತು ಯುದ್ಧ ಸಾಮಗ್ರಿಗಳ ಬಲ ಅಷ್ಟು ಅಧಿಕವಾಗಿತ್ತು.

ಜರ್ಮನಿಯ ವೀರ ನಾಯಕನು ಕಣ್ಮರೆಯಾದ. ಹಿಟ್ಲರನು ಸತ್ತನು ಕೊನೆಗೂಮ್ಮ ಪ್ರಜಾಪ್ರಭುತ್ವ, ಸಾಮ್ರಾಜ್ಯವಾದ, ಏಗತ್ತಿನ ಶಾಂತಿ ಭಗ್ನ ಮಾಡುತ್ತಿರುವುದು ಮುಂತಾದ ಸಂಖ್ಯ ರಾಷ್ಟ್ರಗಳೆಲ್ಲ ಬೊಟ್ಟು ಮಾಡಿ ತೋರಿಸಿ ದಾಳಿಮಾಡಿದ ಜರ್ಮನಿಯು ನಿರೀಕ್ಷಿಸಿದಂತೆ ಇಷ್ಟು ದೀರ್ಘಕಾಲ ಹಿಡಿದು ನಿಲ್ಲಲಾಗಲಿಲ್ಲ. ಅಮೆರಿಕದ ಸಹಾಯ ಪಡೆದ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ರಾಷ್ಟ್ರಗಳು ಜರ್ಮನಿಯ ಮೇಲೆ ಬಿದ್ದು ಅದನ್ನು ಸೋಲಿಸಿ ಅಲ್ಲಿಯ ಸರ್ವಾಧಿಕಾರಿ ಹಿಟ್ಲರನ ಪ್ರಾಣವನ್ನು ತೆಗೆಯಲು ಸಾಧ್ಯವಾಗಿದ್ದರೂ ಅವರಿಗೆ ಅಷ್ಟು ಸುಲಭವಾಗಿ ಜರ್ಮನಿಯನ್ನು ಸೋಲಿಸಲು ಸಾಧ್ಯವಾಗಿರಲಿಲ್ಲ. ಜರ್ಮನಿಯ ಸೈನ್ಯ ಬಲ ಮತ್ತು ಯುದ್ಧ ಸಾಮಗ್ರಿಗಳ ಬಲ ಅಷ್ಟು ಅಧಿಕವಾಗಿತ್ತು. ಜರ್ಮನಿಯ ಸೈನ್ಯ ಬಲ ಮತ್ತು ಯುದ್ಧ ಸಾಮಗ್ರಿಗಳ ಬಲ ಅಷ್ಟು ಅಧಿಕವಾಗಿತ್ತು.

ಜರ್ಮನಿಯ ವೀರ ನಾಯಕನು ಕಣ್ಮರೆಯಾದ. ಹಿಟ್ಲರನು ಸತ್ತನು ಕೊನೆಗೂಮ್ಮ ಪ್ರಜಾಪ್ರಭುತ್ವ, ಸಾಮ್ರಾಜ್ಯವಾದ, ಏಗತ್ತಿನ ಶಾಂತಿ ಭಗ್ನ ಮಾಡುತ್ತಿರುವುದು ಮುಂತಾದ ಸಂಖ್ಯ ರಾಷ್ಟ್ರಗಳೆಲ್ಲ ಬೊಟ್ಟು ಮಾಡಿ ತೋರಿಸಿ ದಾಳಿಮಾಡಿದ ಜರ್ಮನಿಯು ನಿರೀಕ್ಷಿಸಿದಂತೆ ಇಷ್ಟು ದೀರ್ಘಕಾಲ ಹಿಡಿದು ನಿಲ್ಲಲಾಗಲಿಲ್ಲ. ಅಮೆರಿಕದ ಸಹಾಯ ಪಡೆದ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ರಾಷ್ಟ್ರಗಳು ಜರ್ಮನಿಯ ಮೇಲೆ ಬಿದ್ದು ಅದನ್ನು ಸೋಲಿಸಿ ಅಲ್ಲಿಯ ಸರ್ವಾಧಿಕಾರಿ ಹಿಟ್ಲರನ ಪ್ರಾಣವನ್ನು ತೆಗೆಯಲು ಸಾಧ್ಯವಾಗಿದ್ದರೂ ಅವರಿಗೆ ಅಷ್ಟು ಸುಲಭವಾಗಿ ಜರ್ಮನಿಯನ್ನು ಸೋಲಿಸಲು ಸಾಧ್ಯವಾಗಿರಲಿಲ್ಲ. ಜರ್ಮನಿಯ ಸೈನ್ಯ ಬಲ ಮತ್ತು ಯುದ್ಧ ಸಾಮಗ್ರಿಗಳ ಬಲ ಅಷ್ಟು ಅಧಿಕವಾಗಿತ್ತು. ಜರ್ಮನಿಯ ಸೈನ್ಯ ಬಲ ಮತ್ತು ಯುದ್ಧ ಸಾಮಗ್ರಿಗಳ ಬಲ ಅಷ್ಟು ಅಧಿಕವಾಗಿತ್ತು.

ಜರ್ಮನಿಯ ವೀರ ನಾಯಕನು ಕಣ್ಮರೆಯಾದ. ಹಿಟ್ಲರನು ಸತ್ತನು ಕೊನೆಗೂಮ್ಮ ಪ್ರಜಾಪ್ರಭುತ್ವ, ಸಾಮ್ರಾಜ್ಯವಾದ, ಏಗತ್ತಿನ ಶಾಂತಿ ಭಗ್ನ ಮಾಡುತ್ತಿರುವುದು ಮುಂತಾದ ಸಂಖ್ಯ ರಾಷ್ಟ್ರಗಳೆಲ್ಲ ಬೊಟ್ಟು ಮಾಡಿ ತೋರಿಸಿ ದಾಳಿಮಾಡಿದ ಜರ್ಮನಿಯು ನಿರೀಕ್ಷಿಸಿದಂತೆ ಇಷ್ಟು ದೀರ್ಘಕಾಲ ಹಿಡಿದು ನಿಲ್ಲಲಾಗಲಿಲ್ಲ. ಅಮೆರಿಕದ ಸಹಾಯ ಪಡೆದ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ರಾಷ್ಟ್ರಗಳು ಜರ್ಮನಿಯ ಮೇಲೆ ಬಿದ್ದು ಅದನ್ನು ಸೋಲಿಸಿ ಅಲ್ಲಿಯ ಸರ್ವಾಧಿಕಾರಿ ಹಿಟ್ಲರನ ಪ್ರಾಣವನ್ನು ತೆಗೆಯಲು ಸಾಧ್ಯವಾಗಿದ್ದರೂ ಅವರಿಗೆ ಅಷ್ಟು ಸುಲಭವಾಗಿ ಜರ್ಮನಿಯನ್ನು ಸೋಲಿಸಲು ಸಾಧ್ಯವಾಗಿರಲಿಲ್ಲ. ಜರ್ಮನಿಯ ಸೈನ್ಯ ಬಲ ಮತ್ತು ಯುದ್ಧ ಸಾಮಗ್ರಿಗಳ ಬಲ ಅಷ್ಟು ಅಧಿಕವಾಗಿತ್ತು. ಜರ್ಮನಿಯ ಸೈನ್ಯ ಬಲ ಮತ್ತು ಯುದ್ಧ ಸಾಮಗ್ರಿಗಳ ಬಲ ಅಷ್ಟು ಅಧಿಕವಾಗಿತ್ತು.

## ಬಡವರ ಕಾಮಧೇನು ಕಾಂಗ್ರೆಸಿಗೆ ಓಟು ಕೊಡಿರಿ.

# ಕೊ ಡ ಗು

ತಾ. ೧೧-೫-೧೯೪೫ನೇ ಶುಕ್ರವಾರ


## ಯೂರೋಪಿನಲ್ಲಿ ಯುದ್ಧ ಮುಕ್ತಾಯ.

ಬ್ರಿಟಿಷ ಸೆಪ್ಟೆಂಬರಿಗೆ ಯುದ್ಧವು ಪ್ರಾರಂಭವಾಗಿ ಆರು ವರ್ಷಗಳಾಗುವವು. ಈ ಘೋರತರವಾದ ಜಾಗತಿಕ ಯುದ್ಧವು ಈಗ ಯೂರೋಪಿನ ರಣರಂಗದಲ್ಲಿ ಮುಕ್ತಾಯಗೊಂಡಿದೆ. ಜರ್ಮನರು ಮಿತ್ರ ಮಂಡಳಿಯವರ ಆಪಾರ ಶಕ್ತಿಗೆ ಶರಣಾಗತರಾಗಿರುವರು. ಪ್ರಾಮುಖ್ಯ ಕ್ಷೇತ್ರದಲ್ಲಿ ಯುದ್ಧವು ಅಂತ್ಯವಾದರೂ ಪೂರ್ವದಲ್ಲಿ ಜಪಾನರ ಕದನವು ನಡೆಯುತ್ತಲೇ ಇದೆ. ತದರಿ ಬಲಾಢ್ಯ ಜನಾಂಗಗಳ ಸಮಗ್ರ ಶಕ್ತಿಯ ಮುಂದೆ ಜಪಾನೊಂದಕ್ಕೇ ಧೀರ್ಘಕಾಲ ಸ್ಪರ್ಧಿಸಲು ಸಾಧ್ಯವಾಗಲಾರದೆಂದು ತೋರುತ್ತದೆ.

